ದೆಹಲಿ ಕರ್ನಾಟಕ ಸಂಘದ

# ಅಭಿಮತ

ಮೇ 2026 । ಬೆಲೆ ರೂ.1



## ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ

# ಕರ್ನಾಟಕದ ಪದ್ಮ ಪ್ರಶಸ್ತಿ ಪುರಸ್ಕೃತರಿಗೆ ದೆಹಲಿ ಕರ್ನಾಟಕ ಸಂಘದ ಅಭಿನಂದನೆ



2026ನೇ ವರ್ಷದ ಪದ್ಮ ಪ್ರಶಸ್ತಿಗಳನ್ನು ಪಡೆಯುವಲ್ಲಿ ನಮ್ಮ ಕರ್ನಾಟಕ ಮುಂಚೂಣಿಯಲ್ಲಿರುವುದು ಕನ್ನಡಿಗರೆಲ್ಲರಿಗೂ ಸಂತಸ ಹಾಗೂ ಸಂಭ್ರಮದ ವಿಷಯ. ಈ ಬಾರಿ ಈ ಪ್ರಶಸ್ತಿಗೆ ಭಾಜನರಾಗಿರುವ ಇವರು ತಮ್ಮ ತಮ್ಮ ಕ್ಷೇತ್ರದಲ್ಲಿ ಕ್ಷೇತ್ರದಲ್ಲಿ ಅತ್ಯುತ್ತಮ ಕಾರ್ಯ ಮಾಡುವ ಮೂಲಕ ರಾಷ್ಟ್ರದ ಗಮನ ಸೆಳೆದಿದ್ದಾರೆ.

ಪದ್ಮ ಪುರಸ್ಕಾರಕ್ಕೆ ಭಾಜನರಾದ ಶ್ರೀ ಶತಾವಧಾನಿ ಆರ್. ಗಣೇಶ್ (ಪದ್ಮಭೂಷಣ–ಕಲಾಕ್ಷೇತ್ರ), ಡಾ. ಎಸ್.ಜಿ. ಸುಶೀಲಮ್ಮ (ಪದ್ಮಶ್ರೀ–ಸಮಾಜಸೇವೆ) ಶ್ರೀ ಅಂಕೆ ಗೌಡ ಎಂ. (ಪದ್ಮಶ್ರೀ–ಸಮಾಜಸೇವೆ)

**ಡಾ. ಶತಾವಧಾನಿ ಆರ್ ಗಣೇಶ್** ಅವರು ಕನ್ನಡ, ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಗಳ ವಿದ್ವಾಂಸರಾಗಿದ್ದು, ಶತಾವಧಾನ ಎಂಬ ಅಪರೂಪದ ಬೌದ್ಧಿಕ ಕಲೆಯನ್ನು ಜನಪ್ರಿಯಗೊಳಿಸಿದ ಪ್ರಮುಖ ವ್ಯಕ್ತಿಗಳಲ್ಲಿ ಒಬ್ಬರು. ಅವಧಾನ ಪ್ರದರ್ಶನಗಳ ಜೊತೆಗೆ ಅವರು ಕವಿ, ಲೇಖಕ, ಭಾಷಣಕಾರ, ಅನುವಾದಕ ಮತ್ತು ಅಧ್ಯಾಪಕರಾಗಿಯೂ ವಿಶಿಷ್ಟ ಸೇವೆ ಸಲ್ಲಿಸಿದ್ದಾರೆ. ಅವರ ಸಾಧನೆ ಕನ್ನಡದ ಸಾಹಿತ್ಯ ಮತ್ತು ಭಾರತೀಯ ಜ್ಞಾನಪರಂಪರೆಯ ಗೌರವವನ್ನು ರಾಷ್ಟ್ರೀಯ ಮಟ್ಟದಲ್ಲಿ ಎತ್ತಿ ಹಿಡಿದಿದೆ.



**ಡಾ. ಜಿ. ಸುಶೀಲಮ್ಮ** ಬೆಂಗಳೂರಿನ ಖ್ಯಾತ ಸಮಾಜ ಸೇವಕಿಯಾಗಿದ್ದು, ಅನಾಥರು ಮತ್ತು ನಿರ್ಗತಿಕರ ಪಾಲಿನ ಆಶಾಕಿರಣವಾದ "ಸುಮಂಗಲಿ ಸೇವಾ ಆಶ್ರಮ"ದ ಸಂಸ್ಥಾಪಕ ಅಧ್ಯಕ್ಷರಾಗಿದ್ದಾರೆ. ಸಮಾಜಸೇವೆಯಲ್ಲಿ ಅವರು ಸಲ್ಲಿಸಿರುವ 50ಕ್ಕೂ ಹೆಚ್ಚು ವರ್ಷಗಳ ನಿಸ್ವಾರ್ಥ ಸೇವೆಗಾಗಿ ಇವರಿಗೆ ದೇಶದ ಪ್ರತಿಷ್ಠಿತ 'ಪದ್ಮಶ್ರೀ' ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.

ಮಂಡ್ಯ ಜಿಲ್ಲೆಯ ಪಾಂಡವಪುರದ ಪದ್ಮಶ್ರೀ ಪುರಸ್ಕೃತ **ಶ್ರೀ ಎಂ. ಅಂಕೇ ಗೌಡ**ರು ತಮ್ಮ ಇಡೀ ಜೀವನದ ಸಂಪಾದನೆಯನ್ನು ವಿನಿಯೋಗಿಸಿ 20 ಲಕ್ಷಕ್ಕೂ ಅಧಿಕ ಪುಸ್ತಕಗಳನ್ನು ಸಂಗ್ರಹಿಸಿರುವ 'ಪುಸ್ತಕ ಮನೆ'ಯ ರೂವಾರಿ. ಅವರು ಯಾವುದೇ ಲಭ್ಯ ಲಾಭದ ಅಪೇಕ್ಷೆಯಿಲ್ಲದೆ ಉಚಿತವಾಗಿ ಸಾರ್ವಜನಿಕರಿಗೆ ಓದಲು ಮತ್ತು ಎರವಲು ಪಡೆಯಲು ಅವಕಾಶ ಕಲ್ಪಿಸಿದ್ದಾರೆ. ಸಾಹಿತ್ಯ ಮತ್ತು ಶಿಕ್ಷಣ ಕ್ಷೇತ್ರಕ್ಕೆ ಅವರು ನೀಡಿರುವ ಅದ್ಭುತ ಕೊಡುಗೆಯನ್ನು ಗುರುತಿಸಿ ಅವರಿಗೆ ಭಾರತ ಸರ್ಕಾರವು ಪ್ರತಿಷ್ಠಿತ 'ಪದ್ಮಶ್ರೀ' ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.



ಗೌರವ ಮತ್ತು ಪ್ರಶಸ್ತಿ ಸ್ವೀಕರಿಸಲು ದೆಹಲಿಗೆ ಬಂದಂತಹ ಮಹನೀಯರನ್ನು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ರೇಣುಕುಮಾರ್ ಆರ್., ಪ್ರಧಾನ ಕಾರ್ಯದರ್ಶಿ ಶ್ರೀ ರಾಧಾಕೃಷ್ಣ ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರುಗಳು ದೆಹಲಿ ಕನ್ನಡಿಗರ ಪರವಾಗಿ ಅಭಿನಂದಿಸಿ ಗೌರವಿಸಿದರು.❑

ದೆಹಲಿ ಕರ್ನಾಟಕ ಸಂಘದ
# ಅಭಿಮತ

ಸಂಪುಟ 36 । ಸಂಚಿಕೆ 8
ಮೇ -2026

ಪ್ರಧಾನ ಸಂಪಾದಕರು
ರೇಣುಕಾ ನಿಡಗುಂದಿ
ಸಂಪಾದಕ ಮಂಡಳಿ
ಚಂದ್ರಶೇಖರ ಎನ್.ಪಿ.
ಸಂತೋಷ್ ಕುಮಾರ್ ಉಪಾಧ್ಯಾಯ
ಪ್ರಕಾಶ್ ಶೆಟ್ಟಿ ಉಳೆಪಾಡಿ
ಹರಿಪ್ರಿಯ ಎಸ್.
ಪ್ರಸಾದ್ ನಾಯ್ಕ್
ನಟರಾಜ್ ಸಿ.

ದೆಹಲಿ ಕರ್ನಾಟಕ ಸಂಘದ
ಕಾರ್ಯಕಾರಿ ಸಮಿತಿ-2026-28

ಅಧ್ಯಕ್ಷರು
ರೇಣುಕುಮಾರ್ ಆರ್.
9868393953
ಉಪಾಧ್ಯಕ್ಷರು
ವಸಂತ ಶೆಟ್ಟಿ ಬೆಳ್ಳಾರೆ
9958697823
ಶೋಭಾ ಗೌಡ
8800588150
ಪ್ರಧಾನ ಕಾರ್ಯದರ್ಶಿ
ರಾಧಾಕೃಷ್ಣ
9818252183
ಖಜಾಂಚಿ
ಆಶಾಲತಾ ಎಂ.
9891249149
ಜಂಟಿ ಕಾರ್ಯದರ್ಶಿಗಳು
ಸಂತೋಷ ಜಿ.
9911235783
ಅಶ್ವಿನಿ ಬಿ.ಎಸ್.
9036235665
ಸಮಿತಿ ಸದಸ್ಯರು
ಮೂಜಾ ಪಿ. ರಾವ್
9810882498
ಶಿವಪ್ಪ ಎಂ.
9868159328
ಡಾ. ವೆಂಕಟಾಚಲ ಜಿ. ಹೆಗಡೆ
9312712476
ಡಾ. ಎಂ.ಎಸ್. ಶಶಿ ಕುಮಾರ್
9811689327
ನಾರಾಯಣ ಬಿ.
9868393978
ಕೃಷ್ಣಪ್ಪ ಎಂ.
9911156695
ಜಯಶ್ರೀ ಬಸವರಾಜು ಬಿ.ಕೆ.
9560760341
ಶುಭಾ ದೇವಿಪ್ರಸಾದ್
9319762969
ಆರ್. ಹರಿಕೃಷ್ಣ
9971518457
ರಾಜಕುಮಾರ್
9911150475

## ಸಂಪಾದಕೀಯ...

"ಇವನಾರವ ಇವನಾರವ ಇವನಾರವನೆನ್ನದೆ, ಇವ ನಮ್ಮವ ಇವ ನಮ್ಮವ ಇವ ನಮ್ಮವನೆನ್ನಿ..." ಎಂದು ಇಡೀ ಜಗತ್ತಿಗೆ ಸಮಾನತೆ ಮತ್ತು ಸದಾಚಾರದ ಪಾಠ ಹೇಳಿಕೊಟ್ಟ ಮಹಾತ್ಮ ಬಸವಣ್ಣನವರ ಜಯಂತಿಯನ್ನು ಆಚರಿಸುತ್ತಿರುವ ಹೊತ್ತಿನಲ್ಲೇ, ಕರ್ನಾಟಕದಿಂದ ಹಿಡಿದು ದೇಶದ ರಾಜಧಾನಿ ದೆಹಲಿಯವರೆಗೆ ವಿದ್ಯಾರ್ಥಿಗಳ ಹಾಗೂ ಯುವ ಸಮುದಾಯದ ಭವಿಷ್ಯದ ಅಸ್ತಿತ್ವದ ದೊಡ್ಡ ಸಮರವೇ ಜರುಗುತ್ತಿದೆ. ಒಂದು ಕಡೆ ಅಧಿಕಾರ ಉಳಿಸಿಕೊಳ್ಳಲು ದೆಹಲಿ ಅಂಗಳದಲ್ಲಿ ಹಗ್ಗಜಗ್ಗಾಟ ನಡೆಸುತ್ತಿರುವ ರಾಜಕಾರಣಿಗಳಾದರೆ, ಇನ್ನೊಂದೆಡೆ ಇಡೀ ಶಿಕ್ಷಣ ವ್ಯವಸ್ಥೆಯ ಲೋಪಗಳ ವಿರುದ್ಧ ಬೀದಿಗಿಳಿದು ನ್ಯಾಯ ಕೇಳುತ್ತಿರುವ ಯುವಶಕ್ತಿ.

ಮೇ 1 ಅಂತಾರಾಷ್ಟ್ರೀಯ ಕಾರ್ಮಿಕರ ದಿನಾಚರಣೆ. ಬಂಡವಾಳಶಾಹಿ ಜಗತ್ತಿನ ಕಪಿಮುಷ್ಟಿಯಿಂದ ಎಂಟು ಗಂಟೆಗಳ ಕೆಲಸದ ಹಕ್ಕಿಗಾಗಿ ಅಂದು ಚಿಕಾಗೋದ ಬೀದಿಗಳಲ್ಲಿ ಕಾರ್ಮಿಕರು ನಡೆಸಿದ ಹೋರಾಟವೇ ಇಂದಿನ ಕಾರ್ಮಿಕ ದಿನಾಚರಣೆಯ ಅಡಿಪಾಯ. ಆದರೆ, ಶತಮಾನದ ನಂತರವೂ ಕಾರ್ಮಿಕರ ಸ್ಥಿತಿ ಬದಲಾಗಿಲ್ಲ ಎಂಬುದಕ್ಕೆ ಇತ್ತೀಚೆಗೆ ಕನಿಷ್ಠ ವೇತನ ಮತ್ತು ಮೂಲಭೂತ ಹಕ್ಕುಗಳಿಗಾಗಿ ನೋಯ್ಡಾದ ಫೇಸ್-2, ಸೆಕ್ಟರ್ 62 ಕೈಗಾರಿಕಾ ವಲಯದಲ್ಲಿ ಕಾರ್ಮಿಕರು ನಡೆಸಿದ ಭೀಕರ ಆಂದೋಲನ ಹಾಗೂ ಬಂಧನಗಳೇ ಸಾಕ್ಷಿ.

ಅಹಿಂದ ವರ್ಗದ ಪ್ರಬಲ ನಾಯಕರಾಗಿ, ಸುದೀರ್ಘ ರಾಜಕೀಯ ಇತಿಹಾಸ ಹೊಂದಿರುವ ಮುಖ್ಯಮಂತ್ರಿ ಸಿದ್ಧರಾಮಯ್ಯನವರ ರಾಜೀನಾಮೆ, ಹೈಕಮಾಂಡ್ ಸಂಧಾನ ಸಭೆಗಳು ಸುತ್ತಲಿನ ನಾಟಕೀಯ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಕರ್ನಾಟಕ ರಾಜಕೀಯ ಇತಿಹಾಸ ಮತ್ತೊಂದು ಮಹತ್ವದ ತಿರುವು ಪಡೆದುಕೊಂಡಿದೆ. ದೇಶದ ಅತ್ಯಂತ ಪ್ರತಿಷ್ಠಿತ ಪರೀಕ್ಷೆಗಳಾದ NEET, CBSE ಮತ್ತು CUET ಗಳಲ್ಲಿ ಸಾಲುಸಾಲಾಗಿ ಕೇಳಿಬರುತ್ತಿರುವ ಪ್ರಶ್ನೆಪತ್ರಿಕೆ ಸೋರಿಕೆ, CBSE ಮೌಲ್ಯ ಮಾಪನದಲ್ಲಿನ ಅವ್ಯವಸ್ಥೆ ಮತ್ತು ಅಕ್ರಮಗಳ ಹಗರಣಗಳು ಆತಂಕ ಹುಟ್ಟಿಸಿವೆ. ವರ್ಷಗಟ್ಟಲೆ ರೂಮಿನಲ್ಲಿ ಕುಳಿತು ಹಗಲಿರುಳು ಕಷ್ಟಪಟ್ಟು ಓದುವ ಪ್ರತಿಭಾವಂತ ವಿದ್ಯಾರ್ಥಿಗಳ ಭವಿಷ್ಯವನ್ನು ದಲ್ಲಾಳಿಗಳು ಮತ್ತು ಭ್ರಷ್ಟ ಅಧಿಕಾರಿಗಳು ಹರಾಜಿಗಿಟ್ಟಿರುವುದನ್ನು ವಿರೋಧಿಸಿ ಯುವಶಕ್ತಿ ಇಂದು ಬೀದಿಗಿಳಿದು ಪ್ರತಿಭಟಿಸುತ್ತಿದೆ. ದೇಶವನ್ನು ಮುನ್ನಡೆಸಬೇಕಾದ ವಿದ್ಯಾರ್ಥಿಗಳು ತಮಗಾದ ಅನ್ಯಾಯಕ್ಕೆ ನ್ಯಾಯ ಕೇಳಲು ದೆಹಲಿಯ ಬೀದಿಗಳಲ್ಲಿ ನಿಂತಿದ್ದಾರೆ!

ಸಮಾನತೆ, ಕಾಯಕ ಮತ್ತು ದಾಸೋಹದ ಸಂದೇಶವನ್ನು ಜಗತ್ತಿಗೆ ಸಾರಿದ ಮಹಾನ್ ಚಿಂತಕ ಬಸವಣ್ಣ ಅನುಭವ ಮಂಟಪದ ಮೂಲಕ ಪ್ರಜಾಸತ್ತಾತ್ಮಕ ಸಂವಾದದ ಪರಂಪರೆಯನ್ನು ಬೆಳೆಸಿದವರು. ಅವರ ಆದರ್ಶಗಳು ಇಂದಿಗೂ ಸಾಮಾಜಿಕ ನ್ಯಾಯ ಮತ್ತು ಮಾನವೀಯ ಮೌಲ್ಯಗಳಿಗೆ ದಾರಿದೀಪವಾಗಿವೆ ದೇಶದ ಪ್ರತಿಯೊಬ್ಬ ವಿದ್ಯಾರ್ಥಿ ಹಾಗೂ ಕಾಯಕಜೀವಿ ಕಾರ್ಮಿಕರ ಬದುಕಿನಲ್ಲಿ ಸಮಾನತೆಯ ಹೊಸ ಮುಂಗಾರಿನ ಚಿಗುರು ಮೂಡಬೇಕಾದರೆ ಆಡಳಿತಗಾರರ ಮನಸ್ಸಿನಲ್ಲಿ 'ಬುದ್ಧ ಬಸವಣ್ಣನ ಅರಿವು ಬೆಳಕಾಗಬೇಕಿದೆ'. ಆ ಅರಿವಿನ ಬೆಳಕೊಂದೇ ಇಂದಿನ ಬರಡಾದ ವ್ಯವಸ್ಥೆಯನ್ನು ಹಸಿರಾಗಿಸಬಲ್ಲ ಏಕೈಕ ದಾರಿದೀಪ."

ಜಗತ್ಪ್ರಸಿದ್ಧ ಸಾಹಿತಿ ಫ್ರಾಂಜ್ ಕಾಫ್ಕಾನ 'ರೂಪಾಂತರ' (The Metamorphosis) ಕಥೆ ನೆನಪಾಗುತ್ತದೆ. ಕಾಫ್ಕಾನ ಕಥೆಯಲ್ಲಿ ಕಷ್ಟಪಟ್ಟು ದುಡಿಯುವ ಗ್ರೇಗರ್ ಎಂಬ ಮನುಷ್ಯ ಒಂದು ದಿನ ಬೆಳಿಗ್ಗೆ ಹಠಾತ್ತನೆ ಅಸಹ್ಯಕರ 'ದೈತ್ಯ ಕೀಟ'ವಾಗಿ (ಜಿರಳೆಯಂತೆ) ರೂಪಾಂತರಗೊಳ್ಳುತ್ತಾನೆ. ಕಥಾನಾಯಕ ಗ್ರೇಗರ್ ಸ್ಯಾಮ್ಸಾ ದುಡಿಯುವವರೆಗೂ ಇಡೀ ಕುಟುಂಬ ಆತನನ್ನು ಗೌರವಿಸುತ್ತದೆ. ಆದರೆ, ಆತ ಕೀಟವಾಗಿ ರೂಪಾಂತರಗೊಂಡು ದುಡಿಯಲು ಅಸಮರ್ಥನಾದ ತಕ್ಷಣ, ಹೆತ್ತ ಪೋಷಕರು ಮತ್ತು ಪ್ರೀತಿಯ ತಂಗಿಗೂ ಆತ ಕೇವಲ ಒಂದು "ಅಸಹ್ಯಕರ ಹೊರೆ"ಯಾಗಿ ಕಾಣಿಸುತ್ತಾನೆ. ಮನುಷ್ಯನ ಆರ್ಥಿಕ ಸಾಮರ್ಥ್ಯ ಮುಗಿದ ತಕ್ಷಣ ಆತನ ಅಸ್ತಿತ್ವದ ಬೆಲೆಯೂ ಮುಗಿದು ಹೋಗುತ್ತದೆ ಅವನು ಕೀಟವಾದ ತಕ್ಷಣ ಅವನನ್ನು ಮೂಲೆಗೆ ತಳ್ಳಿ ಸಾಯುವಂತೆ ಮಾಡುತ್ತದೆ ಎಂಬುದು ಇದರ ಕಹಿ ಸತ್ಯ.

ಕಾರ್ಪೊರೇಟ್ ಜಗತ್ತಿನಲ್ಲಿ ಮನುಷ್ಯ ಹೇಗೆ ಯಾಂತ್ರಿಕವಾಗಿ ಕಳೆದುಹೋಗುತ್ತಿದ್ದಾನೆ ಎಂಬುದಕ್ಕೆ ಗ್ರೇಗರ್ ಸಾಕ್ಷಿ. ಆತ ಕೀಟವಾಗುವುದಕ್ಕಿಂತ ಮುಂಚೆಯೇ ದಿನವಿಡೀ ದುಡಿತ, ಪ್ರಯಾಣದಲ್ಲೇ ಕಳೆದು ಹೋಗಿ, ತನ್ನದೇ ಕುಟುಂಬದಲ್ಲಿ ಒಂಟಿಯಾಗಿದ್ದ. ಆತ ಕೀಟವಾದ ಮೇಲಂತೂ ಆತನ ಕೋಣೆಯೇ ಆತನಿಗೆ ಜೈಲಾಗುತ್ತದೆ. ಕೊನೆಗೆ ತನ್ನವರ ನಡುವೆಯೇ ಆತ ತೀವ್ರ ಒಂಟಿತನ ಮತ್ತು ಪರಕೀಯತೆಯಿಂದ ಸಾಯುತ್ತಾನೆ. ನಮ್ಮೆಲ್ಲರ ನಗರ ಜೀವನವೂ ಹೀಗೇ ಆಗಿಹೋಗಿದೆ.

ಕಾಫ್ಕಾನ ಕಥೆಯಲ್ಲಿ ಗ್ರೇಗರ್ ಸ್ಯಾಮ್ಸಾನಿಗೆ ತನ್ನದೇ ಕುಟುಂಬದಲ್ಲಿ ಕಣ್ಣೀರು ಒರೆಸುವ ಒಂದು ಜೀವ ಇರಲಿಲ್ಲ. ಆದರೆ, ಪುಸ್ತಕ ಪ್ರೇಮಿಗೆ ಪುಸ್ತಕಗಳೇ ಅತ್ಯಂತ ಪ್ರಾಮಾಣಿಕ ಸ್ನೇಹಿತರಾಗುತ್ತವೆ. ನಾವು ಒಂದೇ ಬದುಕಿನಲ್ಲಿ ನೂರಾರು ಜನ್ಮಗಳ ಅನುಭವವನ್ನು ಪಡೆಯಲು ಸಾಧ್ಯವಾಗುವುದು ಪುಸ್ತಕಗಳಿಂದ ಮಾತ್ರ. ಜಗತ್ತಿನ ಯಾವುದೋ ಮೂಲೆಯಲ್ಲಿ ಕುಳಿತು ಬರೆದ ಲೇಖಕನ ಚಿಂತನೆ ನಮ್ಮನ್ನು ಪ್ರಭಾವಿಸುತ್ತದೆ. ಮೂಢನಂಬಿಕೆಗಳ ಕತ್ತಲೆಯಿಂದ ಹೊರಬರಲು ಮತ್ತು ಪ್ರಶ್ನಿಸುವ ಮನೋಭಾವವನ್ನು ಬೆಳೆಸಿಕೊಳ್ಳಲು ಪುಸ್ತಕಗಳು ನಮಗೆ ಅಸ್ತ್ರಗಳಾಗುತ್ತವೆ.

ದೆಹಲಿ ಕರ್ನಾಟಕ ಸಂಘದಲ್ಲಿ ಲಕ್ಷಾಂತರ ಪುಸ್ತಕಗಳಿವೆ. ರಾಜಧಾನಿಯ ಕನ್ನಡಿಗರು ಓದುವ ಸದಭಿರುಚಿಯನ್ನು ಬೆಳೆಸಿಕೊಳ್ಳುವಂತೆ ಸಂಘವು ಕನ್ನಡದ ಅತ್ಯುತ್ತಮ ಲೇಖಕಕರ ಪುಸ್ತಕಗಳ ಓದು ಹಾಗೂ ಸಂವಾದ ಕಾರ್ಯಕ್ರಮಗಳನ್ನ ಹಮ್ಮಿಕೊಳ್ಳಬಹುದು. ಎರಡು ದಶಕಗಳ ಹಿಂದೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ 'ವಾಚನಾಭಿರುಚಿ' ಕಮ್ಮಟವನ್ನು ನಡೆಸಿತ್ತು. ಹೊಸ ಆಡಳಿತ ಮಂಡಳಿಯು ಮುಂಬರುವ ದಿನಗಳಲ್ಲಿ ಸಾಹಿತ್ಯಾಸಕ್ತ ಕನ್ನಡಿಗರಿಗೆ ಉಪಯೋಗವಾಗುವಂತಹ ಕಾವ್ಯ ಕಮ್ಮಟ, ರಂಗ ಶಿಬಿರ, ಕಥಾ ಕಮ್ಮಟದಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿ ಎಂದು ಆಶಿಸುತ್ತಾ... ❑

*ರೇಣುಕಾ ನಿಡಗುಂದಿ*

ಕಾವಲು ಸಮಿತಿ | ಶ್ರೀ ಎನ್.ಎ. ಮಾಧವ | ಶ್ರೀ ಎಂ.ವಿ. ವೆಂಕಟೇಶ್ | ಶ್ರೀಮತಿ ರಾಧಾ ಕೌಜಲಗಿ

## ನಾವು–ನೀವು

ಆತ್ಮೀಯರೇ ನಮಸ್ಕಾರ,

ಬೇಸಿಗೆ ದೆಹಲಿಯ ಕನ್ನಡಿಗರನ್ನು ತಮ್ಮ ತಮ್ಮ ಊರುಗಳಿಗೆ ತೆರಳುವಂತೆ ಮಾಡಿದೆ. ಹಾಗಾಗಿ, ಇದೀಗ ದೆಹಲಿಯ ಕನ್ನಡಿಗರಿಗೆ ನಿಜವಾದ ರಜೆ. ಬಿರು ಬೇಸಿಗೆಯಿಂದ ತುಸು ನೆಮ್ಮದಿ. ಕಳೆದ ತಿಂಗಳಿನಲ್ಲಿ ನಡೆದ ಹಲವು ಸಣ್ಣಪುಟ್ಟ ಕಾರ್ಯಕ್ರಮಗಳು, ದೆಹಲಿ ಕರ್ನಾಟಕ ಸಂಘದ ಹಿರಿಮೆಗೆ ಕಳೆಕಟ್ಟುವುದರೊಂದಿಗೆ, ರಾಷ್ಟ್ರದ ರಾಜಧಾನಿಯಲ್ಲಿ ದೆಹಲಿ ಕರ್ನಾಟಕ ಸಂಘದ ಮಹತ್ವವನ್ನು ಎತ್ತಿ ಹಿಡಿದ ಉದಾಹರಣೆಗಳಾಗಿವೆ.

ಮೊದಲನೆಯದಾಗಿ, ತಮ್ಮ ತಮ್ಮ ಕ್ಷೇತ್ರದಲ್ಲಿ ಮಾಡಿದ ಅವಿರತ ಕೃಷಿ ಹಾಗೂ ಸಾಧನೆಗಳಿಂದ ರಾಷ್ಟ್ರ ಹಾಗೂ ಭಾರತ ಸರ್ಕಾರದ ಗಮನ ಸೆಳೆದ ಮಹನೀಯರನ್ನು ಸನ್ಮಾನಿಸಿದ ಕ್ಷಣ. ಭಾರತದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ ಪದ್ಮ ಪ್ರಶಸ್ತಿ ಪುರಸ್ಕೃತರಾದ, ಹಾಗೂ ಅಸಾಧಾರಣ ಸಾಧನೆ ಮಾಡಿದ ವಿದ್ವಾಂಸರಾದ ಶ್ರೀ ಶತಾವಧಾನಿ ಗಣೇಶ, ಡಾ. ಎಸ್.ಜಿ. ಸುಶೀಲಮ್ಮ ಹಾಗೂ 'ಪುಸ್ತಕ ಮನೆಯ' ಅಂಕೇಗೌಡ ಇವರೆಲ್ಲರನ್ನು ಪ್ರಶಸ್ತಿ ಸ್ವೀಕರಿಸಿದ ನಂತರ ಸಂಘದ ಪರವಾಗಿ ಅಭಿನಂದಿಸಿದ ಕ್ಷಣ. ವಿಶ್ವದಾದ್ಯಂತ ಸಂಚರಿಸಿ ಭಗವಂತನ ಬಗ್ಗೆ ಅರಿವು ಮೂಡಿಸುವ ಕೈಂಕರ್ಯದಲ್ಲಿ ತೊಡಗಿರುವ ಉಡುಪಿಯ ಯತಿಕುಲ ಚಕ್ರವರ್ತಿ ಶ್ರೀ ಶ್ರೀ ಡಾ. ಸುಗುಣೇಂದ್ರ ಶ್ರೀಪಾದರ ಸಂಘದ ಭೇಟಿ, 'ನುಡಿದಂತೆ ನಡೆ ಹಾಗೂ ಕಾಯಕವೇ ಕೈಲಾಸ' ಎಂದು ಶ್ರಮಿಕ ಸಂಸ್ಕೃತಿಗೆ ದೈವತ್ವ ನೀಡಿದ, ಕರ್ನಾಟಕದ ಸಾಂಸ್ಕೃತಿಕ ನಾಯಕ, ಭಕ್ತಿ ಭಂಡಾರಿ ಬಸವಣ್ಣನವರ ಜಯಂತಿಯನ್ನು ನೂರಾರು ದೆಹಲಿ ಕನ್ನಡಿಗರೆಲ್ಲ ಸೇರಿ ಆಚರಿಸಿದ್ದು, ಜೊತೆಗೆ ವೃತ್ತಿಯಲ್ಲಿ ಮಾಸ್ತರರಾಗಿ, ಕನ್ನಡವನ್ನು ಜೀವಿಸುತ್ತಿರುವ, ಕನ್ನಡದ ಉಳಿವಿಗಾಗಿ ಶ್ರಮಿಸುತ್ತಿರುವ ಶಿಕ್ಷಣ ತಜ್ಞ ಅರವಿಂದ ಚೊಕ್ಕಾಡಿ ಅವರೊಂದಿಗೆ ಸಂವಾದ ಕಾರ್ಯಕ್ರಮ ಅರ್ಥಪೂರ್ಣವಾಗಿತ್ತು. ಮಿಸ್ ಯುನಿವರ್ಸ್ ಕರ್ನಾಟಕ ಸ್ಪರ್ಧೆಯ ತರಬೇತಿಗಾಗಿ ದೆಹಲಿಗೆ ಆಗಮಿಸಿರುವ ಕು. ಲೇಖನಾ ಹೆಗ್ಡೆ ಅವರಿಗೆ ಸಂಘದಿಂದ ಶುಭ ಹಾರೈಸಲಾಯಿತು. ತಮ್ಮನ್ನು ತಾವು ಅರಿತುಕೊಂಡು, ತಮ್ಮನ್ನು ಸಮಾಜದ ಏಳಿಗೆಗಾಗಿ ತೊಡಗಿಸಿಕೊಂಡ ಮಹನೀಯರನ್ನು ನೋಡುವ, ಅವರೊಂದಿಗೆ ಕಲೆಯುವ ಅವಕಾಶ ಇಷ್ಟು ಸುಲಭವಾಗಿ ದೊರಕುವುದು ನಮ್ಮೆಲ್ಲ ಕನ್ನಡಿಗರ ಸೌಭಾಗ್ಯವೇ ಸರಿ.

ಇನ್ನೊಂದು ಸಂತಸದ ಸಂಗತಿ ಎಂದರೆ ದೂರದ ಧಾರವಾಡದಲ್ಲಿ ನಡೆದ ಖ್ಯಾತ ಕಾದಂಬರಿಕಾರ, ಲೇಖಕ ಡಾ. ರಾಘವೇಂದ್ರ ಪಾಟೀಲರ ಅಭಿನಂದನಾ ಕಾರ್ಯಕ್ರಮದಲ್ಲಿ ಸಂಘದ ಪರವಾಗಿ ಡಾ. ವೆಂಕಟಾಚಲ ಹೆಗಡೆ ಅವರು ಭಾಗವಹಿಸಿ ಅವರನ್ನು ಸಂಘದ ಸ್ಮರಣಿಕೆ ನೀಡಿ ಅಭಿನಂದಿಸಿದ್ದು. ರಾಘವೇಂದ್ರ ಪಾಟೀಲ್, ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ, ದ.ರಾ. ಬೇಂದ್ರೆ ಟ್ರಸ್ಟ್, ಬಸವರಾಜ್ ಕಟ್ಟೀಮನಿ ಟ್ರಸ್ಟ್ ಹೀಗೆ ನಾಡಿನ ಹಲವಾರು ಪ್ರತಿಷ್ಠಿತ ಸಂಘಟನೆಗಳು ಹಾಗೂ ಸಾಹಿತ್ಯದ ದಿಗ್ಗಜರು ದೆಹಲಿ ಕರ್ನಾಟಕ ಸಂಘದೊಂದಿಗೆ ಹಲವಾರು ದಶಕಗಳ ಸಂಬಂಧವನ್ನು ಹೊಂದಿದ್ದಾರೆ ಎಂಬುದೇ ಹೆಮ್ಮೆಯ ವಿಷಯ.

ಹೀಗೆ ದೆಹಲಿ ಕರ್ನಾಟಕ ಸಂಘಕ್ಕೆ ರಾಷ್ಟ್ರದ ಎಲ್ಲೆಡೆಯಿಂದ ಕನ್ನಡ ಸಾಧಕರು ಬರುವಂತಾಗಬೇಕು, ಅವರ ಸಾಧನೆಯ ಹಾದಿ ನಮ್ಮ ದೆಹಲಿ ಕನ್ನಡಿಗರಿಗೆ ಮಾರ್ಗದರ್ಶಿಯಾಗಬೇಕು. ಈ ದಿಸೆಯಲ್ಲಿ ನಮ್ಮ ಪ್ರಯತ್ನ ನಿರಂತರವಾಗಿ ಮುಂದುವರಿಯಲಿದೆ.❑

**ರೇಣುಕುಮಾರ್ ಆರ್.**
ಅಧ್ಯಕ್ಷರು

## ಮುನ್ನೋಟ

ಪ್ರೀತಿಯ ದೆಹಲಿ ಕನ್ನಡಿಗರೇ,

ದೆಹಲಿಯ ಅಸಹನೀಯ ಸುಡು ಬಿಸಿಲಿನ ನಡುವೆ ಆಗಾಗ ಹಿತಕರ ಮಳೆ ಬಂದು ಈ ವರ್ಷಕ್ಕೆ ದೆಹಲಿಯ ಜನಗಳಿಗೆ ಸ್ವಲ್ಪ ಹಿತಕರ ವಾತಾವರಣ ಉಂಟು ಮಾಡಿದೆ. ಅರಾವಳಿ ಸುತ್ತಮುತ್ತ ಪ್ರದೇಶದಲ್ಲಿ ವಾಸಿಸುವ ದಕ್ಷಿಣ ದೆಹಲಿಯಲ್ಲಿ ಸಾಕಷ್ಟು ಹಸಿರು ಗಿಡ, ಮರಗಳ ವಾತಾವರಣದ ಅನುಭವ ಪಡೆಯಬಹುದು.

ಮೇ ಮತ್ತು ಜೂನ್ ತಿಂಗಳು ಬಂತೆಂದರೆ ದೆಹಲಿಯ ನಮ್ಮ ಕನ್ನಡಿಗರು ಬಹುಶಃ ಊರಿನತ್ತ ಮುಖ ಮಾಡಿ ತಿರುಗಾಡಿ ಬರುವುದು, ನೆಂಟರಿಷ್ಟರ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು, ಮಕ್ಕಳ ಉನ್ನತ ವಿದ್ಯಾಭ್ಯಾಸಕ್ಕಾಗಿ ಓಡಾಡುವುದು ಹೀಗೆ ಅವರವರ ವೈಯಕ್ತಿಕ ಮತ್ತು ಕೌಟುಂಬಿಕ ಕೆಲಸ ಕಾರ್ಯಗಳನ್ನು ಮುಗಿಸಿಕೊಳ್ಳುವ ಪ್ರಯತ್ನದಲ್ಲಿ ತೊಡಗುತ್ತಾರೆ.

11ನೇ ಶತಮಾನದ ಕೊನೆಯಲ್ಲಿ ವಚನ ಸಾಹಿತ್ಯ ಆರಂಭವಾಗಿ 12ನೇಯ ಶತಮಾನದಲ್ಲಿ ಮೊಟ್ಟ ಮೊದಲ ಬಾರಿಗೆ ಸಮಾನತೆಯ ಹೋರಾಟಕ್ಕೆ ಕಾರಣವಾದ ವಚನ ಸಾಹಿತ್ಯ ಮತ್ತು ಅನುಭವ ಮಂಟಪ ಇಂದಿನ ಸಂಸತ್ತಿಗೂ ಆಧಾರವಾಗಿರುವುದು. ನಮ್ಮ ದೇಶದ ಸಂಸತ್ತಿನ ಆವರಣದಲ್ಲಿ ಜಗಜ್ಯೋತಿ ಬಸವಣ್ಣನವರ ಪ್ರತಿಮೆ ಇದ್ದು ಪ್ರತಿ ವರ್ಷದಂತೆ ಈ ವರ್ಷವೂ ಕನ್ನಡಿಗರು ಮತ್ತು ಕನ್ನಡೇತರರು ಬಸವ ಜಯಂತಿಯಂದು ಪೂಜೆ ಸಲ್ಲಿಸಿದ್ದು ವಿಶೇಷ.

ಅದೇ ರೀತಿ ದೆಹಲಿ ಕರ್ನಾಟಕ ಸಂಘದಲ್ಲಿ ಕೂಡ ಎಂದಿನಂತೆ ಈ ವರ್ಷವೂ ಬಸವ ಜಯಂತಿಯನ್ನು ಬಹಳ ಅರ್ಥಪೂರ್ಣವಾಗಿ ಆಚರಿಸಲಾಯಿತು. ವಚನಸಾಹಿತ್ಯ ಪ್ರತಿಯೊಬ್ಬ ಮನುಷ್ಯನ ಜೀವನದ ಪ್ರತಿ ಹಂತದಲ್ಲೂ ದಾರಿದೀಪವಾಗಿದೆ. ಇಂತಹ ವಚನ ಸಾಹಿತ್ಯವನ್ನು ಮುಂದಿನ ಪೀಳಿಗೆಗೆ ತಲುಪಿಸುವ ಮೂಲಕ ಉತ್ತಮ ಸಮಾಜವನ್ನು ನಿರ್ಮಿಸಬಹುದು.

ರಜೆ ಮುಗಿದ ನಂತರ ಜುಲೈ ತಿಂಗಳಿಂದ ಸಂಘದ ಸಾಂಸ್ಕೃತಿಕ ಚಟುವಟಿಕೆಗಳು ಆರಂಭವಾಗಲಿದ್ದು ಆದಷ್ಟು ಸ್ಥಳೀಯ ಕನ್ನಡಿಗರಿಗೆ ಆದ್ಯತೆ ನೀಡಬೇಕು. ವಿವಿಧ ಕಲಾವಿದರು ತರಬೇತಿ ನೀಡಲು ಕರ್ನಾಟಕದಿಂದ ಬರುತ್ತಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಸ್ಥಳೀಯರು ಇದರ ಪ್ರಯೋಜನ ಪಡೆಯಬೇಕೆಂದು ಆಶಿಸುತ್ತೇವೆ.

ಮುಂದಿನ ದಿನಗಳಲ್ಲಿ ಉತ್ತಮವಾದ ಕನ್ನಡ ಕಾರ್ಯಕ್ರಮಗಳನ್ನು ಎಲ್ಲರೂ ಸೇರಿ ಯೋಜಿಸೋಣ. ರಾಷ್ಟ್ರ ರಾಜಧಾನಿಯಲ್ಲಿ ಕನ್ನಡದ ಹಿರಿಮೆ, ಸಂಸ್ಕೃತಿ ಮತ್ತು ವೈಭವವನ್ನು ಇನ್ನಷ್ಟು ಬೆಳಗಿಸೋಣ.❑

**ಸಿರಿಗನ್ನಡಂ ಗೆಲ್ಗೆ, ಸಿರಿಗನ್ನಡಂ ದಿಲ್ಲಿಯವರೆಗೆ**

**ರಾಧಾಕೃಷ್ಣ**
ಪ್ರಧಾನ ಕಾರ್ಯದರ್ಶಿ





ದೆಹಲಿ ಕರ್ನಾಟಕ ಸಂಘಕ್ಕೆ ದಿನಾಂಕ 16.05.2026 ರಂದು ಉಡುಪಿ ಪರಮಪೂಜ್ಯ ಯತಿಕುಲ ಚಕ್ರವರ್ತಿ ಶ್ರೀ ಶ್ರೀ ಡಾ. ಸುಗುಣೇಂದ್ರ ತೀರ್ಥ ಶ್ರೀಪಾದರು ಆಗಮಿಸಿ ದೆಹಲಿ ಹಾಗೂ ಎನ್‌ಸಿಆರ್‌ನ ಕನ್ನಡಿಗರಿಗೆ ಆಶೀರ್ವಚನ ನೀಡಿದರು. ನೂತನ ಕಾರ್ಯಕಾರಿ ಸಮಿತಿಯ ಅಧ್ಯಕ್ಷರಾದ ಶ್ರೀ ರೇಣುಕುಮಾರ್ ಆರ್. ಅವರು ಸಂಘದ ಮುಖ್ಯದ್ವಾರದಲ್ಲಿ ಶ್ರೀಪಾದರನ್ನು ಆತ್ಮೀಯವಾಗಿ ಬರಮಾಡಿಕೊಂಡರು. ಈ ಸಂದರ್ಭದಲ್ಲಿ ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳು, ಸದಸ್ಯರು ಉಪಸ್ಥಿತರಿದ್ದು, ಶ್ರೀಪಾದರ ಆಶೀರ್ವಾದವನ್ನು ಪಡೆದರು.





ಆತ್ಮೀಯ ಕನ್ನಡ ಬಂಧುಗಳೇ,

ದೆಹಲಿ ಕರ್ನಾಟಕ ಸಂಘ ವಾರ್ಷಿಕೋತ್ಸವ ಅಂಗವಾಗಿ ದಿನಾಂಕ 19/07/2026 ರಂದು ಸ್ಥಳೀಯರಿಗಾಗಿ 'ಸಾಂಸ್ಕೃತಿಕ ಹಬ್ಬ' ಕಾರ್ಯಕ್ರಮವನ್ನು ಆಯೋಜಿಸಿದೆ. ಇದರಲ್ಲಿ ಜಾನಪದ ಸಮೂಹ ಗಾಯನ, ಜಾನಪದ ನೃತ್ಯ, ವಿಭಿನ್ನ ನೃತ್ಯರೂಪಕಗಳಿಗೆ ಕರ್ನಾಟಕದ ಪ್ರಸಿದ್ಧ ತರಬೇತುದಾರರಿಂದ ತರಬೇತಿಯನ್ನು ನೀಡಲಾಗುವುದು. ಗಾಯನ ಮತ್ತು ನೃತ್ಯಗಳಲ್ಲಿ ಆಸಕ್ತಿಯುಳ್ಳ ಸ್ಥಳೀಯ ಕನ್ನಡಿಗರು ಪಾಲ್ಗೊಳ್ಳಬಹುದು. ತಂಡಗಳನ್ನು ಕರ್ನಾಟಕದ ತರಬೇತುದಾರರು ಆಯ್ಕೆ ಮಾಡುತ್ತಾರೆ. ಭಾಗವಹಿಸುವ ದೆಹಲಿ NCR ಕನ್ನಡಿಗರು ದಿನಾಂಕ 01/07/2026 ಹೆಸರುಗಳನ್ನು ನೊಂದಾಯಿಸಲು ಕೊನೆಯ ದಿನಾಂಕವಾಗಿರುತ್ತದೆ. ಕನ್ನಡಿಗರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.

ಸಂಪರ್ಕಿಸಿ : ಶ್ರೀಮತಿ ಶೋಭಾ ಗೌಡ-88005 88150, ಶ್ರೀಮತಿ ಆಶಾಲತಾ ಎಂ.-98912 49149, ಶ್ರೀಮತಿ ಅಶ್ವಿನಿ ಬಿ.ಎಸ್.-90362 35665, ಶ್ರೀಮತಿ ಪೂಜಾ ಪಿ. ರಾವ್-98108 82498, ಶ್ರೀಮತಿ ಜಯಶ್ರೀ ಬಸವರಾಜು ಬಿ.ಕೆ.-95607 60341, ಶ್ರೀಮತಿ ಶುಭಾ ದೇವಿಪ್ರಸಾದ್-93197 62969.

**ರಾಧಾಕೃಷ್ಣ**
ಪ್ರಧಾನ ಕಾರ್ಯದರ್ಶಿ

# ಸಂಘದಲ್ಲಿ ಅರ್ಥಪೂರ್ಣ ಬಸವ ಜಯಂತಿ ಆಚರಣೆ




ದಿನಾಂಕ 12ನೇ ಮೇ 2026 ರಂದು ದೆಹಲಿ ಕರ್ನಾಟಕ ಸಂಘ ಆಯೋಜಿಸಿದ್ದ ಕರ್ನಾಟಕದ ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣ ಮತ್ತು ಅಕ್ಕಮಹಾದೇವಿ ಜಯಂತಿ ಕಾರ್ಯಕ್ರಮದಲ್ಲಿ ವಿಚಾರ ಮಂಡನೆ ಮಾಡಿದ ಹಿರಿಯ ಸಾಹಿತಿ ಪ್ರೊ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಬಸವ ಸಂವಿಧಾನ ಸ್ವಾತಂತ್ರ್ಯ ಸಮಾನತೆ ನೀಡಿದ್ದು ಮಾತ್ರವಲ್ಲ, ಪ್ರಶ್ನೆ ಕೇಳುವ ಅಧಿಕಾರವನ್ನು ನೀಡಿತ್ತು ಎಂದು ಅಭಿಪ್ರಾಯಪಟ್ಟರು. ಬಸವ ಚಿಂತನೆಯಲ್ಲಿ ಇದು ಆರ್ಥಿಕ ಚಿಂತನೆ, ಇದು ಸಾಮಾಜಿಕ, ಇದು ಆಧ್ಯಾತ್ಮಿಕ ಚಿಂತನೆ, ಇದು ಕಾಯಕ ಮೀಮಾಂಸೆ ಎಂದೆಲ್ಲ ಪ್ರತ್ಯೇಕಗೊಳಿಸುವ ಬಿಡಿಬಿಡಿಯಾಗಿಸುವುದು ಸಾಧ್ಯ ಎಂದು ನನಗನ್ನಿಸುವುದಿಲ್ಲ. ಬಸವಣ್ಣನ 12ನೆಯ ಶತಮಾನದ ವಚನ ಸಂವಿಧಾನದಲ್ಲಿ ಬದುಕಿನ ಚಿಂತನೆ ಇದೆ. ಇಡೀ ವಚನ ಸಿದ್ಧಾಂತವನ್ನು ಸಮಗ್ರವಾಗಿ ಪರಿಭಾವಿಸಿಕೊಂಡರೆ–ಪರಿಶೀಲಿಸಿದರೆ ಅಲ್ಲಿ ಬದುಕನ್ನು ಹೇಗೆ ಕಟ್ಟಿಕೊಳ್ಳಬೇಕು, ಬದುಕನ್ನು ಹೇಗೆ ನಿರ್ವಹಿಸಬೇಕು, ಬದುಕನ್ನು ಹೇಗೆ ಸಮಾಜದಲ್ಲಿ ಇತರರೊಡನೆ ಹಂಚಿಕೊಳ್ಳಬೇಕು, ಸಮಾಜದಲ್ಲಿ ಹೇಗೆ ಬಾಳಬೇಕು ಎಂಬ ಸಂಗತಿಗಳು ಚರ್ಚೆಗೆ, ವಿಚಾರ ಮಂಥನಕ್ಕೆ ಒಳಗಾಗಿರುವುದು ಕಂಡು ಬರುತ್ತದೆ. ಆರ್ಥಿಕ ಚಿಂತನೆ, ಸಾಮಾಜಿಕ ಚಿಂತನೆ, ರಾಜಕೀಯ ಎಲ್ಲವನ್ನು ಬದುಕಿನ ಚಿಂತನೆಯು ಒಳಗೊಂಡಿದೆ ಎಂದರು.

ದೆಹಲಿ ಕರ್ನಾಟಕ ಸಂಘದ ಚುನಾವಣೆಯ ನಂತರ ನಡೆದ ಮೊದಲ ಸಾಂಸ್ಕೃತಿಕ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಸಂಘದ ಅಧ್ಯಕ್ಷರಾದ ಶ್ರೀ ರೇಣುಕುಮಾರ್ ಅವರು ಎಲ್ಲ ದೆಹಲಿ ಕನ್ನಡಿಗರಿಗೆ ಹೃದಯಪೂರ್ವಕ ನಮನಗಳನ್ನು ತಿಳಿಸಿ ನಿಮ್ಮೆಲ್ಲರ ಪ್ರೀತಿ ವಿಶ್ವಾಸ ಮತ್ತು ಬೆಂಬಲದಿಂದ ಇವತ್ತು ನಿಮ್ಮೆಲ್ಲರ ರಾಯಭಾರಿಯಾಗಿದ್ದೇನೆ. ದೆಹಲಿ ಕನ್ನಡಿಗರ ಅಭಿಮಾನ ಪೂರ್ವಕ ಆಜ್ಞೆಗಳನ್ನು ಪಾಲಿಸಲು ಮತ್ತು ಸಂಘದ ಸೇವಕನಾಗಿ ಕಾರ್ಯ ನಿರ್ವಹಿಸಲು ನೀಡಿದ ಅವಕಾಶಕ್ಕಾಗಿ ಸಾಷ್ಟಾಂಗ ಪ್ರಣಾಮಗಳನ್ನು ಸಲ್ಲಿಸಿದರು.

ಇವತ್ತು ನನ್ನ ಮನಪೂರ್ವಕವಾಗಿ ವಿಜಯ ಸಾಧಿಸಿದ್ದೇನೆ. ಯಾಕೆಂದರೆ ನಿಮ್ಮೆಲ್ಲರ ಭಾಗವಹಿಸುವಿಕೆ ಏನಿದೆಯಲ್ಲ ಅದು ನನಗೆ ಬಹಳ ಅತ್ಯಂತ ಸಂತೋಷ ತಂದಿದೆ. ನಿಮ್ಮೆಲ್ಲರ ಸಹಕಾರ ಹೀಗೆ ಇರಲಿ. ಮುಂದಿನ ದಿನಗಳಲ್ಲಿ ಇತಿಹಾಸ ರಚಿಸುತ್ತಾ ಹೋಗೋಣ. ಯಾಕೆಂದರೆ ದೊಡ್ಡ ದೊಡ್ಡ ಮಾತುಗಳಿಗೆ ಮಿಗಿಲಾಗಿ ಕಾಯಕ ಯೋಗಿಯ ದಿನದಂದು ನಾವು ಕಾಯಕವನ್ನು ಮಾಡುವ ಕಾಯಕದ ಮೂಲಕ ಸಮಾಜವನ್ನು ಕಟ್ಟುವ ಒಂದು ದೃಢ ನಿರ್ಧಾರ ಮಾಡೋಣ. ಈ ನಿರ್ಧಾರಕ್ಕೆ ನೀವೆಲ್ಲರೂ ಭಾಗಿಗಳಾಗಿ, ನಾನು ನಿಮ್ಮ ಜೊತೆಗೆ ಇದ್ದೇನೆ ಎಂದರು.

ನಮ್ಮ ಮಕ್ಕಳು ಹಿರಿಯರು ಎಲ್ಲರೂ ಕೂಡಿದಾಗ ಸಂಘ ಸಂಸ್ಥೆಯ ಚಟುವಟಿಕೆಯಲ್ಲಿ ತೊಡಗಿಸಿಕೊಂಡಾಗ ಸಂಘ ಸಚೇತನವಾಗಿರುತ್ತದೆ ಅಂತ ನನ್ನ ಭಾವನೆ. ನಮ್ಮನ್ನು ನಾವು ತೊಡಗಿಸಿಕೊಂಡಾಗ ಅಳವಡಿಸಿಕೊಂಡಾಗ ಯಾವಾಗಲೂ ಸಂಘ ಮುಂದುವರಿಯುತ್ತಾ ಇರುತ್ತದೆ ಮತ್ತು ಬೆಳವಣಿಗೆಗೆ ಪೂರಕವಾಗಿರುತ್ತದೆ. ಯಾವಾಗ ಇದು ನನ್ನದಲ್ಲ ಅಂತ ಬಿಡ್ತಾ ಹೋಗ್ತೀವಿ ಆಗ ಅದು ತನಗೆ ತಾನಾಗಿ ಅಳಿವಿನ ಹಾದಿ ಹಿಡಿಯುತ್ತದೆ. ಹಾಗಾಗಿ ನಿಮ್ಮೆಲ್ಲರ ಭಾಗವಹಿಸುವಿಕೆ ಮುಂದಿನ ದಿನಗಳಲ್ಲಿ ಸಂಘ ಬೆಳೆಯುವ ಒಂದು ಪಾಸಿಟಿವ್ ವೈಬ್ ಕೊಡ್ತಾ ಇದೆ. ಅದಕ್ಕಾಗಿ ನಿಮ್ಮೆಲ್ಲರಿಗೂ ನಾನು ಅಭಿನಂದನೆಗಳನ್ನು ಸಲ್ಲಿಸ ಬಯಸುತ್ತೇನೆ ಎಂದರು.

ಇವತ್ತು ವಿಶೇಷ ಅತಿಥಿ ಆಗಿರುವ ನಟಿ ಇಲ್ಲಿ ಹೇಳ್ತಾರೆ "ನನಗೆ ಕರ್ನಾಟಕದಲ್ಲಿ ಇದ್ದಂತೆ ಭಾಸವಾಯಿತು ಆ ಮಕ್ಕಳ ಮಾತುಗಳು ಕೇಳಿ ನನಗೆ ಬಹಳ ಹೃದಯ ತುಂಬಿ ಬಂತು ಅಂತ ಹೇಳುತ್ತಾರೆ", ಇನ್ನೊಬ್ಬರು ಮಹಾನ್ ಸಾಧಕರು ಸಾಹಿತ್ಯ ಕ್ಷೇತ್ರದಲ್ಲಿ ದುಡಿದವರು ಪಕ್ಕದಲ್ಲಿ ಕೂತುಕೊಂಡು ಎಂತಹ ಪ್ರೇಕ್ಷಕರನ್ನು ಇಟ್ಟುಕೊಂಡಿದ್ದೀರಿ, ಎಷ್ಟು ಗಂಭೀರವಾಗಿ ಕೂತು ಮಾತುಗಳನ್ನು ಕೇಳುತ್ತಾ ಇದ್ದಾರೆ, ಅವರಿಗೆ ನಾನು ಶರಣು ಅಂತ ಹೇಳಿದ್ರು, ಮೂರನೇಯವರು ಹೇಳುತ್ತಾರೆ ಎಷ್ಟು ಅದ್ಭುತವಾದಂತಹ ಸಭಾಂಗಣವನ್ನು ಕಟ್ಟಿದ್ದಾರೆ ಎಂದರು. ಇವೆಲ್ಲದಕ್ಕೆ ಕಾರಣೀಭೂತರು ದೆಹಲಿ ಕನ್ನಡಿಗರು ಎಂದು ಹಿರಿಯ ದೆಹಲಿ ಕನ್ನಡಿಗರ ಸೇವೆಯನ್ನು ಸ್ಮರಿಸಿದ ಅದರಲ್ಲಿ ನಾನು ಒಬ್ಬ ಆಗಿದ್ದೀನಿ ಹಾಗಾಗಿ ನಾನು ಅಭಿಮಾನದಿಂದ ಹೇಳುತ್ತೇನೆ ಎಂದರು.

ಈ ಸಂಘವನ್ನು ಕುರಿತು ಶ್ರೀ ಚಂದ್ರಶೇಖರ್ 15 ನಿಮಿಷದಲ್ಲಿ ಎಲ್ಲಾ ಹೇಳಿದ್ದಾರೆ. ನಾನು ಮನದಾಸೆ ಮನದಾಳದ ಮಾತು ಹೇಳುವುದೇನೆಂದರೆ ಇವತ್ತು ಸಂಘ ಗೆದ್ದಿದೆ, ಇವತ್ತು ನೀವು ಗೆದ್ದಿದ್ದೀರಿ, ಇವತ್ತು ನಾವು ಗೆದ್ದಿದ್ದೀವಿ ಯಾಕೆಂದ್ರೆ ಕನ್ನಡಮ್ಮನ ಕಹಳೆ ಇಷ್ಟೊಂದು ಚೆನ್ನಾಗಿ ಮೊಳಗುತ್ತಿದೆ, ಮಕ್ಕಳ ಚಿಲಿಪಿಲಿ ನಾದ, ಇವೆಲ್ಲ ಇರಬೇಕು, ಅವೆಲ್ಲವೂ ಇದ್ದರೆ ತಾನೆ ಮುಂದಕ್ಕೆ ಸಮಾಜ ಮತ್ತೆ ಬೆಳೆಯೋದು ಹಾಗಾಗಿ ಇವೆಲ್ಲದರ ನಡುವೆ ಕಾರ್ಯಕ್ರಮ ನಡೀತಾ ಇದೆ ಎಷ್ಟೊಂದು ಶಾಂತ ವಾತಾವರಣದಲ್ಲಿ ನಡೀತಾ ಇದೆ ಅಂದ್ರೆ ನಾವು ನಿಜವಾಗಿಯೂ ಗೆದ್ದಿದ್ದೇವೆ. ನಮ್ಮ ಬೆನ್ನನ್ನು ನಾವೇ ತಟ್ಟಿಕೋಬಹುದು ಎಂದು ನಾನು ಹೇಳುತ್ತೇನೆ ಎಂದರು.

**ಬಸವ ತತ್ವಗಳು ಇಂದಿನ ತಾಂತ್ರಿಕ ಯುಗಕ್ಕೂ ಪ್ರಸ್ತುತ** : ರಾಷ್ಟ್ರ ರಾಜಧಾನಿಯಲ್ಲಿ ಕನ್ನಡ ನುಡಿ ಮತ್ತು ವಿಚಾರಧಾರೆಗಳನ್ನು ಗಟ್ಟಿಗೊಳಿಸುವ ಕಾರ್ಯದಲ್ಲಿ ಕಂಕಣಬದ್ಧರಾಗಿ ಕಾರ್ಯ ನಿರ್ವಹಿಸಲು ನೂತನವಾಗಿ ಆಯ್ಕೆಯಾಗಿರುವ ದೆಹಲಿ ಕರ್ನಾಟಕ ಸಂಘದ ಎಲ್ಲಾ ಪದಾಧಿಕಾರಿಗಳಿಗೆ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿದ್ದ ಡಾ. ಎನ್.ಎಚ್. ಸಿದ್ದಲಿಂಗಸ್ವಾಮಿ ಅವರು ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಿದರು.

ದೆಹಲಿ ಕರ್ನಾಟಕ ಸಂಘದ ವತಿಯಿಂದ ಆಯೋಜಿಸಲಾಗಿದ್ದ ಬಸವ ಜಯಂತಿ ಹಾಗೂ ಅಕ್ಕಮಹಾದೇವಿ ಅವರ ಜಯಂತಿ ಉತ್ಸವದ

ಸಂದರ್ಭದಲ್ಲಿ ಮಾತನಾಡಿದ ಅವರು, "ಹೊಸದಾಗಿ ಆಯ್ಕೆಯಾಗಿರುವ ಎಲ್ಲಾ ಪದಾಧಿಕಾರಿಗಳಲ್ಲಿ ನನ್ನದೊಂದು ಕೋರಿಕೆಯಿದೆ. ಬಸವಣ್ಣ, ಅಕ್ಕಮಹಾದೇವಿ ಮೊದಲಾದ ಎಲ್ಲ ವಚನಕಾರರು 12ನೇ ಶತಮಾನದಲ್ಲಿ ಪ್ರತಿಪಾದಿಸಿದ ಮೌಲ್ಯಗಳನ್ನು ಅನುಸರಿಸಿ ನಾವು ಇಂದು ನಮ್ಮ ಕೆಲಸಗಳನ್ನು ನಿರ್ವಹಿಸಿದರೆ ಅಷ್ಟೇ ಸಾಕು, ಹೊಸದಾಗಿ ಬೇರೆ ಯಾವುದನ್ನೂ ಮಾಡುವ ಅವಶ್ಯಕತೆ ಇರುವುದಿಲ್ಲ. ನಿಜವಾಗಿಯೂ 'ಕಾಯಕವೇ ಕೈಲಾಸ' (ವರ್ಕ್ ಈಸ್ ವರ್ಶಿಪ್) ಎಂಬ ಮಾರ್ಗದಲ್ಲಿ ನಡೆದರೆ ಯಾವುದೇ ಭಿನ್ನಾಭಿಪ್ರಾಯಗಳು ಮೂಡುವುದಿಲ್ಲ. ರಾಗ-ದ್ವೇಷ, ಅಸೂಯೆ ಭಾವನೆಗಳನ್ನು ಬಿಟ್ಟು ಎಲ್ಲರೂ ಒಂದೇ ಎಂಬ ದೃಷ್ಟಿಯಲ್ಲಿ ಈ ಸಂಸ್ಥೆ ನಡೆಯುತ್ತಾ ಬಂದಿದೆ. ಮುಂದಿನ ದಿನಗಳಲ್ಲೂ ಇನ್ನೂ ಹೆಚ್ಚಿನ ರೀತಿಯಲ್ಲಿ ಒಳ್ಳೆಯ ಕಾರ್ಯಕ್ರಮಗಳು ಇಲ್ಲಿ ನಡೆಯುವಂತಾಗಲಿ" ಎಂದು ಆಶಿಸಿದರು.

ತಾಂತ್ರಿಕ ಶಿಕ್ಷಣದಲ್ಲೂ ಬಸವ ತತ್ವಗಳ ಅಳವಡಿಕೆ : "ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತಿನಲ್ಲಿ (AICTE) ಕೆಲಸ ಮಾಡುತ್ತಿರುವ ನಾನು, ಇವತ್ತಿನ ತಾಂತ್ರಿಕ ಯುಗದಲ್ಲಿ ಬಸವ ತತ್ವಗಳು ಮತ್ತು ವಚನ ಸಾಹಿತ್ಯವನ್ನು ಮುಂದಿನ ದಿನಗಳಲ್ಲಿ ಹೇಗೆ ಉಪಯೋಗಿಸಿಕೊಳ್ಳಬಹುದು ಎಂಬ ಮಾಹಿತಿಯನ್ನು ನೀಡಲು ಇಷ್ಟಪಡುತ್ತೇನೆ" ಎಂದ ಅವರು, AICTE ಕೇವಲ ಇಂಜಿನಿಯರಿಂಗ್, ಮ್ಯಾನೇಜ್‌ಮೆಂಟ್ ಹಾಗೂ ಡಿಪ್ಲೋಮಾ ಕಾಲೇಜುಗಳಿಗೆ ಮಾನ್ಯತೆ ನೀಡುವುದಕ್ಕೆ ಮಾತ್ರ ಸೀಮಿತವಾಗಿಲ್ಲ; ಇದು ದೇಶದ ತಾಂತ್ರಿಕ ಶಿಕ್ಷಣದ ಗುಣಮಟ್ಟಕ್ಕಾಗಿ ಕಾಲಕಾಲಕ್ಕೆ ನಿಯಮ ಮತ್ತು ಪಾಲಿಸಿಗಳನ್ನು ರೂಪಿಸುತ್ತದೆ ಎಂದು ತಿಳಿಸಿದರು.

ಮುಂದುವರಿದು ಮಾತನಾಡಿದ ಅವರು, "AICTE ಇತ್ತೀಚೆಗೆ ದೇಶದ ಎಲ್ಲಾ ಉನ್ನತ ಶಿಕ್ಷಣ ಸಂಸ್ಥೆಗಳಿಗೆ (Higher Education Institutions) ಒಂದು ಪ್ರಮುಖ ಸುತ್ತೋಲೆಯನ್ನು ಹೊರಡಿಸಿದೆ. 12ನೇ ಶತಮಾನದಲ್ಲಿ ಬಸವಣ್ಣನವರು ಮತ್ತು ಶರಣರು ವಚನಗಳ ಮುಖಾಂತರ ಸಮಾಜದ ಅಂಕುಡೊಂಕುಗಳನ್ನು ತಿದ್ದಲು ಪ್ರಯತ್ನಿಸಿದರು ಹಾಗೂ ಜಗತ್ತಿಗೆ ಮೊದಲ ಸಂಸತ್ತು ಎನಿಸಿದ 'ಅನುಭವ ಮಂಟಪ'ವನ್ನು ನೀಡಲು ಶ್ರಮಿಸಿದರು. ಈ ಶರಣರ ತತ್ವಗಳ ಕುರಿತು ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲೂ ಸಂಶೋಧನೆ (Research), ಉಪನ್ಯಾಸಕರ ಅಭಿವೃದ್ಧಿ ಕಾರ್ಯಕ್ರಮಗಳು (Faculty Development Programs) ಹಾಗೂ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳಲು ಈ ಸುತ್ತೋಲೆಯ ಮುಖಾಂತರ ನಿರ್ದೇಶನ ನೀಡಲಾಗಿದೆ" ಎಂದು ಮಾಹಿತಿ ಹಂಚಿಕೊಂಡರು.

ಕಾರ್ಯಕ್ರಮದ ವಿಶೇಷ ಅತಿಥಿಗಳಾಗಿದ್ದ ಕಲಾವಿದೆ ಕು. ಭೂಮಿ ಶೆಟ್ಟಿ ಅವರು ಎಲ್ಲರಿಗೂ ಬಸವ ಜಯಂತಿಯ ಶುಭಾಶಯಗಳನ್ನು ಕೋರಿ, ಇವತ್ತು ನಾನು ದೆಹಲಿಯಲ್ಲಿ ಇದ್ದೀನಿ ಅಂತ ಖಂಡಿತವಾಗಿಯೂ ಅನಿಸ್ತಾನೆ ಇಲ್ಲ, ಯಾಕೆಂದ್ರೆ ಮಕ್ಕಳಿಂದ ಹಿಡಿದು ಪ್ರತಿಯೊಬ್ಬರೂ ಕೂಡಾ ವಚನಗಳನ್ನು ಹಾಡುತ್ತ, ಕನ್ನಡ ಮಾತನಾಡುತ್ತ ಇರೋದನ್ನು ನೋಡಿದಾಗ ನಿಜವಾಗಿಯೂ ತುಂಬಾ ಖುಷಿ ತಂದಿದೆ ಎಂದು ಶ್ಲಾಘಿಸಿದರು. 12ನೇ ಶತಮಾನದಲ್ಲಿ ಈ ಒಂದು ಕ್ರಾಂತಿಯನ್ನು ಹುಟ್ಟು ಹಾಕಿದ ನಮ್ಮ ಬಸವಣ್ಣ ಅಥವಾ ಅಕ್ಕಮಹಾದೇವಿ ಅವರು ನಮ್ಮ ಜೀವನದಲ್ಲಿ ನಾವು ಹೇಗಿರಬೇಕು ಎಂಬುದನ್ನು ವಚನಗಳ ಮೂಲಕ ತಿಳಿಸಿದ್ದಾರೆ. ಮನುಷ್ಯರು ಜಾತಿ, ಧರ್ಮ ಭೇದ ಭಾವ ತೋರದೆ ಮಾನವೀಯತೆಯನ್ನು ಮೆರೆಯಬೇಕು ಅನ್ನೋದನ್ನು ನಮ್ಮೆಲ್ಲರಿಗೂ ತಿಳಿಸಿ ಹೋಗಿದ್ದಾರೆ. ನಾವು ಬಸವಣ್ಣ ಹಾಗೂ ಅಕ್ಕಮಹಾದೇವಿಯವರ ಜಯಂತಿ ಆಚರಣೆಯಂದು ಅವರು ಏನು ಹೇಳಿದ್ದಾರೆ ಅದನ್ನು ಜೀವನದಲ್ಲಿ ಪಾಲನೆ ಮಾಡಿಕೊಂಡರೆ ಬಹುಶಃ ಅದೇ ನಾವು ಅವರಿಗೆ ಕೊಡುವಂತಹ ಒಂದು ದೊಡ್ಡ ಕೊಡುಗೆ ಎಂದರು. ಕನ್ನಡವನ್ನು ಇದೇ ರೀತಿ ಉಳಿಸಿಕೊಂಡು ಬೆಳೆಸಿಕೊಂಡು ಹೋಗೋಣ ಎಂದು ಕರೆ ನೀಡಿದರು.

ಕಾರ್ಯಕ್ರಮದ ಕುರಿತು ಶ್ರೀ ಚಂದ್ರಶೇಖರ್ ಎನ್.ಪಿ. ಅವರು ಪ್ರಾಸ್ತಾವಿಕ ಮಾತುಗಳನ್ನಾಡಿದರು. ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ನಾರಾಯಣ ಬಿ. ಅವರು ಸ್ವಾಗತಿಸಿದರು, ಪ್ರಧಾನ ಕಾರ್ಯದರ್ಶಿ ಶ್ರೀ ರಾಧಾಕೃಷ್ಣ ಅವರು ವಂದನಾರ್ಪಣೆ ನೆರವೇರಿಸಿದರು. ಉಪಾಧ್ಯಕ್ಷೆ ಶ್ರೀಮತಿ ಶೋಭಾ ಗೌಡ, ಖಜಾಂಚಿ ಶ್ರೀಮತಿ ಆಶಾಲತಾ ಎಂ. ಮತ್ತು ಕಾರ್ಯಕಾರಿ ಸಮಿತಿ ಸದಸ್ಯೆ ಶ್ರೀಮತಿ ಪೂಜಾರಾವ್ ಕಾರ್ಯಕ್ರಮ ನಿರೂಪಣೆ ಮಾಡಿದರು.

ದೆಹಲಿ ಎನ್‌ಸಿಆರ್ ಕನ್ನಡ ಮಹಿಳೆಯರು ನಾಡಗೀತೆಯನ್ನು ಹಾಡಿದರು. ದೆಹಲಿ ಕನ್ನಡಿಗರು, ಮಕ್ಕಳಿಂದ ವಚನ ನೃತ್ಯ, ಗಾಯನ ಹಾಗೂ ಕಿರುನಾಟಕ ಮೊದಲಾದವುಗಳ ಜೊತೆಗೆ ಮೈಸೂರಿನ ದೇವಾನಂದ ವರಪ್ರಸಾದ್ ಕೆ.ಕೆ. ಮತ್ತು ತಂಡದ ಕಲಾವಿದರು ಪ್ರಸ್ತುತಪಡಿಸಿದ ವಚನ ಗಾಯನ ಕಾರ್ಯಕ್ರಮಗಳನ್ನು ಅರ್ಥಪೂರ್ಣವಾಗಿ ಆಯೋಜಿಸಲಾಗಿತ್ತು. ದೆಹಲಿಯ ಬಸವ ಇಂಟರ್‌ನ್ಯಾಷನಲ್ ಸೆಂಟರ್, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ, ಕಲ್ಯಾಣ ಕರ್ನಾಟಕ ಸಾಂಸ್ಕೃತಿಕ ಸಂಘಗಳ ಜಂಟಿ ಸಹಭಾಗಿತ್ವದಲ್ಲಿ ಆಯೋಜಿಸಿದ್ದ ಬಸವ ಜಯಂತಿ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿ ನೆರವೇರಿತು. ❑






# ಬಸವ ಸಂವಿಧಾನ ಸ್ವಾತಂತ್ರ್ಯ ಸಮಾನತೆ ನೀಡಿದ್ದು ಮಾತ್ರವಲ್ಲ, ಪ್ರಶ್ನೆ ಕೇಳುವ ಅಧಿಕಾರವನ್ನು ನೀಡಿತ್ತು–ಪ್ರೊ. ಟಿ.ಆರ್. ಚಂದ್ರಶೇಖರ್

*ಹಂಪಿ ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿ ಅಧ್ಯಯನ ವಿಭಾಗದ ವಿಶ್ರಾಂತ ಪ್ರಾಧ್ಯಾಪಕ* ***ಪ್ರೊ. ಟಿ.ಆರ್. ಚಂದ್ರಶೇಖರ*** *ಅವರು ದೆಹಲಿ ಕರ್ನಾಟಕ ಸಂಘ ಆಯೋಜಿಸಿದ* ***ಬಸವ ಜಯಂತಿ*** *ಕಾರ್ಯಕ್ರಮದಲ್ಲಿ ಅವರು ಮಾಡಿದ ಭಾಷಣದ ಆಯ್ದ ಭಾಗ ಅಭಿಮತದ ಓದುಗರಿಗಾಗಿ....*

ಒಬ್ಬರ ಮನವ ನೋಯಿಸಿ ಒಬ್ಬರ ಮನವ<br>ಘಾತವ ಮಾಡಿ<br>ಗಂಗೆಯ ಮುಳುಗಿದಡೇನಾಗುವುದಯ್ಯಾ?<br>ಚಂದ್ರನು ಗಂಗೆಯ ತಡಿಯಲಿದ್ದಡೇನು?<br>ಕಲಂಕ ಬಿಡದಾಯಿತಯ್ಯಾ<br>ಅದು ಕಾರಣ, ಮನವ ನೋಯಿಸದವನೆ,<br>ಒಬ್ಬರ ಘಾತವ ಮಾಡದವನೆ ಪರಮ ಪಾವನ<br>ನೋಡಾ<br>ಕಪಿಲಸಿದ್ಧಮಲ್ಲಿಕಾರ್ಜುನಾ

ಈ ಬಸವ ಸಂವಿಧಾನದಲ್ಲಿ ಅಥವಾ ಬಸವ ಚಿಂತನೆಯಲ್ಲಿ ಇದು ಆರ್ಥಿಕ ಚಿಂತನೆ, ಇದು ಸಾಮಾಜಿಕ, ಇದು ಆಧ್ಯಾತ್ಮಿಕ ಚಿಂತನೆ, ಇದು ಕಾಯಕ ಮೀಮಾಂಸೆ ಎಂದೆಲ್ಲ ಪತ್ಯೇಕಗೊಳಿಸುವ ಬಿಡಿಬಿಡಿಯಾಗಿಸುವುದು ಸಾಧ್ಯ ಎಂದು ನನಗನ್ನಿಸುವುದಿಲ್ಲ. ಬಸವಣ್ಣನ 12ನೆಯ ಶತಮಾನದ ವಚನ ಸಂವಿಧಾನದಲ್ಲಿ ಬದುಕಿನ ಚಿಂತನೆ ಇದೆ. ಇಡೀ ವಚನ ಸಿದ್ಧಾಂತವನ್ನು ಸಮಗ್ರವಾಗಿ ಪರಿಭಾವಿಸಿಕೊಂಡರೆ–ಪರಿಶೀಲಿಸಿದರೆ ಅಲ್ಲಿ ಬದುಕನ್ನು ಹೇಗೆ ಕಟ್ಟಿಕೊಳ್ಳಬೇಕು, ಬದುಕನ್ನು ಹೇಗೆ ನಿರ್ವಹಿಸಬೇಕು, ಬದುಕನ್ನು ಹೇಗೆ ಸಮಾಜದಲ್ಲಿ ಇತರರೊಡನೆ ಹಂಚಿಕೊಳ್ಳಬೇಕು, ಸಮಾಜದಲ್ಲಿ ಹೇಗೆ ಬಾಳಬೇಕು ಎಂಬ ಸಂಗತಿಗಳು ಚರ್ಚೆಗೆ, ವಿಚಾರ ಮಂಥನಕ್ಕೆ ಒಳಗಾಗಿರುವುದು ಕಂಡು ಬರುತ್ತದೆ. ಆರ್ಥಿಕ ಚಿಂತನೆ, ಸಾಮಾಜಿಕ ಚಿಂತನೆ, ರಾಜಕೀಯ ಎಲ್ಲವನ್ನು ಬದುಕಿನ ಚಿಂತನೆಯು ಒಳಗೊಂಡಿದೆ. ಆದ್ದರಿಂದ ನಾನು ಬಸವಣ್ಣ ಅವರ ಬದುಕಿನ ಚಿಂತನೆಯನ್ನು ಕುರಿತಂತೆ ಕೆಲವು ಸಂಗತಿಗಳನ್ನು ಇಲ್ಲಿ ಚರ್ಚೆ ಮಾಡಲು ಪ್ರಯತ್ನಿಸುತ್ತೇನೆ. ಪ್ರಾಸಂಗಿಕವಾಗಿ ಲೇಖನದ ಮೊದಲು ಸಿದ್ಧರಾಮಣ್ಣನವರ ಒಂದು ವಚನವನ್ನು ಉಲ್ಲೇಖಿಸಿದ್ದೇನೆ. ಒಬ್ಬರ ಮನವ ನೋಯಿಸುವ–ಒಬ್ಬರ ಮನವ ಘಾತವ ಮಾಡುವ ಕ್ರಮಕ್ಕೆ ಬಸವ ಸಂವಿಧಾನದಲ್ಲಿ ಅವಕಾಶವಿಲ್ಲ. ಸಿದ್ಧರಾಮಣ್ಣನವರು ತಮ್ಮ ವನಚದಲ್ಲಿ ಇಂತಹ ದ್ವೇಷದ ನಡೆಗೆ ಪರಿಹಾರವಿಲ್ಲ ಎಂಬುದನ್ನು 'ಚಂದ್ರ'ನ ಉದಾಹರಣೆಯ ಮೂಲಕ ವಿವರಿಸುತ್ತಿದ್ದಾರೆ. ಪಾಪ ಮಾಡಿ ಗಂಗೆಯಲ್ಲಿ ಮುಳುಗಿದರೆ ಅದು ಪರಿಹಾರವಾಗುವುದಿಲ್ಲ. ಇಂತಹ ನಡೆಯಿಂದ ಆರ್ಥಿಕತೆಗೂ ಹಾನಿಯಾಗುತ್ತದೆ. ಸಿದ್ಧರಾಮಣ್ಣನವರ ಚಿಂತನೆಯಿಂದ ಕರ್ನಾಟಕ ಪಾಠ ಕಲಿತಂತೆ ಕಾಣುವುದಿಲ್ಲ. ಇಂತಹ 'ನೋಯಿಸುವ', 'ಘಾತ'ವ ಮಾಡುವ ನಡೆಗೆ ವಚನ ಸಂಸ್ಕೃತಿಯಲ್ಲಿ ಅವಕಾಶವಿಲ್ಲ.

'ಸಂಸಾರವ ಸವೆಯ ಬಳಸುವೆನು' ಎಂಬುದು ಬಸವಣ್ಣನ ಒಂದು ವಚನದ ಸಾಲು. ಇನ್ನೊಂದು ಕಡೆ 'ಕೂಡಲ ಸಂಗಮನನೊಲಿಸ ಬಂದ ಪ್ರಸಾದ ಕಾಯವ ಕೆಡಿಸಲಾಗದು' ಎನ್ನುತ್ತಾನೆ. ಬಸವಣ್ಣನ ಈ ಮಾತುಗಳಲ್ಲಿ ಆರ್ಥಿಕ ಚಿಂತನೆಯೂ ಇದೆ, ಬದುಕಿನ ಸಿದ್ಧಾಂತವೂ ಇದೆ. ಸಾಮಾಜಿಕ ಸಂಗತಿಗಳೂ ಇವೆ.

ಸುಖ ಬಂದಡೆ ಪುಣ್ಯದ ಫಲವೆನ್ನೆನು,<br>ದುಃಖ ಬಂದಡೆ ಪಾಪದ ಫಲವೆನ್ನೆನು<br>ನೀಮಾಡಿದಡಾಯಿತ್ತೆಂದೆನ್ನೆನು,<br>ಕರ್ಮಕ್ಕೆ ಕತೃವೇ ಕಡೆಯೆಂದೆನ್ನೆನು<br>ಉದಾಸೀನವಿಡಿದು ಶರಣೆನ್ನೆನು,<br>ನೀಮಾಡಿದುಪದೇಶ ಎನಗೀ ಪರಿಯಲ್ಲಿ,<br>ಕೂಡಲಸಂಗಮದೇವಾ ಸಂಸಾರವ ಸವೆಯ<br>ಬಳಸುವೆನು

ಈ ವಚನದಲ್ಲಿ ಆರ್ಥಿಕ ಚಿಂತನೆಯಿದೆ, ಕಾಯಕ ಸಂದೇಶವಿದೆ, ಕರ್ಮ ಸಿದ್ಧಾಂತದ ಬಗೆಗಿನ ಟೀಕೆಯಿದೆ. 'ಸಂಸಾರ'ವನ್ನು ನಡೆಸುವುದು–ನಿರ್ವಹಿಸುವುದು ಎಂದರೆ ಅದು ಆರ್ಥಿಕ ಕ್ಷೇತ್ರಕ್ಕೆ ಸಂಬಂಧಿಸಿದ ಸಂಗತಿ ತಾನೆ! 'ಕರ್ಮಕ್ಕೆ ಕರ್ತೃವೇ ಕಡೆಯೆಂದೆನ್ನೆನು' ಎಂದಾಗ ಇಡೀ ಕರ್ಮ ಸಿದ್ಧಾಂತ, ಮಾಯಾವಾದ, ಭಗವದ್ಗೀತೆ, ನಿಷ್ಕಾಮ ಕರ್ಮ ಎಲ್ಲವನ್ನು ಬಸವಣ್ಣ ತಿರಸ್ಕರಿಸಿದ ವಿಚಾರ ಇಲ್ಲಿದೆ. ಕರ್ತೃ ಒಬ್ಬ ಇದ್ದಾನೆ, ಅವನು ಎಲ್ಲವನ್ನು ನಿರ್ಧರಿಸುತ್ತಾನೆ ಎಂಬ ಭಗವದ್ಗೀತೆಯಲ್ಲಿನ ಭಗವಂತನ ಉಪದೇಶಕ್ಕೆ ಇಲ್ಲಿ ಜಾಗವಿಲ್ಲ. ನಮ್ಮ ಬದುಕನ್ನು ನಾವೇ ನಿರ್ವಹಿಸಬೇಕು. ಪರಾವಲಂಬನೆಯ ಬದುಕು ಬಸವ ಸಂವಿಧಾನಕ್ಕೆ ಒಪ್ಪಿಗೆಯಿಲ್ಲ. ನಮ್ಮ ಬದುಕಿಗೆ ನಾವೇ ಕಡೆಯಲ್ಲದೆ ಇನ್ನಾರೋ ಕರ್ತೃ ಕಡೆಯಲ್ಲ.

'ನೀ ಮಾಡಿದಡಾಯಿತ್ತೆಂದೆನ್ನೆನು' ಎನ್ನುವ ಸಾಲಿನಲ್ಲಿ ಕಾಯಕ ಸಿದ್ಧಾಂತವಿದೆ. 'ಕರ್ತೃ' ಒಬ್ಬ ಇದ್ದಾನೆ. ಅವನು ಅಂತಿಮವಾಗಿ ಎಲ್ಲವನ್ನು ನಿರ್ಧಾರ ಮಾಡುತ್ತಾನೆ ಎಂಬುದು ವೈದಿಕ–ವೇದಾಗಮಶಾಸ್ತ್ರ ಪ್ರಣೀತ ಸಿದ್ಧಾಂತ. ಇದನ್ನು ಬಸವಣ್ಣ ತಿರಸ್ಕರಿಸುತ್ತಿದ್ದಾನೆ. ಒಬ್ಬರು ಮತ್ತೊಬ್ಬರ ಪರವಾಗಿ ಕೆಲಸ ಮಾಡುವ ಅಥವಾ ಯಾವುದೋ ಶಕ್ತಿ ಒಬ್ಬರ ಬದುಕನ್ನು ನಿರ್ಧರಿಸುತ್ತದೆ–ನಿರ್ವಹಿಸುತ್ತದೆ ಎಂಬ ವಿಚಾರದ ಬಗ್ಗೆ ಬಸವಣ್ಣನಿಗೆ ನಂಬಿಕೆಯಿಲ್ಲ. ಅವನು ಬರೆದ ಷರ: ಸಂಸಾರವ ಸವೆಯ ಬಳಸುವೆನು.

ತಮ್ಮ ಇನ್ನೊಂದು ವಚನದಲ್ಲಿ 'ಕಾಯಗುಣ' ದ ಬಗ್ಗೆ, 'ಪ್ರಸಾದ ಕಾಯ'ದ ಬಗ್ಗೆ ಮಾತನಾಡುತ್ತಾನೆ. ಅವನ ಈ ವಚನ ಹೀಗಿದೆ:

ಒಲ್ಲೆನೆಂಬುದು ವೈರಾಗ್ಯ, ಒಲುವೆನೆಂಬುದು<br>ಕಾಯಗುಣ<br>ಆವ ಪದಾರ್ಥವಾದಡೇನು? ತನ್ನಡೆಗೆ ಬಂದುದ<br>ಲಿಂಗಾರ್ಪಿತವ ಮಾಡಿ ಭೋಗಿಸುವುದೆ ಆಚಾರ<br>ಕೂಡಲ ಸಂಗದೇವರನೊಲಿಸ ಬಂದ<br>ಪ್ರಸಾದಕಾಯವ ಕೆಡಿಸಲಾಗದು

ಕಾಯಗುಣವನ್ನು ಪೂರೈಸಬೇಕು ಮತ್ತು ಪ್ರಸಾದ ಕಾಯವನ್ನು ಭೋಗಿಸಬೇಕು ಎಂಬುದರ ಬಗ್ಗೆ ಇಲ್ಲಿ ಬಸವಣ್ಣನವರು ಮಾತನಾಡುತ್ತಿದ್ದಾರೆ. ಈ ವಿಷಯ ಕುರಿತಂತೆ ನಾನು ಹೇಳುವುದಕ್ಕಿಂತ ಈ ಬಗ್ಗೆ ಪ್ರೊ. ಸಂ.ಶಿ. ಭೂಸನೂರಮಠ ಅವರ ಮಾತನ್ನು ಉಲ್ಲೇಖಿಸುವುದು ಸೂಕ್ತ ಎಂದು ಭಾವಿಸುತ್ತೇನೆ. 'ಕಾಯಕವೆ ಕೈಲಾಸ', ಕಾಯಕದಲ್ಲಿ ಕೈಲಾಸ, ಸ್ವರ್ಗ, ನಂದನ, ಕಾಮಧೇನು, ಕಲ್ಪವೃಕ್ಷ, ಚಿಂತಾಮಣಿ, ಕಾಯಕದಲ್ಲಿ ಕಾಯದ ಮೋಕ್ಷ. ಅದರಲ್ಲಿರುವ ಆನಂದ ದುಡಿಯದೆ ಉಣ್ಣುವ 'ಧೀರ'ರಿಗೆ, ನಮಗೆ ಕಂಡಿಲ್ಲ. ಹೇಗೆ ಕಾಣಬೇಕು? 'ಸತಿಯರ ಸಂಗ', 'ಅತಿಶಯದಗ್ರಾಸ', 'ಪೃಥ್ವಿಗೀಶ್ವರನ ಪೂಜೆ'ಯನ್ನು ಹೆರರ ಕೈಯಲ್ಲಿ ಮಾಡಿಸಬೇಕೆ? ಎಂದು ಮನುಷ್ಯ ಕುಲಕ್ಕೆ ಸವಾಲು ಹಾಕುತ್ತಾರೆ ದೇವರ ದಾಸಿಮಯ್ಯಗಳು. ಲಿಂಗ ಪೂಜೆಯ ಮಾಡಿದವರಿಗೆ ಭಕ್ತಿಯ ಆನಂದ. ಇವರಂತೆಯೇ ಇದೆ ಕಾಯಕದಲ್ಲಿ ಕೈಲಾಸ ಸುಖ. ನಾನು ಹರಗಿ, ನಾನು ಬಿತ್ತಿ, ನಾನು ಬೆಳೆದ ಬೆಳೆಯನ್ನು ನೋಡಿದರೆ ಯಾವ ಆನಂದದ ರಾಶಿ ನನ್ನ ಕಣ್ಣಲ್ಲಿ ಉಕ್ಕಲೇರುತ್ತದೆ? ಹರ್ಷದ ರಾಶಿ. ಎಷ್ಟು ಖಂಡುಗ ನನ್ನ ಎದೆಯಲ್ಲಿ? ನಟ್ಟು ಕಡಿದು, ಕಸ ತೆಗೆದು, ಎಡೆ ಹೊಡೆದ ಕೈಯಲ್ಲಿ ಯಾವ ಕೈಲಾಸ ಹೊಳೆಯುತ್ತದೆ? ನಡೆದ ಕಾಲು, ದುಡಿದ ರಟ್ಟೆಯಲ್ಲಿ ಹರಿವ ಬೆವರು ಹಣ್ಣು ಹಣ್ಣಾದ ಮೈಯಲ್ಲಿ ಮೂಡುವ ಮೋಕ್ಷ 'ಮಾಡದ ಯೋಗಿಗೆ ದುಡಿಯದ ಜ್ಞಾನಿಗೆ




**ದೆಹಲಿ ಕರ್ನಾಟಕ ಸಂಘದ ನೂತನ ಅಧ್ಯಕ್ಷ ಶ್ರೀ ರೇಣುಕುಮಾರ್ ಆರ್. ಅವರನ್ನು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ, ಬೆಂಗಳೂರು ಇವರು ಅಭಿನಂದಿಸಿದರು.**

ಕಷ್ಟಪಡದ ದೇವರ ಭಕ್ತಿನಿಗೆ' ಹೇಗೆ ಲಭಿಸೀತು? (ಪ್ರೊ. ಸಂ.ಶಿ. ಭೂಸನೂರಮಠ. ಬಯಲು. ಪುಟ; 98). ಇಲ್ಲಿ ಭೂಸನೂರಮಠ ಅವರು ಒಂದು ಕಡೆ ತಾನು ದುಡಿಯದೆ ಮತ್ತೊಬ್ಬರ ದುಡಿಮೆಯಲ್ಲಿ ಬದುಕುವ, ಸ್ವರ್ಗ, ಕಾಮಧೇನು, ಚಿಂತಾಮಣಿ ಕಾಣುವ ವೈದಿಕ ಸಂಸ್ಕೃತಿ ಬಗ್ಗೆ ಮತ್ತೊಂದು ಕಡೆ ತಾನೇ ದುಡಿದು ತಾನೇ ಅನುಭವಿಸುವ ಸುಖದ ಬಗ್ಗೆ ಮಾತನಾಡುತ್ತಿದ್ದಾರೆ. ಇವುಗಳ ನಡುವಿನ ಮುಖ್ಯ ಭಿನ್ನತೆಯನ್ನು ತೋರಿಸುತ್ತಿದ್ದಾರೆ. ಇದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಭೂಸನೂರಮಠ ಅವರ ಮಾತು ಬಹಳ ಮುಖ್ಯ. ಇಲ್ಲಿ ನಿಷ್ಕಾಮಕರ್ಮದ ಟೀಕೆಯಿದೆ–ತಿರಸ್ಕಾರವಿದೆ. ಇದಕ್ಕೆ ಎದುರಾಗಿ ಬಸವ ಸಂವಿಧಾನದ ಕಾಯಕ ಸಿದ್ಧಾಂತವನ್ನು ಭೂಸನೂರಮಠ ಅವರು ಮಂಡಿಸುತ್ತಿದ್ದಾರೆ. ಬಸವ ಸಂವಿಧಾನದ್ದು 'ದುಡಿದುಣ್ಣುವ ಸಂಸ್ಕೃತಿ'ಯಾದರೆ ವೈದಿಕದ್ದು 'ಕುಳಿತುಣ್ಣುವ ಸಂಸ್ಕೃತಿ'. ನಿಷ್ಕಾಮ ಕರ್ಮ ಮಾರ್ಗದ ಬಗ್ಗೆ ಭೂಸನೂರಮಠ ಹೇಳುವ ಮಾತುಗಳು ಹೀಗಿದೆ: 'ಪ್ರಪಂಚದ ಸೆಳೆವಿನಲ್ಲಿ ಹರಿದು ಹೋಗುತ್ತಿರುವ ಮನುಷ್ಯನನ್ನು ಮಾನುಷ ಪ್ರವೃತ್ತಿಯಿಂದ ತಿರುಗಿಸಿ, ಮೇಲುಗಡೆ ಬ್ರಹ್ಮಕ್ಕೆ ಎತ್ತುತ್ತದೆ ಜ್ಞಾನ ಮಾರ್ಗ. ಇದು ಕಲ್ಯಾಣ ಮಾರ್ಗವೇ. ಆದರೆ ಈ ಮಾರ್ಗ ಮಾನವನ ಬುದ್ಧಿ, ಹೃದಯ, ಪ್ರಾಣ, ಭಾವ, ಕಣ್ಣು, ಮೂಗು, ಕೈ, ಕಾಲು–ಇವರ ಮನಸ್ಸು ಒಪ್ಪುವ ಮಾರ್ಗವಲ್ಲ. ಅರಿವನ್ನು ಪರಬ್ರಹ್ಮಕ್ಕೆ, ಅರಿವಿನ ಅರಮನೆಯಾದ ದೇಹ ಪ್ರಾಣಾದಿಗಳನ್ನು ಮತ್ತೆ ಅರಿವಿನ ಮಹಾಮನೆಯಾದ ಜಗತ್ತನ್ನು 'ಮಾಯೆ' ಎಂದು 'ಸನ್ಯಸನ' ಮಾಡಿ ಕೆಳಗಿಟ್ಟು ಹೋದರೆ, ಮನುಷ್ಯ ಹೇಗೆ ಒಪ್ಪಬೇಕು? ಜಗತ್ತು ಏಕೆ ಒಪ್ಪಬೇಕು?'.

ಬಸವ ಸಂವಿಧಾನದಲ್ಲಿ ದುಡಿಮೆ ಮನುಷ್ಯನಿಗೆ ಮುಖ್ಯ. ಜಗತ್ತು–ಅಂದರೆ ಬದುಕು ನಿತ್ಯ–ಸತ್ಯ. ಇದು ಹಾಳುಮಾಡಿಕೊಳ್ಳುವುದಕ್ಕಲ್ಲ. ಒಂದು ಮಿತಿಯೊಳಗೆ ಬದುಕನ್ನು ಅನುಭವಿಸಬೇಕು. ಈ ಮಿತಿಯನ್ನು ಅಲ್ಲಮಪ್ರಭುದೇವರು ತಮ್ಮ ಒಂದು ವಚನದಲ್ಲಿ 'ಮಿಗಬಾರದು, ಮಿಗದಿರಬಾರದು, ಒಡಲಿಚ್ಛೆಯ ಸಲಿಸದೆ ನಿಮಿಷವಿರಬಾರದು' ಎನ್ನುತ್ತಾರೆ. ಸಂಪನ್ಮೂಲಗಳನ್ನು ಬಳಸದೆ –ಅನುಭೋಗಿಸದೆ ಇರಬಾರದು. ಅದೇ ಸಮಯದಲ್ಲಿ ಅವೆಲ್ಲವೂ ಮಿಗದಂತೆ ಖಾಲಿ ಮಾಡಬಾರದು. ಯಾವುದನ್ನು ಇಂದು ನಾವು 'ಸುಸ್ಥಿರ ಬದುಕು'–ಸಸ್ಟೈನಬಲ್ ಲಿವಿಂಗ್ ಬಗ್ಗೆ ಮಾತನಾಡುತ್ತಿದ್ದೇವೆಯೋ ಅದರ ಬಗ್ಗೆ ಇಲ್ಲಿ ಅಲ್ಲಮಪ್ರಭುಗಳು ಮಾತನಾಡುತ್ತಿದ್ದಾರೆ. ಇದು ಬದುಕನ್ನು ಕುರಿತ ವಚನ ಪ್ರಣಾಳಿಕೆಯಾಗಿದೆ. ವಚನಕಾರರೆಲ್ಲರೂ–ವಚನಕಾರ್ತಿಯರೆಲ್ಲರೂ ಈ ಬಗ್ಗೆ ಮಾತನಾಡುತ್ತಾರೆ. ಇದು ಬಹಳ ಮುಖ್ಯ. ಅಂಬಿಗರ ಚೌಡಯ್ಯ ಅವರು 'ದೇಹಾರ ಮಾಡುವ ಅಣ್ಣಗಳಿರಾ ಒಂದು ತುತ್ತು ಆಹಾರವನ್ನಿಕ್ಕಿರಯ್ಯಾ, ದೇಹಾರಕ್ಕೆ ಆಹಾರವೇ ನಿಚ್ಚಳಿಕೆ' ಎನ್ನುತ್ತಾರೆ.

ಭೂಸನೂರಮಠ ಅವರ 'ಬಯಲು' ಕೃತಿಯಲ್ಲಿ ಮಾಯಾವಾದದ ಬಗ್ಗೆ ಅವರು ಹೇಳಿರುವ ಮಾತುಗಳು ಹೀಗಿವೆ: "ಮಾಯೆ ಬೆಂಬತ್ತಿರುವ ಅದ್ವೈತ ಇದು. ಬ್ರಹ್ಮ ಸತ್ಯ, ಜಗತ್ತು ಮಿಥ್ಯೆ, ಮಾಯೆ. ಸುಳ್ಳಾದ ಜಗತ್ತಿನಲ್ಲಿ ನಡೆದ ವ್ಯಾಪಾರ ಸುಳ್ಳು. ಜಗತ್ತಾಗಿ ನಡೆದಿರುವ ಪ್ರಪಂಚವಿಲಾಸ, ಮಾಯೆಯಾಡುವ ಮಿಥ್ಯಾಸಂಭ್ರಮ. ನಾನು ಬರೆವುದು ಮಾಯೆ, ನೀವು ಓದುತ್ತಿರುವುದು ಮಾಯೆ. ನನ್ನ ಬುದ್ಧಿಯಲ್ಲಿ ಸಂತೆಗೂಡಿರುವ ವಿಚಾರ ಮಾಯೆ. ನನ್ನ ಭಾವದಲ್ಲಿ ನೆರೆದಿರುವ ಜಾತ್ರೆ ಮಾಯೆ, ಪ್ರಾಣದ ಉಸಿರುವ ಮಾಯೆ, ಕೈಯ ಕೃತಿ ಮಾಯೆ, ನೋಡುವುದು ಮಾಯೆ, ನೋಡಿಸಿಕೊಂಬುದು ಮಾಯೆ, ಕೇಳುವ ಕಿವಿ ಮಾಯೆ, ಕೇಳಿಸಿಕೊಳ್ಳುವ ಶಬ್ದಪ್ರಪಂಚ ಮಾಯೆ, ; ಹಾಗಿದ್ದರೆ ಇಂಥ ಜಗತ್ತಿನಲ್ಲಿ ಇಂಥ ನಾನು ಇರಬೇಕು ಏಕೆ? ; ಕೇವಲ ಜ್ಞಾನ ಮಾರ್ಗದ ಗಂತವ್ಯ ಇದು.

ಮಾನವನನ್ನು ಪ್ರಪಂಚದಿಂದ ನಿವೃತ್ತಗೊಳಿಸಿ ಬ್ರಹ್ಮಕ್ಕೆ ಕೊಂಡೆಯ್ದು ನಿವೃತ್ತಿ ಮಾರ್ಗ ಇದು. ನಾವೆಲ್ಲ ಪ್ರಪಂಚದಲ್ಲಿ ತೊಡಗಿರುವ ಪ್ರವೃತ್ತಿ ಮಾರ್ಗವನ್ನು ಶಂಕರಾಚಾರ್ಯರಾಗಲಿ ಅಥವಾ ಬೇರಾವ ಜ್ಞಾನಿಗಳಾಗಲಿ ನಮಗೆ ಹೇಳಬೇಕಿಲ್ಲ. ಮೀನಿಗೆ ನೀರಿನ ಪರಿಚಯ ಯಾರು ಮಾಡಿಕೊಡಬೇಕು? ಪ್ರಪಂಚವನ್ನು ಅಲ್ಲಗಳೆದು ಜಗತ್ತು ಮಿಥ್ಯೆ ಎಂದು ಹೇಳಿದ 'ಮಾಯಾವಾದ' ಮಾನವ ಕುಲದ ಪರಿಪೂರ್ಣ ಜೀವನಕ್ಕೆ ಮಾರಕ ಮಂತ್ರವಾದಂತೆ ಪರಿಣಮಿಸಿದೆ. ಮಾಯಾವಾದ ಮಾಯೆ ಸರ್ವಾಂಗ ಸಂತೃಪ್ತಿಯನ್ನು ಬೇಡುವ ಪರಿಪೂರ್ಣದ ಹೃದಯ ಒಪ್ಪುವ ವಿಚಾರ ಅದಲ್ಲ" ಸಂ.ಶಿ. ಭೂಸನೂರಮಠ. ಬಯಲು. ಪುಟ: 31–36).

ಸಮಾಜದ ಬಹುದೊಡ್ಡ ವರ್ಗವೊಂದನ್ನು ಚಾತುರ್ವರ್ಣದ ಹೊರಗಿಟ್ಟಿದ್ದ ವೈದಿಕಕ್ಕೆ ಬಸವ ಸಂವಿಧಾನ ಸವಾಲೆಸೆಯಿತು. ಈ ಚಾತುರ್ವರ್ಣ ಪ್ರಣಾಳಿಕೆಯನ್ನು ಎದುರಾಗಿಟ್ಟುಕೊಂಡು– ಕೌಂಟರಾಗಿಟ್ಟುಕೊಂಡು ಬಸವ ಸಂವಿಧಾನದ ಅಧ್ಯಯನ, ಚರ್ಚೆ, ಮಂಥನ ನಡೆಯಬೇಕು. ನಮ್ಮ ಬದುಕೂ ಸಹ ಅದೇ ರೀತಿಯಲ್ಲಿ ಬಸವ ಸಂವಿಧಾನದ ಚೌಕಟ್ಟಿನಲ್ಲಿ ನಡೆಯಬೇಕು. ಈ ಬಗ್ಗೆ ಮೌನವಹಿಸಿ ಬಸವ ಸಂವಿಧಾನದ ಬಗ್ಗೆ ಏನೆಲ್ಲ ಮಾತನಾಡಿದರೂ ಅದಕ್ಕೆ ನ್ಯಾಯ ಒದಗಿಸುವುದು ಸಾಧ್ಯವಿಲ್ಲ. ಇಂತಹ ಎಡಬಿಡಂಗಿತನವನ್ನು ಪ್ರಜ್ಞಾಪೂರ್ವಕವಾಗಿ ನಾವು ಬಿಡಬೇಕು. ಈ ಬಗ್ಗೆ ಬಸವಣ್ಣ ನಮಗೆ ಒಂದು ಸೂಚನೆಯನ್ನು ನೀಡಿದ್ದಾನೆ, ಒಂದು ಜವಾಬ್ದಾರಿ ನೀಡಿದ್ದಾನೆ. ಆದರೆ ಇದನ್ನು ನಾವು ಹೆಚ್ಚು ಅನ್ವೇಷಣೆ ಮಾಡಲಿಲ್ಲ. ಬಸವಣ್ಣನವರು ಏನು ಸೂಚನೆ ಕೊಟ್ಟಿದ್ದಾರೆ?

ಹೊನ್ನು ಹೆಣ್ಣು, ಮಣ್ಣೆಂಬ ಕರ್ಮದ ಬಲೆಯಲ್ಲಿ ಸಿಲುಕಿ
ವೃಥಾಯ ಬರುದೊರೆ ಹೋಹ ಕೆಡುಕ ಹಾರವ ನಾನಲ್ಲ.
ಹಾರುವೆನಯ್ಯಾ ಭಕ್ತರ ಬರವ ಗುಡಿ ಕಟ್ಟಿ
ಹಾರುವೆನಯ್ಯಾ ಶರಣರ ಬರವ ಗುಡಿ ಕಟ್ಟಿ
ಕೂಡಲಸಂಗಮದೇವನು ವಿಪ್ರಕರ್ಮವ ಬಿಡಿಸಿ
ಅಶುದ್ಧನ ಶುದ್ಧನ ಮಾಡಿದನಾಗಿ

ಇದು ಆ ಸೂಚನೆ. ನಮಗೆ ಇದಿನ್ನೂ ಅರ್ಥವಾದಂತಿಲ್ಲ. ಬಸವಣ್ಣ 12ನೆಯ ಶತಮಾನದಲ್ಲಿ ಸಮಾಜವನ್ನು 'ವಿಪ್ರಕರ್ಮ'ದ ಸಂಕೋಲೆಯಿಂದ– ಬಲೆಯಿಂದ–ಸೆರೆಯಿಂದ ಬಿಡುಗಡೆಗೊಳಿಸಲು ಪ್ರಯತ್ನಿಸಿದ. ಅದಕ್ಕಾಗಿ ಸಂಘರ್ಷವನ್ನು ಎದುರಿಸಿದ. ಬಸವಣ್ಣನವರ ಬದುಕೇ ಸಂಘರ್ಷಮಯವಾದುದು. ವೈದಿಕವನ್ನು ಅವರು ನೇರವಾಗಿ ಎದುರಾಕಿಕೊಂಡರು,. ಆ ಸಂಘರ್ಷದಲ್ಲಿ ನೋವು–ಹಿಂಸೆ ಅನುಭವಿಸ ಬೇಕಾಯಿತು. ಇದಕ್ಕಾಗಿ ಕಲ್ಯಾಣವನ್ನು ತೊರೆಯಬೇಕಾಯಿತು. ಈ ಸಂಘರ್ಷದಲ್ಲಿ ನೂರಾರು–ಸಾವಿರಾರು ಶರಣರು–ಶರಣೆಯರು ಪ್ರಾಣ ತೆತ್ತರು. ಇಂತಹ ಒಂದು ಪ್ರಯತ್ನಕ್ಕೆ ಬದಲಾಗಿ ಇಂದು ಕರ್ನಾಟಕದಲ್ಲಿ ವಿಪ್ರಕರ್ಮದ ವಿಜೃಂಭಣೆಯನ್ನು ಕಾಣುತ್ತಿದ್ದೇವೆ. ವಿಪ್ರಕರ್ಮದ ಮುಂದೆ 'ತಲೆಬಾಗಿ' ನಿಲ್ಲುವ ಸ್ಥಿತಿಗೆ ಬಸವ ಸಂವಿಧಾನವನ್ನು ತಂದು ನಿಲ್ಲಿಸಿದ್ದೇವೆ. ಬಸವಣ್ಣ ಹೇಳುವ ವಿಪ್ರಕರ್ಮ ಎಂಬುದು 'ಅಶುದ್ಧ'. ಅದರಿಂದ ಸಮಾಜವನ್ನು ಬಸವಣ್ಣ ಬಿಡಿಸಿದ್ದರಿಂದ ನಾವೆಲ್ಲ 'ಶುದ್ಧ'ರಾಗಿದ್ದೇವೆ. ಆದರೆ ಮತ್ತೆ ಅಶುದ್ಧರಾಗುವುದಕ್ಕೆ ತಲೆ ಬಾಗುತ್ತಿದ್ದೇವೆ(ತಲೆಬಾಗು ಎನ್ನುವುದನ್ನು ಮತ್ತೆ ಮತ್ತೆ ಉದ್ದೇಶಪೂರ್ವಕವಾಗಿ ಬಳಸುತ್ತಿದ್ದೇನೆ. ಏಕೆ ಎಂಬುದನ್ನು ತಾವು ಅರ್ಥ ಮಾಡಿಕೊಂಡಿದ್ದೀರಿ ಎಂದು ನಾನು ಭಾವಿಸಿದ್ದೇನೆ). ವಿಪ್ರಕರ್ಮದ ಬಲೆಗೆ ಸಿಲುಕುವುದೆಂದರೆ ನಮ್ಮನ್ನು ನಾವು 'ಅಶುದ್ಧ' ರಾಗುವ ಪ್ರಕ್ರಿಯೆ.

**ಕಾಯಕ ಮೀಮಾಂಸೆಯೆಂಬ ಅಭಿವೃದ್ಧಿ ಪ್ರಣಾಳಿಕೆ**

ಇಡೀ ಸಮಾಜ ಭೂಸನೂರಮಠ ಅವರು ಹೇಳುವ 'ನಡೆದ ಕಾಲು, ದುಡಿದ ರಟ್ಟೆಯಲ್ಲಿ ಹರಿವ ಬೆವರು, ಹಣ್ಣು ಹಣ್ಣಾದ ಮೈಯಲ್ಲಿ' ಎಂಬ ವಚನ ಸಂವಿಧಾನದ ಕಾಯಕ ಮೀಮಾಂಸೆಯ ಪ್ರಕಾರ ಕಾಯಕದಲ್ಲಿ ತೊಡಗಿದರೆ ಆ ಸಮಾಜದಲ್ಲಿ ಸಮೃದ್ಧಿ – ಸುಭಿಕ್ಷ ಉಂಟಾಗದಿರುವುದು ಹೇಗೆ ಸಾಧ್ಯ? ಈ ಕಾರಣದಿಂದಲೇ ನಾನು ಬಸವಾದಿ ಶರಣರ ಕಾಯಕ ಮೀಮಾಂಸೆಯನ್ನು ಅಭಿವೃದ್ಧಿ ಪ್ರಣಾಳಿಕೆ ಎಂದು ಕರೆದಿದ್ದೇನೆ. ಯಾವುದನ್ನು ನಿಷ್ಕಾಮಕರ್ಮ ಎನ್ನಲಾಗುತ್ತಿದೆಯೋ ಇದಕ್ಕೆ ಎದುರಾಗಿ ಬಸವ ಸಂವಿಧಾನ ಕಟ್ಟಿದ್ದೇ ಕಾಯಕ ಮೀಮಾಂಸೆ. ಬಸವ ಸಂವಿಧಾನದಲ್ಲಿ ಕಾಯಕದಿಂದ ಯಾರಿಗೂ ವಿನಾಯಿತಿಯಿಲ್ಲ. ಆಯ್ದಕ್ಕಿ ಮಾರಯ್ಯನವರು ಗುರುಲಿಂಗಜಂಗಮದ ಹಂಗು ತೊರೆದು ಕಾಯಕ ಮಾಡಬೇಕು ಎಂದರೆ ನುಲಿಯ ಚಂದಯ್ಯನವರು



ಗುರುಲಿಂಗಜಂಗಮಗಳೂ ಕಾಯಕ ಮಾಡಬೇಕು ಎಂದು ಹೇಳಿದ್ದಾರೆ. ಅವರಿಗೂ ಕಾಯಕದಿಂದ ವಿನಾಯಿತಿಯಿಲ್ಲ.

ವಚನ ಸಂವಿಧಾನದ ಕಾಯಕ ಮೀಮಾಂಸೆಯೇನಿದೆ ಇದು ಕೇವಲ ಕಾಯಕ ಮಾತ್ರವಲ್ಲ. ಆಯ್ದಕ್ಕಿ ಮಾರಯ್ಯ ಅವರ ವಚನ ಕೇಳಿ:

ಹಾಗದ ಕಾಯಕವ ಮಾಡಿ, ಹಣ ಅಡ್ಡವ ತಾ ಎಂಬಲ್ಲಿ
ಸತ್ಯದ ಕಾಯಕ ಉಂಟೆ?
ಭಕ್ತರಲ್ಲಿ ಕಾಯಕಕ್ಕೆ ಕಡಿಮೆಯಾಗಿ ತಾ ಎಂಬುದು
ಅಮರೇಶ್ವರಲಿಂಗಕ್ಕೆ ಚಿತ್ತಶುದ್ಧದ ಕಾಯಕ.

ಇಲ್ಲಿ ಕಾಯಕವು ಫಲವಿರಹಿತವಾದುದಲ್ಲ. ಅದಕ್ಕಾಗಿಯೇ ಬಸವಣ್ಣ 'ಕರ್ಮಫಲಭೋಗ'ದ ಬಗ್ಗೆ ಮಾತನಾಡುತ್ತಾನೆ. ಕಾಯಕಕ್ಕೆ ನೀಡುವ ಹಣ ಕಡಿಮೆ ಅಥವಾ ಜಾಸ್ತಿ ಎಂಬುದರ ಚರ್ಚೆ ಬೇರೆ. 'ಕಾಯಕಕ್ಕೆ ಕಡಿಮೆಯಾಗಿ'ಯೋ ಅಥವಾ ಹಣ ಅಡ್ಡ ಬೇಡುವುದೊ ಅದು ಬೇರೆ ಚರ್ಚೆ. ಆದರೆ ಕಾಯಕಕ್ಕೆ ಹಣ–ಕೂಲಿ ಬೇಕು, ಸಂಭಾವನೆ ಬೇಕು, ಪರಿಹಾರ ಬೇಕು ಎಂಬುದು ಇಲ್ಲಿನ ತಾತ್ಪರ್ಯ. ಕಾಯಕವು ಫಲರಹಿತವಾದುದಲ್ಲ. ವೈದಿಕ ಸಮಾಜವು ತಾರತಮ್ಯ–ಅಸಮಾನತೆಯಿಂದ ಕೂಡಿದ್ದರೆ ಬಸವ ಸಮಾಜದಲ್ಲಿ ಕಾಯಕಗಳಲ್ಲಿ ತಾರತಮ್ಯವಿಲ್ಲ. 'ದೇವಸಹಿತ ಭಕ್ತರು ಮನೆಗೆ ಬಂದಡೆ ಕಾಯಕವಾವುದೆಂದು ಬೆಸಗೊಂಡನಾದಡೆ ನಿಮ್ಮಾಣೆ' ಎನ್ನುತ್ತಾರೆ ಬಸವಣ್ಣ. ಆದರೆ ಅಸಮಾನತೆಯೆ ವೈದಿಕದ ಮೂಲ ಗುಣ. ಅಲ್ಲಿದ್ದುದು ಶ್ರೇಣೀಕೃತ ಕಾಯಕ–ವೃತ್ತಿಗಳು. ಚಾತುರ್ವರ್ಣದ ಮೊದಲ ಮೂರು ವರ್ಣಗಳು ಉನ್ನತ ಸ್ಥಾನದಲ್ಲಿದ್ದರೆ ನಾಲ್ಕನೆಯ ಶೂದ್ರ ವರ್ಗಕ್ಕೆ ಮೊದಲ ಮೂರು ವರ್ಗಗಳಿಗೆ ಸೇವೆ ಸಲ್ಲಿಸುವ ಹೊಣೆಯನ್ನು ನಿಯಮಿಸಲಾಗಿತ್ತು. ಕಾಯಕ ಸಿದ್ಧಾಂತವನ್ನು ಬಸವಣ್ಣ, ಬಸವಾದಿ ಶರಣರು ಕಟ್ಟಿದ್ದರಿಂದಲೇ ಕಲ್ಯಾಣ ಅಂದು ಸಮೃದ್ಧವಾಗಿತ್ತು–ಸುಭಿಕ್ಷದಿಂದ ಕೂಡಿತ್ತು.

'ಅಟ್ಟೆಯ ಚುಚ್ಚುವ ಉಳಿಯ ಮೊನೆಯಲ್ಲಿ' ಮಾದಾರ ಧೂಳಯ್ಯ ಪರಮಾತ್ಮನನ್ನು ಕಂಡರೆ ದೇವರ ದಾಸಿಮಯ್ಯಗಳು 'ಸೀರೆಯ ನೇಯ್ದುವ ನಾನೋ ನೀನೋ' ಎಂದು ಕಾಯಕದ ತನ್ನ ಸಾಧನೆಯನ್ನು ಗಮನದಲ್ಲಿಟ್ಟುಕೊಂಡು ದೇವರಿಗೆ ಸವಾಲು ಹಾಕುತ್ತಾರೆ. ಕಾಯಕ ಪ್ರಣಾಳಿಕೆಯು ಆಯ್ದಕ್ಕಿ ಲಕ್ಕಮ್ಮನಿಗೆ ಗಂಡನಿಗೆ ಎಚ್ಚರಿಕೆ ನೀಡುವ ಅಧಿಕಾರವನ್ನು ನೀಡುತ್ತದೆ. ಅನುಭವ ಮಂಟಪದಲ್ಲಿ ಚರ್ಚೆಯಲ್ಲಿ ನಿರತನಾಗಿ ಕಾಯಕವನ್ನು ಮರೆತಿದ್ದ ಗಂಡನಿಗೆ 'ಕಾಯಕ ನಿಂದಿತ್ತು ಹೋಗಯ್ಯಾ, ಎನ್ನಾಳ್ದನೆ' ಎಂದು ಲಕ್ಕಮ್ಮ ಎಚ್ಚರಿಸುತ್ತಾಳೆ. ಮಹಿಳೆಯರಿಗೆ ಇಂತಹ ಅಧಿಕಾರ ವೈದಿಕದಲ್ಲಿ ಸಾಧ್ಯವಿರಲಿಲ್ಲ. ಬಸವ ಸಂವಿಧಾನದಲ್ಲಿ ಇದು ಸಾಧ್ಯವಾಯಿತು. ಈ ವಿಷಯದಲ್ಲಿಯೂ ನಮ್ಮ ಅಧ್ಯಯನಗಳು ಎಡವಿದ್ದು ಜಾಸ್ತಿ. ವೈದಿಕತೆಯ ಲಿಂಗ ಸಂಬಂಧಿ ಪ್ರಣಾಳಿಕೆಯ ಎದುರಿಗೆ ಬಸವ ಸಂವಿಧಾನದ ಲಿಂಗ ಸಮಾನತೆಯ ಮೀಮಾಂಸೆಯನ್ನು ಚರ್ಚೆ ಮಾಡುವ ಅಗತ್ಯವಿದೆ.

ಗೊಗ್ಗವ್ವೆಯು ಅಂದು ಹೆಣ್ಣನ್ನು ಒಡವೆಯೆಂದು, ವಸ್ತುವೆಂದು, ಪ್ರಾಪರ್ಟಿ ಎಂದು ಪರಿಭಾವಿಸಿವಿಸಿಕೊಂಡಿದ್ದ ವೈದಿಕ ಪ್ರಣಾಳಿಕೆಗೆ ಎದುರಾಗಿ ಅವಳು ಹೇಳುತ್ತಾಳೆ 'ಈ ಎರಡರ ಉಭಯವ ಕಳೆದು ಸುಖಿ ತಾನಾಗಬಲ್ಲಡೆ ನಾಸ್ತಿನಾಥ ಪರಿಪೂರ್ಣನೆಂಬೆ' ಎನ್ನುತ್ತಾಳೆ. ಗಂಡು ಮೋಹಿಸಿ ಹೆಣ್ಣ ಹಿಡಿದರೆ ಅದು ಒಬ್ಬರ ಒಡವೆಯೆಂದು ತಿಳಿಯಬೇಕು ಎಂಬುದು ವೈದಿಕ ಪ್ರಣಾಳಿಕೆ. ಇದನ್ನು ಪ್ರಶ್ನೆ ಮಾಡುವ ಗೊಗ್ಗವ್ವೆಯು 'ಹೆಣ್ಣು ಮೋಹಿಸಿ ಗಂಡ ಹಿಡಿದಡೆ ಉತ್ತರವಾವುದೆಂದರಿಯಬೇಕು' ಎಂದು ಒಡವೆ ಸಂಸ್ಕೃತಿಯನ್ನು ತಿರಸ್ಕರಿಸುತ್ತಾಳೆ.



ಬಸವ ಸಂವಿಧಾನ ಮಹಿಳೆಯರಿಗೆ ಸಮಾನ ಸ್ಥಾನಮಾನ ನೀಡಿದ್ದು ಮಾತ್ರವಲ್ಲ. ಆಕೆಗೆ ಪ್ರಶ್ನೆ ಕೇಳುವ ಅಧಿಕಾರವನ್ನು ನೀಡಿತ್ತು. ಬಸವಣ್ಣನವರ ಆರ್ಥಿಕ ಮೀಮಾಂಸೆಯಲ್ಲಿ ಮಹಿಳೆಯರಿಗೆ ನೀಡಿದ್ದ ಸಾಮಾಜಿಕವಾಗಿ ಸಮಾನ ಸ್ಥಾನಮಾನದ ಪಾತ್ರವೂ ಆಯಕಟ್ಟಿನದಾಗಿದೆ. ವೈದಿಕದಲ್ಲಿ ಇದು ಸಾಧ್ಯವೇ ಇರಲಿಲ್ಲ. ಆದರೂ ನಮ್ಮ ಅನೇಕ ಬಸವಾನುಯಾಯಿಗಳು, ಬಸವ ಪ್ರಣಾಳಿಕೆಯ ವಿದ್ವಾಂಸರು ಎರಡನ್ನೂ ಮನ್ನಿಸುವ–ಅನುಸರಿಸುವ ದಾರಿಯಲ್ಲಿ ನಡೆಯುತ್ತಿದ್ದಾರೆ.

**ಸಮಾನತೆ ಮೌಲ್ಯ** : ಬದುಕು ಅರ್ಥಪೂರ್ಣವಾಗಬೇಕಾದರೆ ಅದು ಸಮಾನತೆ ಮೌಲ್ಯವನ್ನು ಆಧರಿಸಿರಬೇಕು. ಬಸವ ಸಂವಿಧಾನದ ಬದುಕಿನ ಚಿಂತನೆಯ ಮೂಲ ದ್ರವ್ಯವೇ ಸಮಾನತೆ. ಸಮಾನತೆಯಿಲ್ಲದ ಅಭಿವೃದ್ಧಿಯು ಜನರ ಬದುಕನ್ನು ಉತ್ತಮಪಡಿಸಲಾಗದು. ಸಮಾನತೆಯಿದ್ದರೆ ಮಾತ್ರ ಆರ್ಥಿಕ ಬದುಕು ಸಮೃದ್ಧವಾಗಬಲ್ಲದು. ಸಮಾಜದ ಎಲ್ಲ ವರ್ಗಗಳು ಯಾವ ತಾರತಮ್ಯಗಳಿಲ್ಲದೆ ದುಡಿಮೆಯಲ್ಲಿ ತೊಡಗಿದಾಗ ಅಲ್ಲಿ ಸಮೃದ್ಧತೆ ತಾನೇ ತಾನಾಗಿ ಉಂಟಾಗುತ್ತದೆ. ಬಸವಣ್ಣನ ಕಲ್ಯಾಣ 12ನೆಯ ಶತಮಾನದಲ್ಲಿ ಸಮೃದ್ಧವಾಗಿದ್ದರೆ ಅದಕ್ಕೆ ಬಸವಣ್ಣನ 'ಎಲ್ಲರನ್ನು ಒಳಗೊಳ್ಳುವ ಸಂಸ್ಕೃತಿ', 'ಕಾಯಕ ಮತ್ತು ದಾಸೋಹ' ಮೌಲ್ಯಗಳು ಮುಖ್ಯ ಕಾರಣಗಳಾಗಿವೆ. ಇಂದಿಗೂ ಇವು ಪ್ರಸ್ತುತವಾಗಿವೆ. ❑

**(ಪ್ರಬಂಧದಲ್ಲಿನ ಅಭಿಪ್ರಾಯಗಳು ಲೇಖಕರವು)**

## ಓದುಗರ ಅನಿಸಿಕೆ


ಮಾನ್ಯರೇ, ಎಪ್ರಿಲ್ ತಿಂಗಳ ಅಭಿಮತದ ಸುಂದರ ಮುಖಪುಟ ನೋಡಿ ಬರೆಯಬೇಕೆನ್ನಿಸಿತು. ದೆಹಲಿ ಮತ್ತು ಅದರ ಪರಿಸರದ ಚೆಲುವನ್ನು ಒಳಗೊಳ್ಳುವ ಚಿತ್ರಗಳು ಹೀಗೆ ಪ್ರಕಟವಾಗುತ್ತಲೇ ಇರಲಿ.

ಅಭಿಮತವು ಸಂಘದ ಮುಖಪತ್ರಿಕೆ ಎಂಬುದನ್ನು ನಾನು ಚೆನ್ನಾಗಿ ಬಲ್ಲೆ. ಆದರೂ ಒಂದು ಮಾತು–ಸಂಘವು ರಾಷ್ಟ್ರದ ರಾಜಧಾನಿಯಲ್ಲಿದೆ. ರಾಜಧಾನಿಯು ಅನೇಕ ಭಾಷಿಕರನ್ನು ಒಳಗೊಂಡ ಅಸಾಧಾರಣ ಪ್ರದೇಶ. ದೆಹಲಿ ಕನ್ನಡಿಗರು ಅಂಥ ಬಹುಭಾಷಿಕ ಪರಿಸರದಲ್ಲಿ ಬದುಕುತ್ತಿದ್ದಾರೆ. ಈ ಕಾರಣದಿಂದ ಅಭಿಮತದ ಒಂದು ಸಣ್ಣ ಭಾಗವು ದೆಹಲಿಯನ್ನು ಒಳಗೊಳ್ಳುವಂತಿದ್ದರೆ ಅದರಿಂದ ದೆಹಲಿ ಕನ್ನಡಿಗರಿಗೂ ಪ್ರಯೋಜನವಾದೀತು. ದೆಹಲಿಯ ವಿವಿಧ ಪ್ರದೇಶಗಳ ಪರಿಚಯ, ಅವುಗಳ ಚಾರಿತ್ರಿಕ ಮಹತ್ವ, ದೆಹಲಿಯಲ್ಲಿರುವ ಅನ್ಯಭಾಷಿಕ ಲೇಖಕರ ಮತ್ತು ಕಲಾವಿದರ ಕುರಿತ ಪುಟ್ಟ ಲೇಖನಗಳು, ಬೇರೆ ಭಾಷೆಗಳಿಂದ ಅನುವಾದಗಳು–ಇತ್ಯಾದಿ ವಿಷಯಗಳನ್ನು ಸರಳವಾಗಿ ಒಳಗೊಳ್ಳಬಹುದು. ಸಂಘಕ್ಕೆ ಭೇಟಿ ನೀಡಿದ ಪ್ರಶಸ್ತಿ ವಿಜೇತ ಮಹನೀಯರ ಪಟ್ಟಿಯನ್ನೂ ಹಾಕಬಹುದು. ಗುರುಗಾಂವ್, ನೋಯಿಡಾ, ಫರಿದಾಬಾದ್ ಮತ್ತಿತರ ಸ್ಥಳಗಳಲ್ಲಿ ಕೆಲಸ ಮಾಡುತ್ತಿರುವ ಕನ್ನಡಿಗರ ಅನುಭವವನ್ನು ಅಭಿಮತ ಒಳಗೊಳ್ಳಬೇಕು. ಹೀಗೆ ಹೊಸ ಯೋಚನೆ ಮತ್ತು ಯೋಜನೆಗಳಿಂದ ಅಭಿಮತ ಬೆಳೆಯುತ್ತಾ ಮುಂದುವರೆಯಲಿ.

ಹೊಸ ಆಡಳಿತ ಮಂಡಳಿಗೆ ಮತ್ತು ಅಭಿಮತ ಸಂಪಾದಕೀಯ ಮಂಡಳಿಗೆ ಅಭಿನಂದನೆಗಳು ಹಾಗೂ ಶುಭಾಶಯಗಳು. ಸಂಘದ ಹಿಂದಿನ ಆಡಳಿತ ಮಂಡಳಿಗೂ ಕೃತಜ್ಞತೆಗಳು.

**ಡಾ. ಪುರುಷೋತ್ತಮ ಬಿಳಿಮಲೆ**

## ಅಭಿನಂದನೆ



ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾದ **ಶ್ರೀ ಶ್ರೀನಿವಾಸ ಜಿ. ಕಪ್ಪಣ್ಣ** ಅವರು ರಂಗಭೂಮಿ ಮತ್ತು ಜಾನಪದ ಕಲೆಗಳಿಗೆ ಅವರು ನೀಡಿರುವ ಅಪಾರ ಕೊಡುಗೆಯನ್ನು ಪರಿಗಣಿಸಿ ಪ್ರತಿಷ್ಠಿತ ನೃಪತುಂಗ ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ನೀಡಿ ಗೌರವಿಸಿದೆ. ಗೌರವ ಡಾಕ್ಟರೇಟ್‌ಗೆ ಭಾಜನರಾದ ಶ್ರೀನಿವಾಸ ಜಿ. ಕಪ್ಪಣ್ಣ ಅವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಮತ್ತು ದೆಹಲಿ ಕರ್ನಾಟಕ ಸಂಘದ ಪರವಾಗಿ ಅಭಿನಂದನೆಗಳು.

ಇವರಿಗೆ 2022 ರಲ್ಲಿ ದೆಹಲಿ ಕರ್ನಾಟಕ ಸಂಘದ ಕನ್ನಡ ಭಾರತೀ–ರಂಗ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.

# 21ನೇ ಶತಮಾನಕ್ಕೆ ಬಸವ ಧರ್ಮ

ಲಿಂಗಭೇದ, ವರ್ಣಭೇದ ಮತ್ತು ವರ್ಗಭೇದಗಳು 21ನೇ ಶತಮಾನಕ್ಕೆ ಭಾರಿ ದೊಡ್ಡ ಸವಾಲುಗಳಾಗಿ ನಿಂತಿವೆ. ಈ ಭೇದಗಳಲ್ಲದೆ ಭಯೋತ್ಪಾದನೆ, ಜನಾಂಗಹತ್ಯೆ, ಯುದ್ಧ, ನಿರುದ್ಯೋಗ, ಆರ್ಥಿಕ ಹಿಂಜರಿತ, ಕೊಲೆ, ಸುಲಿಗೆ, ಅತ್ಯಾಚಾರ, ಹಸಿವು, ಬಡತನ, ಮಾನಸಿಕ ಒತ್ತಡ ಮತ್ತು ಪರಿಸರ ಸಮಸ್ಯೆಗಳು ಇಡೀ ವಿಶ್ವವನ್ನು ಕಾಡುತ್ತಿವೆ. ಜನಾಂಗಗಳ ಮತ್ತು ದೇಶಗಳ ಮಧ್ಯೆ ಅಪನಂಬಿಕೆ ಹೆಚ್ಚುತ್ತಿದೆ. ಮಾನವೀಯತೆ, ಜೀವಕಾರುಣ್ಯ ಮತ್ತು ಎಲ್ಲ ಜನಾಂಗಗಳ ಬಗೆಗಿನ ಪ್ರೇಮಭಾವ ಕಡಿಮೆಯಾಗುತ್ತ ದ್ವೇಷ ಬೆಳೆಯುತ್ತಿದೆ. ಇಂಥ ವಿಷಮ ಪರಿಸ್ಥಿತಿಯಲ್ಲಿ ವಿಶ್ವಮಾನ್ಯವಾದ ಬಸವಣ್ಣನವರ ಚಿಂತನೆಗಳು, ಜಗತ್ತನ್ನು ಎಲ್ಲ ಅನಿಷ್ಟಗಳಿಂದ ಮುಕ್ತಗೊಳಿಸುವ ಶಕ್ತಿಯನ್ನು ಹೊಂದಿವೆ.

ಭೌತಿಕ ಜಗತ್ತಿನ ಕಾಳಜಿಯೊಂದಿಗೆ ಆಧ್ಯಾತ್ಮಿಕ ಜಗತ್ತಿನ ಕಡೆಗೆ ಸಾಗುವುದು. ಭೌತಿಕ ಜಗತ್ತಿನ ಅನುಭವದ ಮೂಲಕ ಆಧ್ಯಾತ್ಮಿಕ ಜಗತ್ತಿನ ಅನುಭಾವ ಪಡೆಯುವುದು. ಸಂಸಾರದಲ್ಲಿ ಇದ್ದುಕೊಂಡೇ ಸದ್ಗತಿಯನ್ನು ಹೊಂದುವುದು. ಸಮಾಜಸೇವೆಯ ಮೂಲಕ ದೇವರಲ್ಲಿ ನಿಷ್ಠೆಯನ್ನು ಹೊಂದುವುದು. ಎಲ್ಲ ಧರ್ಮಗಳ ಜನರ ಬಗ್ಗೆ ಮತ್ತು ಎಲ್ಲ ಪಶು ಪಕ್ಷಿ ಮುಂತಾದ ಜೀವಿಗಳ ಬಗ್ಗೆ ಕಾಳಜಿಯನ್ನು ವ್ಯಕ್ತಪಡಿಸುವುದು. ಪರಿಸರ ಸಮತೋಲನವನ್ನು ಕಾಪಾಡುವುದು. ದೇಶ, ಭಾಷೆ, ಜಾತಿ, ಧರ್ಮ ಮತ್ತು ಜನಾಂಗಗಳ ಮಧ್ಯೆ ಮಾನವೀಯ ಸಂಬಂಧಗಳನ್ನು ಬೆಳೆಸುವುದು. "ಒಬ್ಬನೇ ದೇವರು, ಒಂದೇ ವಿಶ್ವ ಮತ್ತು ಒಂದೇ ಮಾನವ ಜನಾಂಗ" ಎಂಬ ಸತ್ಯವನ್ನು ಸಾರುವುದು ಲಿಂಗವಂತ ಧರ್ಮ ಎಂಬ ಬಸವಧರ್ಮದ ಗುರಿಯಾಗಿದೆ.

ಬಸವಣ್ಣನವರು 12ನೇ ಶತಮಾನದಲ್ಲೇ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಎತ್ತಿಹಿಡಿದರು. ಸಮಾಜೋಧಾರ್ಮಿಕ ಸಂಸತ್ತು ಎಂದು ಕರೆಯಿಸಿಕೊಳ್ಳುವ ಅನುಭವ ಮಂಟಪವನ್ನು ಸ್ಥಾಪಿಸಿದರು. ಈ ಅನುಭವ ಮಂಟಪದಲ್ಲಿ ಎಲ್ಲ ಕಾಯಕ ಜೀವಿಗಳ 770 ಪ್ರತಿನಿಧಿಗಳಿದ್ದರು. ಕಸಗುಡಿಸುವವರ, ತೊಗಲು ಹದ ಮಾಡುವವರ, ಪಾದರಕ್ಷೆಗಳನ್ನು ಹೊಲಿಯುವವರ, ದೋಣಿ ನಡೆಸುವವರ, ಬಟ್ಟೆ ಒಗೆಯುವವರ, ಹುಲ್ಲು ಮಾರುವವರ, ರೈತರ, ನೇಕಾರರ, ಕ್ಷೌರಿಕರ, ಬಡಗಿಗಳ, ವೈದ್ಯರ, ದನ ಕಾಯುವವರ, ಕಟ್ಟಿಗೆ ಮಾರುವವರ, ಕಮ್ಮಾರರ, ಕುಂಬಾರರ, ಅಕ್ಕಸಾಲಿಗರ, ಕುರುಬರ, ಬುಟ್ಟಿ ಹೆಣೆಯುವವರ, ವಾದ್ಯಗಳನ್ನು ನುಡಿಸುವವರ, ಬೀದಿನಾಟಕ ಮಾಡುವವರ, ಸಮಾಜದ ಕಟ್ಟಕಡೆಯಲ್ಲಿದ್ದು ಕಡುಬಡತನದಲ್ಲಿ ಜೀವನ ಸಾಗಿಸುವ ದಲಿತರ... ಹೀಗೆ ಹಲವು ಹದಿನೆಂಟು ರೀತಿಯ ಕಾಯಕ ಮಾಡುವವರ ಪ್ರತಿನಿಧಿಗಳಿಂದ ಅನುಭವ ಮಂಟಪ ಕಂಗೊಳಿಸುತ್ತಿತ್ತು. ಈ ಅನುಭವ ಮಂಟಪದಲ್ಲಿ ಎಲ್ಲ ಮಹಿಳಾ ಮತ್ತು ಪುರುಷ ಪ್ರತಿನಿಧಿಗಳಿಗೆ ಸಮಾನ ಅವಕಾಶವಿತ್ತು. ಎಲ್ಲರಿಗೂ ಮಾತನಾಡುವ ಹಕ್ಕಿತ್ತು. 12ನೇ ಶತಮಾನಕ್ಕೆ ಮೊದಲು ಇಂಥ ಒಂದು ಪ್ರಜಾಪ್ರಭುತ್ವದ ಬೃಹತ್ ಪ್ರಯೋಗ ಜಗತ್ತಿನ ಯಾವ ಮೂಲೆಯಲ್ಲೂ ನಡೆದಿಲ್ಲ ಎಂಬುದು ಗಮನಾರ್ಹವಾಗಿದೆ.

12ನೇ ಶತಮಾನದಲ್ಲಿ ಕೆಳವರ್ಗದ ಜನರಿಗೆ ಮತ್ತು ಮಹಿಳೆಯರಿಗೆ ಶಿಕ್ಷಣ ಪಡೆಯುವ ಹಕ್ಕು ಇದ್ದಿದ್ದಿಲ್ಲ. ಬಸವಣ್ಣನವರು ಇಂಥ ಅಕ್ಷರ ವಂಚಿತರಿಗೆ ಅಕ್ಷರ ಜ್ಞಾನ ನೀಡಿ, ಅವರು ಕೂಡ ವಚನಗಳನ್ನು ಬರೆದು ತಮ್ಮ ವಿಚಾರಗಳನ್ನು ವ್ಯಕ್ತಪಡಿಸುವಂಥ ವಾತಾವರಣವನ್ನು ಸೃಷ್ಟಿಸಿದರು. ಮಹಿಳೆ ಮತ್ತು ಪುರುಷರಿಗಾಗಿ ಈ ರೀತಿಯ ವಯಸ್ಕರ ಶಿಕ್ಷಣ ವ್ಯವಸ್ಥೆ ಜಗತ್ತಿನಲ್ಲಿ ಹಿಂದೆ ಎಲ್ಲಿಯೂ ಇದ್ದಿದ್ದಿಲ್ಲ.

ವಿಶ್ವಸಂಸ್ಥೆಯು ಮಾನವ ಹಕ್ಕುಗಳ ಘೋಷಣೆಯಲ್ಲಿನ ಎಲ್ಲ 30 ಅಂಶಗಳೂ ಬಸವಣ್ಣನವರ ವಚನಗಳಲ್ಲಿ ಇವೆ. ಆ ಮೂಲಕ ಆಧುನಿಕ ಮಾನವನ ಆಶಯಗಳನ್ನು ಈಡೇರಿಸುವ ಶಕ್ತಿಯನ್ನು ಹೊಂದಿವೆ. ಬಡವರ ಮತ್ತು ಮಹಿಳೆಯರ ಹಕ್ಕಿಗಾಗಿ ಅಷ್ಟೇ ಅಲ್ಲದೆ ಅನೈತಿಕ ಸಂಬಂಧದಿಂದ ಹುಟ್ಟಿದ ಮಗುವಿನ ಹಕ್ಕಿಗಾಗಿಯೂ ಅವರು ಧ್ವನಿ ಎತ್ತಿದ್ದಾರೆ.

ಬಸವಣ್ಣನವರಿಗೆ ಇಷ್ಟಲಿಂಗಪೂಜೆ ಎಂಬುದು ಮಾನವ ಹಕ್ಕುಗಳ ಪ್ರಜ್ಞೆಯನ್ನು ಹೊಂದುವ ಸಾಧನವಾಗಿದೆ. ಮಾನವ ಏಕತೆಯನ್ನು ಸಾಧಿಸುವ ಕ್ರಮವಾಗಿದೆ.

ಲಿಂಗವ ಪೂಜಿಸಿ ಫಲವೇನಯ್ಯಾ,
ಸಮರತಿ ಸಮಕಳೆ ಸಮಸುಖವನರಿಯದನ್ನಕ್ಕ?
ಲಿಂಗವ ಪೂಜಿಸಿ ಫಲವೇನಯ್ಯಾ,
ಕೂಡಲಸಂಗಮದೇವರ ಪೂಜಿಸಿ
ನದಿಯೊಳಗೆ ನದಿ ಬೆರಸಿದಂತಾಗದನ್ನಕ್ಕ?

**–ಬಸವಣ್ಣ**

ಎಂದು ಬಸವಣ್ಣನವರು ಪ್ರಶ್ನಿಸುತ್ತಾರೆ. 21ನೇ ಶತಮಾನದ ಜಗತ್ತು ಕೂಡ ಲಿಂಗಭೇದ, ವರ್ಣಭೇದ ಮತ್ತು ವರ್ಗಭೇದಗಳಿಂದ ಮುಕ್ತವಾಗಿಲ್ಲ. ಜಗತ್ತಿನ ಎಲ್ಲ ಜನಾಂಗಗಳ ಮಧ್ಯೆ ಸಾಮರಸ್ಯ ಮೂಡಿಲ್ಲ. ಈ ಎಲ್ಲ ಸಮಸ್ಯೆಗಳಿಂದಾಗಿ ಜಗತ್ತಿನ ಜನರು ಜನಾಂಗದ್ವೇಷ, ಕೊಲೆ, ಸುಲಿಗೆ ಮತ್ತು ಅಪನಂಬಿಕೆಗಳಿಗೆ ಬಲಿಯಾಗುತ್ತಲೇ ಇರುತ್ತಾರೆ. ಮಹಿಳೆಯರು ಅತ್ಯಾಚಾರಕ್ಕೆ ಒಳಗಾಗುತ್ತಲೇ ಇರುತ್ತಾರೆ. ಇಂಥ ಸಮಸ್ಯೆಗಳಿಗೆ ಉತ್ತರ ಕಂಡುಕೊಳ್ಳುವುದೇ ಇಷ್ಟಲಿಂಗ ಪೂಜೆಯ ಉದ್ದೇಶವಾಗಿದೆ. ಬರಿ ಲಿಂಗಪೂಜೆ ಮಾಡುತ್ತ ಇಂಥ ಸಮಸ್ಯೆಗಳ ಬಗ್ಗೆ ಗಮನ ಹರಿಸದಿದ್ದರೆ ಮತ್ತು ಅವುಗಳ ನಿವಾರಣೆಗಾಗಿ ಪ್ರಯತ್ನಿಸದಿದ್ದರೆ ಇಷ್ಟಲಿಂಗ ಪೂಜೆ ಮಾಡುವುದು ವ್ಯರ್ಥ ಎಂಬುದನ್ನು ಬಸವಣ್ಣನವರು ಸ್ಪಷ್ಟಪಡಿಸುತ್ತಾರೆ.

ಸಮರತಿ ಎಂದರೆ ಸತಿ ಮತ್ತು ಪತಿ ಸಮಾನ ಹಕ್ಕು, ಗೌರವ, ವ್ಯಕ್ತಿ ಸ್ವಾತಂತ್ರ್ಯ ಮತ್ತು ಅಭಿಪ್ರಾಯ ಸ್ವಾತಂತ್ರ್ಯವನ್ನು ಹೊಂದಿ, ಲಿಂಗಭೇದವನ್ನು ಅಳಿಸಿ, ಪರಸ್ಪರ ಕಾಳಜಿಯೊಂದಿಗೆ ಎಲ್ಲರೂ ಒಂದಾಗಿ ಬದುಕುವುದು. ಹೀಗೆ ಬಸವಣ್ಣನವರು ಲಿಂಗಭೇದ ನೀತಿಯನ್ನು ವಿರೋಧಿಸುತ್ತಾರೆ.

ಸಮಕಳೆ ಎಂದರೆ ಪ್ರತಿಯೊಬ್ಬ ಮಾನವನಿಗೂ ಸಮನಾದ ತೇಜಸ್ಸು ಇರುವುದು. ಬ್ರಾಹ್ಮಣರಿಗೆ ಬ್ರಹ್ಮತೇಜಸ್ಸು ಮತ್ತು ಕ್ಷತ್ರಿಯರಿಗೆ ಕ್ಷಾತ್ರ ತೇಜಸ್ಸು ಎಂಬುದು ಇರುವುದಿಲ್ಲ. ಕೆಳಜಾತಿಯವರಿಗೆ ಮತ್ತು ಮೇಲ್ಜಾತಿಯವರಿಗೆ ಒಂದೇ ರೀತಿಯ ಮಾನವ ತೇಜಸ್ಸು ಇರುತ್ತದೆ. ಎಲ್ಲ ಮಾನವರು ಸಮಾನರಾಗಿದ್ದಾರೆ. ಜಾತಿ. ಕುಲ ಮತ್ತು ಧರ್ಮಗಳಿಂದ ಯಾರೂ ಮೇಲು ಮತ್ತು ಕೀಳು ಆಗುವುದಿಲ್ಲ. ಹೀಗೆ ಬಸವಣ್ಣನವರು ವರ್ಣಭೇದ ನೀತಿಯನ್ನು ವಿರೋಧಿಸುತ್ತಾರೆ.

ಸಮಸುಖ ಎಂದರೆ ಶ್ರೀಮಂತರು ಮತ್ತು ಬಡವರಿಗೆ ಒಂದೇ ತೆರನಾದ ಬದುಕು ಇರುತ್ತದೆ. ಶ್ರೀಮಂತರಿಗೆ ಒಂದು ರೀತಿಯ ಸುಖ ಮತ್ತು ಬಡವರಿಗೆ ಒಂದು ರೀತಿಯ ಸುಖ ಇರುವುದಿಲ್ಲ. ಎಲ್ಲ ಜೀವಗಳೂ ನೆಮ್ಮದಿಯಿಂದ ಬದುಕಲು ಬಯಸುತ್ತವೆ. ಈ ಭೂಮಿಯ ಮೇಲೆ ಬೇರೆಯವರಿಗೆ ತೊಂದರೆ ಕೊಡದೆ, ದುಡಿದು ಸುಖವಾಗಿ ಬದುಕುವ ಹಕ್ಕನ್ನು ಪ್ರತಿಯೊಬ್ಬರೂ ಪಡೆದಿದ್ದಾರೆ. ಬೇರೆಯವರ ಶೋಷಣೆ ಮಾಡುವ ಹಕ್ಕನ್ನು ಯಾರೂ ಪಡೆದಿಲ್ಲ ಎಂದು ಬಸವಣ್ಣನವರು ವರ್ಗಭೇದ ನೀತಿಯನ್ನು



# ಬಸವಣ್ಣ ಮತ್ತು ಅಕ್ಕಮಹಾದೇವಿ ಜಯಂತಿ ಕಾರ್ಯಕ್ರಮದಲ್ಲಿ ವಚನ












# ಗಾಯನ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ನೀಡಿದ ಕಲಾವಿದರು












ವಿರೋಧಿಸುತ್ತಾರೆ.

ಎಲ್ಲ ಮಾನವರು ಪ್ರೇಮಭಾವದೊಂದಿಗೆ, ನದಿಯೊಳಗೆ ನದಿ ಬೆರೆತ ಹಾಗೆ ಒಂದಾಗಿ ಬದುಕಬೇಕು. ಯಾರೂ ಹೆಚ್ಚಿನವರಲ್ಲ ಯಾರೂ ಕಡಿಮೆಯಲ್ಲ. ಎಲ್ಲರೂ ಸಮಾನರು. ಆದ್ದರಿಂದ ಎಲ್ಲ ಜಾತಿ, ಜನಾಂಗ ಮತ್ತು ಧರ್ಮದವರು ಸೇರಿ ಒಂದಾಗಿ ಬದುಕಬೇಕು. ಇಂಥ ಪ್ರಜ್ಞೆಯನ್ನು ಮೂಡಿಸುವುದೇ ಇಷ್ಟಲಿಂಗ ಪೂಜೆಯ ಉದ್ದೇಶವಾಗಿದೆ. ಒಂದು ವೇಳೆ ಇಷ್ಟಲಿಂಗ ಪೂಜಕರು ಈ ರೀತಿಯ ಪ್ರಜ್ಞೆಯನ್ನು ಬೆಳೆಸಿಕೊಳ್ಳದಿದ್ದರೆ ಮಾನವ ಏಕತೆ ಸಾಧಿಸಲಿಕ್ಕಾಗದು. ಆಗ ಇಷ್ಟಲಿಂಗ ಪೂಜೆಯ ಉದ್ದೇಶ ಈಡೇರದು. ಹೀಗೆ ನಿರರ್ಥಕ ಪೂಜೆ ಮಾಡಬೇಕಿಲ್ಲ ಎಂದು ಎಚ್ಚರಿಸುತ್ತಾರೆ.

ಬಸವಣ್ಣನವರ ಆಶಯದಂತೆ ಲಿಂಗಭೇದ, ವರ್ಣಭೇದ ಮತ್ತು ವರ್ಗಭೇದಗಳನ್ನು ಅಳಿಸಿಹಾಕಿ, ನದಿಯೊಳಗೆ ನದಿ ಕೂಡುವ ಹಾಗೆ ಎಲ್ಲ ದೇಶಗಳ ಮತ್ತು ಎಲ್ಲ ಧರ್ಮಗಳ ಮಾನವರ ಏಕತೆಯನ್ನು ಸಾಧಿಸಿದಾಗ ಜಗತ್ತಿನಲ್ಲಿ ಶೋಷಣೆ ಎಂಬುದು ಇರುವುದಿಲ್ಲ. ಯುದ್ಧಗಳು ಇರುವುದಿಲ್ಲ. ಜನಾಂಗಹತ್ಯೆ ಇರುವುದಿಲ್ಲ. ಇಂಥ ಒಂದು ವ್ಯವಸ್ಥೆಯ ಕನಸನ್ನು ಬಸವಣ್ಣನವರು ಕಂಡಿದ್ದರು.

ಬಸವಣ್ಣನವರು ಕಲ್ಯಾಣ ರಾಜ್ಯದ ಪ್ರಧಾನಿಯಾಗಿದ್ದ ಅವಧಿಯಲ್ಲಿ ಒಂದು ಯುದ್ಧವೂ ನಡೆಯಲಿಲ್ಲ. “ಕಲ್ಯಾಣದಲ್ಲಿ ಕೊಡುವವರುಂಟು ಬೇಡುವವರಿಲ್ಲ” ಎಂದು ಬಸವಣ್ಣನವರೇ ಹೇಳಿದ್ದಾರೆ. “ಬಸವ ರಾಜ್ಯದ ಸಿರಿಯು, ಬಸವ ಬಡವರ ನಿಧಿಯು” ಎಂದು ಆ ಕಾಲದ ಜನಪದ ಕವಿಯೊಬ್ಬ ಹಾಡಿದ್ದಾನೆ. ಬಸವಣ್ಣನವರು ಪ್ರಧಾನಿಯಾಗಿದ್ದಾಗ ಕಾಯಕಕ್ಕೆ ಬಹಳಷ್ಟು ಮಹತ್ವ ನೀಡಿದರು. ಜನರು ಕಾಯಕದಲ್ಲಿ ತಲ್ಲೀನರಾಗಿ ಯೋಗ್ಯರೀತಿಯಲ್ಲಿ ಉತ್ಪಾದನೆ ಮಾಡಿದರು. ಯಾರಿಗೂ ಬೇಡದೆ ಬದುಕುವ ಸಾಮರ್ಥ್ಯವನ್ನು ಪಡೆದರು. ಜನರೆಲ್ಲ ಚೆನ್ನಾಗಿ ಉತ್ಪಾದನೆಯಲ್ಲಿ ತೊಡಗಿದ್ದರಿಂದ ರಾಜ್ಯದ ಭಂಡಾರವೂ ತುಂಬಿತು. ಹೀಗೆ ಬಸವಣ್ಣನವರು ನೈಸರ್ಗಿಕ ಮತ್ತು ಮಾನವ ಸಂಪನ್ಮೂಲಗಳ ಸದ್ಬಳಕೆಯೊಂದಿಗೆ ಸಮಾನತೆಯಿಂದ ಕೂಡಿದ ಸುಂದರ ಸಮಾಜವನ್ನು ನಿರ್ಮಿಸಿದರು. ಇಂಥ ಒಂದು ಸಮಾಜ ಮಧ್ಯ ಯುಗದ ಅದ್ವಿತೀಯ ಸಮಾಜವಾಗಿತ್ತು.

ಜಗಜ್ಜ್ಯೋತಿ ಬಸವಣ್ಣನವರು ಮಹಾನ್ ಮಾನವತಾವಾದಿಗಳಾಗಿದ್ದರು. ಮಹಾನ್ ಆಡಳಿತಗಾರರಾಗಿದ್ದರು. ಮಹಾನ್ ಸಾಮಾಜಿಕ ಮನೋವಿಜ್ಞಾನಿಗಳಾಗಿದ್ದರು. ಮಹಾನ್ ಅರ್ಥಶಾಸ್ತ್ರಜ್ಞರಾಗಿದ್ದರು. ಮಹಾನ್ ಸಾಹಿತಿಗಳಾಗಿದ್ದರು. ಮಹಾನ್ ಭಾಷಾ ಪಂಡಿತರಾಗಿದ್ದರು. ಬದುಕಿನ ಎಲ್ಲ ರಂಗಗಳಲ್ಲಿ ಮಹಾಜ್ಞಾನಿಗಳಾಗಿದ್ದರು. ಮಹಾನ್ ದಾರ್ಶನಿಕರಾಗಿದ್ದರು.

ಅವರಿಗೆ ಇಡೀ ಸಮಾಜ ವ್ಯವಸ್ಥೆಯ ಕಲ್ಪನೆ ಇತ್ತು. ಒಂದು ಹೊಸ ಸಮಾಜ ಹೇಗೆ ಇರಬೇಕು ಎಂಬುದರ ಪ್ರಜ್ಞೆ ಇತ್ತು. ಅವರು ಧರ್ಮ, ಸಮಾಜ, ಸಂಸ್ಕೃತಿ ಮತ್ತು ಅರ್ಥಶಾಸ್ತ್ರವನ್ನು ಬೇರೆಬೇರೆಯಾಗಿ ನೋಡಲಿಲ್ಲ, ಕುಟುಂಬ, ಸಮಾಜ, ದೇಶ ಮತ್ತು ಜಗತ್ತನ್ನು ಬೇರೆಬೇರೆಯಾಗಿ ನೋಡಲಿಲ್ಲ. ಇವೆಲ್ಲವುಗಳ ಮಧ್ಯದ ಘನವಾದ ಸಂಬಂಧವನ್ನು ಗುರುತಿಸಿದರು. ಇವೆಲ್ಲವುಗಳ ಒಟ್ಟು ಅಭಿವೃದ್ಧಿಯಿಂದ ಮಾತ್ರ ಮಾನವರನ್ನು ಎಲ್ಲ ಬಂಧನಗಳಿಂದ ವಿಮೋಚನೆಗೊಳಿಸಬಹುದು ಎಂಬುದನ್ನು ಅವರು ಬಹುಬೇಗ ಕಂಡುಕೊಂಡರು.

ಮಾನವ ಸಂಪನ್ಮೂಲ ಮತ್ತು ನೈಸರ್ಗಿಕ ಸಂಪನ್ಮೂಲಗಳ ಯೋಗ್ಯ ಬಳಕೆಯಿಂದ ಜನೋಪಯೋಗಿ ವಸ್ತುಗಳ ಉತ್ಪಾದನೆ ಮಾಡಬೇಕು. ಇದೇ ಕಾಯಕ ತತ್ತ್ವ. ವಸ್ತುಗಳನ್ನು ಹಿತಮಿತವಾಗಿ ಬಳಸುವುದು ಪ್ರಸಾದ ತತ್ತ್ವ. ನಮ್ಮ ಸಂಪತ್ತಿನ ಮೂಲಕ ಸಮಾಜಸೇವೆ ಮಾಡುವುದು ದಾಸೋಹ ತತ್ತ್ವ.

ಹೀಗೆ ಕಾಯಕ, ಪ್ರಸಾದ ಮತ್ತು ದಾಸೋಹ ತತ್ತ್ವಗಳಲ್ಲಿ ನಿಸರ್ಗತತ್ತ್ವ ಅಡಕವಾಗಿದೆ. ಜಗತ್ತಿನಲ್ಲಿ ಎಲ್ಲವೂ ಕಾಯಕ ನಿರತವಾಗಿವೆ. ಪ್ರಸಾದದ ಕ್ರಮವನ್ನು ಅನುಸರಿಸಿ ದಾಸೋಹ ಮಾಡುತ್ತಿವೆ. ನದಿಗಳು ಹರಿಯುವ ಕಾಯಕ ಮಾಡುತ್ತಿವೆ. ದಾಸೋಹ ಭಾವದಿಂದ ಸಮುದ್ರವನ್ನು ಸೇರುತ್ತಿವೆ. ಆ ಮೂಲಕ ಜನರ ನೀರಿನ ಸಮಸ್ಯೆ ಬಗೆಹರಿಸುತ್ತಿವೆ. ಅಲ್ಲದೆ ಭೂಭಾಗಕ್ಕಿಂತಲೂ ದೊಡ್ಡದಾದ ಸಮುದ್ರದ ನೀರು ಹೆಚ್ಚು ಉಪ್ಪಾಗದಂತೆ ನೋಡಿಕೊಳ್ಳುತ್ತ ದಾಸೋಹ ಭಾವದಿಂದ ಸಮುದ್ರ ಜೀವಿಗಳ ಜೀವ ಉಳಿಸುತ್ತಿವೆ. ರೈತರು ದಿನವಿಡೀ ದುಡಿದು ರಾತ್ರಿ ಮನೆಗೆ ಬಂದರೂ ಭೂಮಿಯಲ್ಲಿನ ಎರೆಹುಳುಗಳು ಕಾಯಕ ನಿರತವಾಗಿರುತ್ತವೆ. ಅವು ದಾಸೋಹ ಭಾವದಿಂದ ರೈತರ ಭೂಮಿಯನ್ನು ಹದಗೊಳಿಸುತ್ತಿರುತ್ತವೆ. ಮರಗಳು ನಿಂತಲ್ಲೇ ಕಾಯಕ ನಿರತವಾಗಿ ಜನರಿಗೆ ದಾಸೋಹ ಭಾವದಿಂದ ಫಲಗಳನ್ನು ಕೊಡುತ್ತಿರುತ್ತವೆ. ಜೇನು ನೊಣಗಳು ಹೂವಿನ ಮಕರಂದವನ್ನು ಹೀರುತ್ತವೆ. ಆದರೆ ದಾಸೋಹ ಭಾವದಿಂದ ಪರಾಗಸ್ಪರ್ಶದ ಕಾಯಕದ ಮೂಲಕ ಆ ಹೂವಿನ ಮರ ಮತ್ತು ಬಳ್ಳಿಗಳ ಸಂತತಿಯನ್ನು ಹೆಚ್ಚಿಸುತ್ತಿರುತ್ತವೆ. ಹೀಗೆ ಇಡೀ ಜಗತ್ತೇ ಕಾಯಕ, ಪ್ರಸಾದ ಮತ್ತು ದಾಸೋಹ ತತ್ತ್ವದಿಂದ ಕೂಡಿದೆ.

ಕಾಯಕವೆಂಬುದು ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುತ್ತ, ಬದುಕನ್ನು ಹೆಚ್ಚು ಹೆಚ್ಚು ಸುಂದರಗೊಳಿಸುವ ಉತ್ಪಾದನಾ ಕ್ರಿಯೆ. ನಮ್ಮ ಉತ್ಪಾದನಾ ವ್ಯವಸ್ಥೆ ಜೀವಜಾಲ ಸಮತೋಲನಕ್ಕೆ ಧಕ್ಕೆ ಉಂಟು ಮಾಡಬಾರದು. ನಮ್ಮ ನದಿ, ಸಮುದ್ರ, ಅರಣ್ಯ ಮತ್ತಿತರ ನೈಸರ್ಗಿಕ ಸಂಪನ್ಮೂಲಗಳು ವಿನಾಶದ ಅಂಚಿಗೆ ತಲುಪದ ಹಾಗೆ ಎಚ್ಚರಿಕೆ ವಹಿಸಿ ಉತ್ಪಾದನೆಯಲ್ಲಿ ತೊಡಗಬೇಕು. ಸತ್ಯ ಶುದ್ಧವಾದುದನ್ನೇ ಉತ್ಪಾದಿಸಬೇಕು. ಇದು ಕಾಯಕ ಪ್ರಜ್ಞೆ.

ಜಗತ್ತಿನ ಎಲ್ಲ ವಸ್ತುಗಳು ದೇವರ ಕಾಣಿಕೆ. ಇದಕ್ಕೆ ಪ್ರಸಾದ ಎಂದು ಕರೆಯುವರು ಪ್ರತಿಯೊಂದು ಕೂಡ ದೇವರ ಕಾಣಿಕೆಯೆ ಆಗಿದೆ. ಆದ್ದರಿಂದ ಎಲ್ಲ ಸಂಪನ್ಮೂಲಗಳನ್ನು ಪ್ರಸಾದ ರೂಪದಲ್ಲಿ ಬಳಸಬೇಕು. ಯಾವುದನ್ನೂ ಹಾಳು ಮಾಡಬಾರದು. ಒಂದು ಹನಿ ನೀರನ್ನೂ ಹಾಳು ಮಾಡಬಾರದು. ಒಂದು ತುತ್ತು ಅನ್ನವನ್ನೂ ಹಾಳುಮಾಡಬಾರದು. ಅವಶ್ಯಕತೆಗಿಂತ ಹೆಚ್ಚಿಗೆ ಯಾವುದನ್ನೂ ಬಳಸಬಾರದು. ಇದು ಪ್ರಸಾದ ಪ್ರಜ್ಞೆ.

ನಾವು ಉತ್ಪಾದಿಸುವುದು ಮತ್ತು ಗಳಿಸುವುದು. ಕೇವಲ ನಮಗಾಗಿ ಮತ್ತು ನಮ್ಮ ಕುಟುಂಬಕ್ಕಾಗಿ ಅಲ್ಲ. ಅದರಲ್ಲಿ ಸಮಾಜದ ಪಾಲೂ ಇದೆ. ಇಡಿ ಸಮಾಜವನ್ನೇ ದೇವರು ಎಂದು ಭಾವಿಸಿ. ನಾವು ಪಡೆದದ್ದರಲ್ಲಿನ ಹೆಚ್ಚಿನ ಪಾಲನ್ನು ದಾಸೋಹ ಭಾವದಲ್ಲಿ ಸಮಾಜಕ್ಕೆ ಅರ್ಪಿಸಬೇಕು. ಇಂಥ ಸಾಮಾಜಿಕ ಪ್ರಜ್ಞೆಯೊಂದಿಗೆ ಸಮಾಜ ರಕ್ಷಣೆ ಮಾಡಬೇಕು. ಯಾರೂ ನೋವಿಗೆ ಒಳಗಾಗದಂಥ ಮತ್ತು ಯಾರೂ ಹಸಿವಿನಿಂದ ಬಳಲದಂಥ ಸಮಾಜವನ್ನು ನಿರ್ಮಾಣ ಮಾಡಬೇಕು. ಇದು ದಾಸೋಹ ಪ್ರಜ್ಞೆ.

ಹೀಗೆ ಸಾಮಾಜಿಕ ಪ್ರಜ್ಞೆಯ ಬಸವಧರ್ಮದಲ್ಲಿ ವ್ಯಕ್ತಿಗತ ಮೋಕ್ಷ ಎಂಬುದು ಇಲ್ಲ. ಶೋಷಣೆ ಇಲ್ಲದ ಸುಸಂಸ್ಕೃತ ಸಮಾಜದ ನಿರ್ಮಾಣದಲ್ಲಿ ತೊಡಗುವ ಆನಂದವೇ ಮೋಕ್ಷದ ಆನಂದ. ಹೀಗೆ ಬಸವಧರ್ಮದಲ್ಲಿ ಮೋಕ್ಷ ಎಂಬುದು ಮಾನವನ ಜೀವಿತಾವಧಿಯಲ್ಲೇ ಲಭಿಸುವಂಥದ್ದು. ಇಲ್ಲಿ ಮೋಕ್ಷ ಎಂಬುದು ಅತ್ಯುನ್ನತ ಆನಂದದ ಮನಸ್ಥಿತಿ.

ಬಸವ ಧರ್ಮದ ಮೂಲ ತತ್ತ್ವಗಳಾದ ಕಾಯಕ, ಪ್ರಸಾದ ಮತ್ತು ದಾಸೋಹ ತತ್ತ್ವಗಳು ಸಾಮಾಜಿಕ ಅರ್ಥಶಾಸ್ತ್ರದ ತತ್ತ್ವಗಳಾಗಿವೆ. ಆದ್ದರಿಂದಲೇ ಕಾಯಕ ಪ್ರಜ್ಞೆ ಯೋಗ್ಯ ಉತ್ಪಾದನಾ ವ್ಯವಸ್ಥೆಯನ್ನು ರೂಪಿಸುವುದು. ಪ್ರಸಾದ ಪ್ರಜ್ಞೆ ಯೋಗ್ಯ ರೀತಿಯಲ್ಲಿ ವಸ್ತುಗಳನ್ನು ಉಪಯೋಗಿಸುವ ವ್ಯವಸ್ಥೆಯನ್ನು ರೂಪಿಸುವುದು. ದಾಸೋಹ ಪ್ರಜ್ಞೆ ಯೋಗ್ಯ ರೀತಿಯಲ್ಲಿ ವಸ್ತುಗಳ ವಿತರಣೆಯ ವ್ಯವಸ್ಥೆಯನ್ನು ರೂಪಿಸುವುದು.

ಇಂಥ ವ್ಯವಸ್ಥಿತ ಸಮಾಜದಲ್ಲಿ. ಯಾವುದೇ ರೀತಿಯ ಭೇದ ಭಾವಗಳು ಇರುವುದಿಲ್ಲ. ಕ್ರೌರ್ಯ ಇರುವುದಿಲ್ಲ. ಎಲ್ಲರೂ ಘನತೆಯಿಂದ ಮತ್ತು ಸೇವಾಭಾವದಿಂದ ಬದುಕುವರು. ಪ್ರತಿಯೊಬ್ಬರು ಚೆನ್ನಾಗಿ ಬದುಕುವಂಥ ವಾತಾವರಣ ಸೃಷ್ಟಿಸುವರು.

ಬಸವಣ್ಣನವರ ಕನಸು 21ನೇ ಶತಮಾನದಲ್ಲಿ ನನಸಾದರೆ. ಈ ಜಗತ್ತು ಎಲ್ಲರೀತಿಯ ಸಮಸ್ಯೆಗಳಿಂದ ಮುಕ್ತವಾಗಿ ಇಡೀ ಮಾನವಕುಲ ಒಂದಾಗುವುದು. ❑

***ರಂಜಾನ್ ದರ್ಗಾ***

‘ವಚನ’, ಸಿದ್ಧಾರೂಢ ಕಾಲನಿ, ಮದಿಹಾಳ
ಧಾರವಾಡ–580006
ಮೊಬೈಲ್: 8660173149

# "ಶಿಕ್ಷಣ-ಭಾಷೆ-ಸಂಸ್ಕೃತಿ": ಲೇಖಕ, ಶಿಕ್ಷಣ ತಜ್ಞ ಶ್ರೀ ಅರವಿಂದ ಚೊಕ್ಕಾಡಿ ಅವರೊಂದಿಗೆ ಅರ್ಥಪೂರ್ಣ ಸಂವಾದ ಕಾರ್ಯಕ್ರಮ




ದೆಹಲಿ ಕರ್ನಾಟಕ ಸಂಘದ ವಿಚಾರ ಸಂಕಿರಣ ಕೊಠಡಿಯಲ್ಲಿ ದಿನಾಂಕ 17.05.2026 ರಂದು "ಶಿಕ್ಷಣ–ಭಾಷೆ–ಸಂಸ್ಕೃತಿ" ವಿಷಯದ ಬಗ್ಗೆ ಸಂವಾದ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸಂಘದ ಉಪಾಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಸಂವಾದ ಕಾರ್ಯಕ್ರಮಕ್ಕೆ ವಿಶೇಷ ಆಹ್ವಾನಿತರಾಗಿ ಆಗಮಿಸಿದ್ದ ಖ್ಯಾತ ಲೇಖಕ, ಚಿಂತಕ, ಶಿಕ್ಷಣ ತಜ್ಞರಾದ ಶ್ರೀ ಅರವಿಂದ ಚೊಕ್ಕಾಡಿ ಅವರನ್ನು ಆಪ್ತವಾಗಿ ಸ್ವಾಗತಿಸಿದರು. ನಂತರ "ಶಿಕ್ಷಣ–ಭಾಷೆ–ಸಂಸ್ಕೃತಿ" ಪರಿಕಲ್ಪನೆಗಳ ಬಗ್ಗೆ ತಾತ್ವಿಕವಾಗಿ ಮಾತನಾಡುತ್ತಾ, ನಾಗರೀಕತೆಯ ವಿಕಾಸದಲ್ಲಿ ಇವುಗಳ ಮಹತ್ವದ ಪಾತ್ರ ಮತ್ತು ಸಮಕಾಲೀನ ಬದುಕಿನಲ್ಲಿ ಇರುವ ಪ್ರಸ್ತುತತೆಯ ಬಗ್ಗೆ ವಿವರಿಸಿದರು. ಸಂಸ್ಕೃತಿಯನ್ನು ಜೀವನ ದೃಷ್ಟಿಕೋನವೆಂದು ಕರೆದ ಅವರು, ಭಾಷೆಯು ಕಲಿಕಾ ಆಸಕ್ತರ ಕಲ್ಪನಾಲೋಕವನ್ನು ವಿಸ್ತರಿಸಬೇಕು ಮತ್ತು ಕಲಿಕೆಯ ಕುತೂಹಲವನ್ನೂ ಅವರಲ್ಲಿ ಹೆಚ್ಚಿಸಬೇಕು ಎಂದು ಅಭಿಪ್ರಾಯಪಟ್ಟರು. ಇವುಗಳಲ್ಲದೆ ಭಾಷಾ ಜಾಯಮಾನ ಮತ್ತು ಸಂಸ್ಕೃತಿಯ ಸಾಂಕೇತಿಕ ಮೌಲ್ಯಗಳ ಬಗ್ಗೆಯೂ ಚೊಕ್ಕಾಡಿಯವರು ತಮ್ಮ ವಿಚಾರಗಳನ್ನು ಪರಿಣಾಮಕಾರಿಯಾಗಿ ಮಂಡಿಸಿದರು.

ಶಿಕ್ಷಣವೆಂಬುದು ಮಾನವನನ್ನು ಮೃಗತ್ವದಿಂದ ಮಾನವೀಯ ಅಥವಾ ದೈವತ್ವದ ಕಡೆಗೆ ಕರೆದೊಯ್ಯುವ ಸಾಧನೆವೆಂಬುದು ಅವರ ಅಭಿಪ್ರಾಯವಾಗಿತ್ತು. ಭಾಷೆಗಳ ಬಗ್ಗೆ ಮತ್ತಷ್ಟು ವಿವರವಾಗಿ ಮಾತನಾಡಿದ ಚೊಕ್ಕಾಡಿಯವರು ಶಬ್ದ ಆಧಾರಿತ ಭಾಷೆಗಳು ಮತ್ತು ಉಚ್ಚಾರ ಆಧಾರಿತ ಭಾಷೆಗಳ ಬಗ್ಗೆ ಆಸಕ್ತರಿಗೆ ಪರಿಚಯಿಸಿದರು. ಸಮಾಜ ಒಂದು ಶಾಶ್ವತವಾದ ಸಂಸ್ಥೆ. ಈ ಸಂಸ್ಥೆಯ ಬಗ್ಗೆ ಪ್ರಭುತ್ವಕ್ಕೆ ಅಪಾರ ಕಾಳಜಿಯಿರಬೇಕು. ಹೇಗೆ ಧ್ವನಿ ಮತ್ತು ಭಾಷೆಗಳು ಒಂದಕ್ಕೊಂದು ತಳುಕು ಹಾಕಿಕೊಂಡಿರುತ್ತವೆಯೋ, ಸಮಾಜ ಮತ್ತು ಸಂಸ್ಕೃತಿಯ ಸಂಬಂಧವೂ ಹೀಗೆಯೇ ಇರುತ್ತದೆ ಎಂಬುದು ಉಪನ್ಯಾಸದ ಪ್ರಮುಖ ಅಂಶಗಳಲ್ಲೊಂದಾಗಿತ್ತು. ಇವುಗಳಲ್ಲದೆ ಒಟ್ಟಾರೆಯಾಗಿ ಶಿಕ್ಷಣ ವ್ಯವಸ್ಥೆಯ ಬಗ್ಗೆ ಸಂಕ್ಷಿಪ್ತವಾಗಿ ಪ್ರಸ್ತಾಪಿಸಿದ ಅವರು ಸದ್ಯದ ಶಿಕ್ಷಣ ವ್ಯವಸ್ಥೆ, ಅಲ್ಲಿರುವ ಸವಾಲುಗಳು ಮತ್ತು ಭವಿಷ್ಯದ ದೂರದೃಷ್ಟಿಗಳ ಬಗ್ಗೆಯೂ ಬೆಳಕು ಚೆಲ್ಲಿದರು.

ಗಣ್ಯರ ಉಪನ್ಯಾಸದ ನಂತರ ನೆರೆದಿದ್ದ ಸಭಿಕರಿಂದ ಪ್ರಶ್ನೋತ್ತರ ಕಾರ್ಯಕ್ರಮವನ್ನು ಕೂಡಾ ಆಯೋಜಿಸಲಾಗಿದ್ದು ಆರೋಗ್ಯಕರ ಚರ್ಚೆಗಳು ನಡೆದವು. ಲಗುಬಗೆಯ ಆಧುನಿಕ ಶೈಲಿಯಲ್ಲಿ ಕಗ್ಗಂಟಾಗುತ್ತಿರುವ ಮಕ್ಕಳ ಜಗತ್ತು, ಪಠ್ಯಪುಸ್ತಕ ಮತ್ತು ಇತಿಹಾಸದ ವಿಚಾರಗಳ ಸುತ್ತ ನಡೆಯುವ ವಿವಾದಗಳು, ಭಾಷೆಯ ಕಲಿಕಾ ವಿಧಾನ, ಕಾಲಮಾನದೊಂದಿಗೆ ಬದಲಾಗುತ್ತಿರುವ ಶಿಕ್ಷಣ ನೀತಿಗಳನ್ನೂ ಸೇರಿದಂತೆ ಸಭಿಕರಿಂದ ಬಂದಿದ್ದ ಹಲವು ಪ್ರಶ್ನೆಗಳಿಗೆ ಚೊಕ್ಕಾಡಿಯವರು ಉತ್ತರಿಸಿದರು. ಸಂವಾದ ಕಾರ್ಯಕ್ರಮದ ಆರಂಭದಿಂದ ಕೊನೆಯವರೆಗೂ ತಮ್ಮ ವಿಚಾರಧಾರೆಗಳನ್ನು ನಿರರ್ಗಳವಾಗಿ ಮಂಡಿಸಿದ ಅರವಿಂದ ಚೊಕ್ಕಾಡಿಯವರು ತಮ್ಮ ವೈಚಾರಿಕ ಸ್ಪಷ್ಟತೆ, ದೃಢ ನಿಲುವುಗಳ ಮತ್ತು ಹಾಸ್ಯಪ್ರಜ್ಞೆಯಿಮದ ಸಂವಾದ ಕಾರ್ಯಕ್ರಮವನ್ನು ಚಂದಗಾಣಿಸಿದ್ದಲ್ಲದೆ, ಆಸಕ್ತರನ್ನು ಚಿಂತನೆಗೆ ಹಚ್ಚುವುದರಲ್ಲೂ ಯಶಸ್ವಿಯಾದರು.



ಸಂವಾದ ಕಾರ್ಯಕ್ರಮದ ಮುಂದಿನ ಭಾಗವಾಗಿ ಗಣ್ಯರಾದ ಶ್ರೀ ಅರವಿಂದ ಚೊಕ್ಕಾಡಿಯವರನ್ನು ಸಂಘದ ವತಿಯಿಂದ ಗೌರವಪೂರ್ವಕವಾಗಿ ಶಾಲು–ಸ್ಮರಣಿಕೆ ನೀಡಿ ಸನ್ಮಾನಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಘದ ಅಧ್ಯಕ್ಷರಾದ ಶ್ರೀ ರೇಣುಕುಮಾರ್ ಆರ್ ಅವರು "ಶಿಕ್ಷಣ–ಭಾಷೆ–ಸಂಸ್ಕೃತಿ"ಗಳಂತಹ ಸಾಮಾಜಿಕ ಪರಿಕಲ್ಪನೆಗಳಿಗೆ ಹೊಸ ದೃಷ್ಟಿಕೋನವನ್ನು ಅರವಿಂದ ಚೊಕ್ಕಾಡಿಯವರು ನೀಡಿದ ಸರಳ ಭಾಷೆಯಲ್ಲಿ, ಮನೋಜ್ಞವಾಗಿ ಪ್ರಸ್ತುತಪಡಿಸಿದ್ದಾರೆ ಎಂದು ಪ್ರಶಂಸಿಸಿದರು. ಮುಂದಿನ ದಿನಗಳಲ್ಲಿ ಇಂತಹ ವೈಚಾರಿಕ ನೆಲೆಯ ಸಂವಾದ ಕಾರ್ಯಕ್ರಮಗಳನ್ನು ದೊಡ್ಡ ಮಟ್ಟದಲ್ಲಿ ಮಾಡುವ ತಮ್ಮ ಕನಸನ್ನೂ ಕೂಡಾ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಹಂಚಿಕೊಂಡರು. ಪ್ರಧಾನ ಕಾರ್ಯದರ್ಶಿ ಶ್ರೀ ರಾಧಾಕೃಷ್ಣ ಅವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು. ❑

**ಪ್ರಸಾದ್ ನಾಯ್ಕ್**

# ಭುವನ ಸುಂದರಿ ಸ್ಪರ್ಧೆಯಲ್ಲಿ ಆಯ್ಕೆಯಾಗಿರುವ ಕನ್ನಡತಿ ಲೇಖನಾ ಮಲ್ಲಿಕಾರ್ಜುನ ಹೆಗ್ಡೆ ಅವರೊಂದಿಗೆ ಸಂವಾದ

ದೆಹಲಿ ಕರ್ನಾಟಕ ಸಂಘದ ವಿಚಾರ ಸಂಕಿರಣ ಕೊಠಡಿಯಲ್ಲಿ ದಿನಾಂಕ 23.05.2026 ರಂದು ಭುವನ ಸುಂದರಿ ಸ್ಪರ್ಧೆಗೆ ತರಬೇತಿ ಪಡೆಯಲು ದೆಹಲಿಗೆ ಬಂದಿರುವ ಕನ್ನಡತಿ ಕುಮಾರಿ ಲೇಖನಾ ಮಲ್ಲಿಕಾರ್ಜುನ ಅವರೊಂದಿಗೆ ಸಂವಾದ ಏರ್ಪಡಿಸಲಾಗಿತ್ತು.




ಸುಮಾರು 100ಕ್ಕೂ ಹೆಚ್ಚು ಕನ್ನಡಿಗರು ಸೇರಿದ್ದ ಕಾರ್ಯಕ್ರಮದ ಆರಂಭದಲ್ಲಿ ನೆರೆದಿದ್ದ ಪ್ರತಿಯೊಬ್ಬರ ಸ್ವ ಪರಿಚಯದೊಂದಿಗೆ ಕಾರ್ಯಕ್ರಮ ಆರಂಭವಾಯಿತು. ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ತಮ್ಮ ಸ್ವಾಗತ ಭಾಷಣದಲ್ಲಿ ಗಣ್ಯ ಅತಿಥಿಯಾಗಿ ಆಗಮಿಸಿದ್ದ ಲೇಖನಾರ ಬಗ್ಗೆ ಮಾತನಾಡುತ್ತ ಕುಮಾರಿ ಲೇಖನಾ ಅವರು ಲಂಡನ್‌ನ ಪ್ರತಿಷ್ಠಿತ ಕೆಂಬ್ರಿಡ್ಜ್ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿ ಪಡೆದ ನಂತರ, ಮಾಡೆಲಿಂಗ್ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಜೊತೆಗೆ ಇವರು ಮಿಸ್ ಯುನಿವರ್ಸ್ ಕರ್ನಾಟಕ–2026 ಸ್ಪರ್ಧೆಯಲ್ಲಿ ವಿಜೇತರಾಗಿರುವ ಬಗ್ಗೆ ತಿಳಿಸಿ ಗಣ್ಯರನ್ನು ಮತ್ತು ಉಪಸ್ಥಿತರಿದ್ದ ಎಲ್ಲರನ್ನು ಆತ್ಮೀಯವಾಗಿ ಸ್ವಾಗತಿಸಿದರು.

ದೆಹಲಿ ಕರ್ನಾಟಕ ಸಂಘದ ಖಜಾಂಚಿಗಳಾದ ಶ್ರೀಮತಿ ಆಶಾಲತಾ ಎಂ. ಅವರು ಕುಮಾರಿ ಲೇಖನಾ ಮಲ್ಲಿಕಾರ್ಜುನ ಹೆಗ್ಡೆಯವರನ್ನು ಪರಿಚಯಿಸಿ ಕ್ರೀಡೆ, ಶಿಕ್ಷಣ ಮತ್ತು ಮಾಡೆಲಿಂಗ್ ಕ್ಷೇತ್ರಗಳಲ್ಲಿ ಇವರ ಮಹತ್ತರವಾದ ಸಾಧನೆಯನ್ನು ಉಲ್ಲೇಖಿಸುತ್ತಾ, ಕುಮಾರಿ ಲೇಖನ ಹೆಗ್ಡೆ ಅವರು 2023ರಲ್ಲಿ ತನಿಷ್ಕ್ ಆಭರಣಕ್ಕೆ ರೂಪದರ್ಶಿಯಾಗಿ ಅಯ್ಕೆಯಾಗಿರುವ ಬಗ್ಗೆ ಮತ್ತು ಸುಮಾರು 17 ಬಾರಿ ರಾಷ್ಟ್ರೀಯ ಬಾಸ್ಕೆಟ್ ಬಾಲ್ ತಂಡವನ್ನು ಪ್ರತಿನಿಧಿಸಿರುವುದಾಗಿ ತಿಳಿಸಿದರು.

ಮುಂದೆ ಕಾರ್ಯಕ್ರಮದ ಕೇಂದ್ರ ಬಿಂದುವಾದ ಲೇಖನಾರವರು ಮಾತನಾಡಿ ಇಲ್ಲಿ ಎಲ್ಲಾ ವಯೋಮಿತಿಯ, ವಿವಿಧ ಹುದ್ದೆ ಮತ್ತು ಉದ್ಯಮದ ಅನುಭವಸ್ಥರಾದ ಕನ್ನಡಿಗರನ್ನು ಕಂಡು ಬಹಳ ಸಂತಸ ಮತ್ತು ಹೆಮ್ಮೆಯ ಭಾವ ಮೂಡಿತು. ದೆಹಲಿಯಲ್ಲಿ ಇಂಥದೊಂದು ಕೌಟುಂಬಿಕ ವಾತಾವರಣವನ್ನು ರೂಪಿಸಿದ್ದಕ್ಕೆ ಧನ್ಯವಾದ ಕೋರುತ್ತಿದ್ದೇನೆ. ನಾನು ಬಾಲ್ಯದಿಂದಲೂ ಕ್ರೀಡಾಳುವಾಗಿ ಬಾಸ್ಕೆಟ್ ಬಾಲ್ ಆಟವನ್ನು ನನ್ನ ಜೀವನವಾಗಿ ರೂಪಿಸಿಕೊಳ್ಳಲು ಗುರಿಯಾಗಿಸಿ ಕೊಂಡವಳು. ಈ ನಿಟ್ಟಿನಲ್ಲಿ ರಾಷ್ಟ್ರೀಯ ತಂಡವನ್ನು ಹಲವಾರು ಬಾರಿ ಪ್ರತಿನಿಧಿಸಿದೆ. ಹಿಂದೆಲ್ಲ ಸ್ನೇಹಿತರು ನೀನು ಪರೀಕ್ಷೆಯಲ್ಲಿ ಉತ್ತೀರ್ಣಳಾದರೆ ಸಾಕು, ಹೇಗೂ ತಂಡದಲ್ಲಿದ್ದೀಯ ಅಂತ ಹೇಳುತ್ತಿದ್ದರು. ಆದರೆ ಭಾರತ ತಂಡದಲ್ಲಿ ಆಡುವ ಕನಸು ಕಾಣುತ್ತಿರುವಾಗಲೇ ಗಾಯಗೊಂಡ ಪರಿಣಾಮವಾಗಿ ತಂಡವನ್ನು ಪ್ರತಿನಿಧಿಸುವ ನನ್ನ ಗುರಿ ತಪ್ಪಿ ಹೋಯಿತು. ಆದರೆ ಬದುಕಿನಲ್ಲಿ ಏನೇ ಆದರೂ ಮುಂದೊಂದು ಹೊಸ ಅವಕಾಶ ಕಾದಿರುತ್ತದೆ ಅನ್ನುವ ಸಂದರ್ಭಗಳೂ ಅದೃಷ್ಟವಶಾತ್ ಬಂದವು. ಹೀಗೆ ವಿದ್ಯಾರ್ಥಿ ವೇತನದ ಮೂಲಕ ಲಂಡನ್ ನಲ್ಲಿ ಸ್ನಾತಕೋತ್ತರ ಪದವಿ ಮುಗಿಸಿ, ಮುಂದೆ ಫ್ಯಾಷನ್ ಲೋಕದಲ್ಲೂ ಯಶಸ್ಸನ್ನು ಪಡೆದೆ ಎಂದು ತಾವು ನಡೆದು ಬಂದ ದಾರಿಯ ಬಗ್ಗೆ ಅನುಭವಗಳನ್ನು ಹಂಚಿಕೊಂಡರು.



ಕಾರ್ಯಕ್ರಮದ ಮುಂದಿನ ಹಂತದಲ್ಲಿ ನೆರೆದಿದ್ದ ಸಭಿಕರೊಂದಿಗೆ ಗಣ್ಯರ ಸಂವಾದವೂ ನಡೆಯಿತು. ಎಂದಿನಂತೆ ಈ ಬಾರಿಯೂ ಸಭಿಕರ ಪ್ರಶ್ನೆಗಳು ಅರ್ಥಪೂರ್ಣವಾಗಿದ್ದು ಒಂದೊಳ್ಳೆಯ ಆರೋಗ್ಯಕರ ಚರ್ಚೆಗೆ ವೇದಿಕೆಯನ್ನು ರೂಪಿಸಿದಂತಾಗಿತ್ತು. ಸಭಿಕರ ಕುತೂಹಲದ ಕೆಲ ಆಯ್ದ ಪ್ರಶ್ನೆಗಳು ಮತ್ತು ಲೇಖನಾರು ಅವುಗಳಿಗೆ ಖುಷಿಯಿಂದಲೇ ನೀಡಿದ್ದ ಕೆಲ ಉತ್ತರಗಳು ಹೀಗಿವೆ:

**ಪ್ರಶ್ನೆ (ಸಭಿಕರು):** ಸೌಂದರ್ಯದ ಬಗ್ಗೆ ನಿಮ್ಮ ಅಭಿಪ್ರಾಯವೇನು? ಸೌಂದರ್ಯದ ವಿಚಾರಕ್ಕೆ ಬಂದಾಗ ಸಾಮಾನ್ಯವಾಗಿ ಕಂಡು ಬರುವ ಹೋಲಿಕೆಯ ಬಗ್ಗೆ ನೀವೇನನ್ನುತ್ತೀರಿ?

**ಉತ್ತರ (ಲೇಖನಾ ಹೆಗಡೆ):** ಎಲ್ಲರೂ ಬದುಕನ್ನು ನೋಡುವ ರೀತಿ ಮತ್ತು ಅವರಿಗಾಗಿರುವ ಜೀವನಾನುಭವಗಳು ಸೌಂದರ್ಯದ ಬಗ್ಗೆ ಅವರವರ ದೃಷ್ಟಿಕೋನವನ್ನು ರೂಪಿಸುತ್ತವೆ. ಸಹಜತೆಯೇ ಸೌಂದರ್ಯ ಅನ್ನುವುದನ್ನು ಬಲವಾಗಿ ನಂಬುವವಳು ನಾನು.

**ಪ್ರಶ್ನೆ (ಸಭಿಕರು): ನಿಮ್ಮ ಬಾಲ್ಯದ ಅನುಭವಗಳ ಬಗ್ಗೆ ಕೊಂಚ ತಿಳಿಸಿ:**

**ಲೇಖನಾ ಹೆಗ್ಡೆ :** ಸುಮಾರು 2000ರ ಹೊತ್ತಿಗೆ ಅಮ್ಮ ಬೆಂಗಳೂರಿಗೆ ಬಂದರು. ಕುಟುಂಬದ ಜವಾಬ್ದಾರಿಯನ್ನು ಬಹುಬೇಗನೆ ವಹಿಸಿಕೊಂಡಿದ್ದಲ್ಲದೆ ನನ್ನ ಬಾಲ್ಯವನ್ನು ಕೂಡ ತಮ್ಮದೇ ಆದ ರೀತಿಯಲ್ಲಿ ಚಂದಗಾಣಿಸಿದರು. ಅಮ್ಮ ನನಗೆ ನೀಡಿದ್ದ ಸಂಪೂರ್ಣ ಸ್ವಾತಂತ್ರ್ಯವನ್ನು ನಾನು ನನ್ನ ಗುರಿ ತಲುಪಲು ಸಮರ್ಥವಾಗಿ ಬಳಸಿಕೊಂಡೆ. ಸ್ಪಷ್ಟ ಗುರಿಯತ್ತಲೇ ನನ್ನ ಸಂಪೂರ್ಣ ಪರಿಶ್ರಮವಿದ್ದ ಪರಿಣಾಮವಾಗಿ ಅಮ್ಮ, ಸೋದರ ಮತ್ತು ಸೋದರಿ ತಮ್ಮ ಆಸೆ–ಆಕಾಂಕ್ಷೆಗಳನ್ನು ಬದಿಗಿಟ್ಟು ನನಗೆ ಎಲ್ಲಾ ರೀತಿಯಿಂದಲೂ ಬೆಂಬಲವಾಗಿ ನಿಂತಿದ್ದರು. 2020ರ ಭಾರತೀಯ ಬಾಸ್ಕೆಟ್ ಬಾಲ್ ತಂಡವನ್ನು ಸೇರಿಕೊಂಡು ದೇಶವನ್ನು ಪ್ರತಿನಿಧಿಸಬೇಕು ಎಂಬ ದೊಡ್ಡ ಕನಸು ನನ್ನದಾಗಿತ್ತು. ಆದರೆ ಬದುಕು ಮುಂದೆ ಇದಕ್ಕಿಂತಲೂ ಅಗಾಧ ಸಾಧ್ಯತೆಗಳನ್ನು ನನಗೆ ನೀಡುತ್ತಾ ಹೋಗಿದ್ದು ಒಂದರ್ಥದಲ್ಲಿ ಸಿಹಿಯಾದ ಅಚ್ಚರಿಯೂ ಹೌದು

**ಪ್ರಶ್ನೆ (ಸಭಿಕರು):** ನಿಮ್ಮ ಯಶಸ್ಸಿನ ಗುಟ್ಟೇನು?

**ಲೇಖನಾ ಹೆಗ್ಡೆ :** ನಿಮ್ಮ ಆಪ್ತರ ಬೆಂಬಲ ಸದಾ ಇರಲಿ. ಗೊಂದಲದ ಸಂದರ್ಭದಲ್ಲಿ ದಾರಿ ತೋರಲು ಮಾರ್ಗದರ್ಶಕರಿರಲಿ. ಗುರಿಯಲ್ಲಿ ಸ್ಪಷ್ಟತೆ, ಅಪಾರವಾದ ಶ್ರದ್ಧೆ, ಪರಿಶ್ರಮ, ಪ್ರೀತಿಪಾತ್ರರ ಸಲಹೆ... ಹೀಗೆ ಯಶಸ್ಸಿನ ದಾರಿಯಲ್ಲಿ ಇವೆಲ್ಲವೂ ಬೇಕಾಗುತ್ತವೆ.

**ಪ್ರಶ್ನೆ (ಸಭಿಕರು):** ನಮ್ಮ ಪೀಳಿಗೆಯ ಮಕ್ಕಳಿಗೆ ನಿಮ್ಮ ಸಲಹೆಯೇನು?

**ಲೇಖನಾ ಹೆಗ್ಡೆ :** ಕ್ರೀಡೆ ನಿಮ್ಮ ಬದುಕಿನ ಭಾಗವೇ ಆಗಿರಲಿ. ಶಾಲೆಗಳಲ್ಲಿ, ಮನೆಗಳಲ್ಲಿ ಓದಿಗೆ ಸಿಗುವಷ್ಟು ಪ್ರಾಶಸ್ತ್ಯವು ಕ್ರೀಡೆಗೂ ಸಿಗಲಿ. ಮುನ್ನುಗ್ಗುವ ಛಲ, ದಣಿವಿಲ್ಲದ ಪರಿಶ್ರಮಗಳಿದ್ದರೆ ಯಶಸ್ಸು ಖಚಿತವೆಂಬುದು ನನ್ನ ಅನುಭವದ ಮಾತು.

**ಪ್ರಶ್ನೆ (ಸಭಿಕರು):** ಸ್ಪರ್ಧೆಯಲ್ಲಿ ವಿಜೇತರಾಗಿ ಬಂದ ನಂತರ ನಿಮಗೆ ದಕ್ಕಿರುವ ಬಹುಮಾನದ ಮೊತ್ತ ಮತ್ತು ಜೊತೆಗೇ ಬಂದಿರುವ ಖ್ಯಾತಿಯನ್ನು ಹೇಗೆ ಬಳಸಿಕೊಳ್ಳುತ್ತೀರಿ?

**ಲೇಖನಾ ಹೆಗ್ಡೆ :** ನನ್ನ ತಾಯಿ ಪ್ರಾಣಿಗಳಿಗಾಗಿ "ಕುಟೀರ" ಎಂಬ ಸರ್ಕಾರೇತರ ಸಂಸ್ಥೆಯೊಂದನ್ನು ನಡೆಸುತ್ತಿದ್ದಾರೆ. ಈ ಸಂಸ್ಥೆಯ ಕಾರ್ಯಕ್ಷೇತ್ರವನ್ನು ಮತ್ತಷ್ಟು ವಿಸ್ತರಿಸಿ, ನಗರದಲ್ಲಿ ಕಾಣಸಿಗುವ ಬೀದಿ ನಾಯಿಗಳಿಗೆ ಒಂದೊಳ್ಳೆಯ ಆಶ್ರಯ ವ್ಯವಸ್ಥೆಯನ್ನು ಕಲ್ಪಿಸಿಕೊಡುವ ಯೋಜನೆಯೊಂದು ಸದ್ಯ ನನ್ನ ಮುಂದಿದೆ.

**ಪ್ರಶ್ನೆ (ಸಭಿಕರು):** ಸೌಂದರ್ಯ ಸ್ಪರ್ಧೆಗಳಲ್ಲಿ ಸೌಂದರ್ಯ ಮತ್ತು ಇತರ ಅರ್ಹತೆಗಳ ಜೊತೆಗೆ ಸಂವಹನ ಸಾಮರ್ಥ್ಯ ಎಷ್ಟು ಮುಖ್ಯವಾಗುತ್ತದೆ?

**ಲೇಖನಾ ಹೆಗ್ಡೆ :** ವಿದ್ಯಾಭ್ಯಾಸದಂತಹ ಅರ್ಹತೆಗಳು ಎಲ್ಲಾ ಕಡೆಯೂ ಸಲ್ಲುವಂಥದ್ದೇ. ವಿಶೇಷವಾಗಿ ಈ ಸೌಂದರ್ಯ ಸ್ಪರ್ಧೆಗಳ ಅಂತಿಮ ಹಂತದಲ್ಲಿ ಸಂವಹನ ಸಾಮರ್ಥ್ಯವು ಬಹಳ ಮುಖ್ಯ ಪಾತ್ರವನ್ನು ವಹಿಸುತ್ತದೆ.

**ಪ್ರಶ್ನೆ (ಸಭಿಕರು):** ನಿಮ್ಮ ಬದುಕಿನ ಆದರ್ಶ ವ್ಯಕ್ತಿ ಯಾರು?

**ಲೇಖನಾ ಹೆಗ್ಡೆ :** ನನ್ನಕ್ಕ ನನ್ನ ಬದುಕಿನ ಆದರ್ಶ ವ್ಯಕ್ತಿ. ಬದುಕಿನ ಪ್ರತಿಯೊಂದು ಹಂತದಲ್ಲೂ ನನ್ನನ್ನು ಹುರಿದುಂಬಿಸಿದವಳು ಆಕೆ. ನಟಿ, ರೂಪದರ್ಶಿ ಮತ್ತು ಮಿಸ್ ವರ್ಲ್ಡ್ (2000) ಆಗಿರುವ ಲಾರಾ ದತ್ತರವರ ಸರಳತೆ ಮತ್ತು ನೇರ ನಡೆನುಡಿ ನನಗೆ ಬಹಳ ಇಷ್ಟ. ಹಿಂದೊಮ್ಮೆ ಸಂದರ್ಶನವೊಂದರಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ನಮ್ಮ ಜಾತಿ-ಧರ್ಮ-ಬಣ್ಣಗಳು ಬೇರೆಯಾದರೂ, ನಮ್ಮೊಳಗೆ ಹರಿಯುವ ರಕ್ತದ ಬಣ್ಣವೊಂದೇ ಎಂದು ಅವರು ಹೇಳಿದ್ದರು. ಅವರ ಈ ಮಾತು ಈಗಲೂ ನನ್ನ ಕಿವಿಯಲ್ಲಿ ಗುನುಗಿದಂತೆ ಆಗುವುದುಂಟು.

**ಪ್ರಶ್ನೆ (ಸಭಿಕರು):** ಟೀಕೆಗಳನ್ನು ಹೇಗೆ ಸ್ವೀಕರಿಸುತ್ತೀರಿ?

**ಲೇಖನಾ ಹೆಗ್ಡೆ :** ಟೀಕೆಗಳನ್ನು ನನ್ನ ಜೀವನದ ಭಾಗವನ್ನಾಗಿಸಿಕೊಂಡಿದ್ದೇನೆ. ಅವುಗಳು ಹೊಸ ವಿಚಾರಗಳನ್ನು ಕಲಿಯಲು ನನ್ನನ್ನು ಪ್ರೇರೇಪಿಸಿವೆ.

**ಪ್ರಶ್ನೆ (ಸಭಿಕರು):** ನಿಮ್ಮ ಫಿಟ್‌ನೆಸ್ ಗುಟ್ಟು ನಮ್ಮೊಂದಿಗೆ ಹಂಚಿಕೊಳ್ಳಬಹುದೇ?

**ಲೇಖನಾ ಹೆಗ್ಡೆ :** ಶಿಸ್ತಿನ ಜೀವನಶೈಲಿ, ಆರೋಗ್ಯಕರ ಊಟ, ವ್ಯಾಯಾಮ, 8 ತಾಸಿನ ನಿದ್ದೆ ನನ್ನ ಫಿಟ್‌ನೆಸ್ ಗುಟ್ಟು.

ಸಂವಾದ ಕಾರ್ಯಕ್ರಮದ ಕೊನೆಯಲ್ಲಿ ಲವಲವಿಕೆಯ ಮಾತುಕತೆಯನ್ನು ಮೆಚ್ಚಿಕೊಂಡು ಮಾತನಾಡಿದ ಲೇಖನಾರವರು ಸ್ಪರ್ಧೆಯ ಫಲಿತಾಂಶ ಏನೇ ಆದರೂ ಮುಂದಿನ ಎಂಟು ತಿಂಗಳಲ್ಲಿ ಇನ್ನೂ ಉತ್ತಮ ಕನ್ನಡದಲ್ಲಿ ನಿಮ್ಮೊಂದಿಗೆ ಖಂಡಿತ ಮಾತನಾಡುತ್ತೇನೆ ಎಂದು ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸಿದರು.

ನಂತರ ಮಾತನಾಡಿದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ರೇಣುಕುಮಾರ್ ಆರ್. ಅವರು ಮಾತನಾಡುತ್ತಾ, ಮನವನ್ನು ಮುದಗೊಳಿಸಿದ ಈ ಕಾರ್ಯಕ್ರಮವು ಯಶಸ್ವಿಯಾಗಿದೆ. ಲೇಖನಾರ ಸಾಧನೆಯ ಬದುಕು ನಮ್ಮೆಲ್ಲರಿಗೂ ಮಾದರಿ. ಹೀಗೆ ಕನ್ನಡ ನಾಡಿನ ಮತ್ತಷ್ಟು ಸಾಧಕರನ್ನು ಭೇಟಿಯಾಗುವ, ತಿಳಿಯುವ ವೇದಿಕೆಯಾಗಿ ದೆಹಲಿ ಕರ್ನಾಟಕ ಸಂಘವು ಸದಾ ಸ್ಫೂರ್ತಿಯ ಕೇಂದ್ರವಾಗಿರಲಿ ಎಂದು ಆಶಿಸಿದರು. ಸಂಘದ ಜಂಟಿ ಕಾರ್ಯದರ್ಶಿಯಾಗಿರುವ ಅಶ್ವಿನಿ ಬಿ.ಎಸ್. ರವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮವು ಅಧಿಕೃತವಾಗಿ ಮುಕ್ತಾಯವಾಯಿತು.

ಪ್ರಧಾನ ಕಾರ್ಯದರ್ಶಿ ಶ್ರೀ ರಾಧಾಕೃಷ್ಣ, ಖಜಾಂಚಿ ಶ್ರೀಮತಿ ಆಶಾಲತಾ ಎಂ., ಮತ್ತು ಕಾರ್ಯಕಾರಿ ಸಮಿತಿ ಸದಸ್ಯೆ ಶ್ರೀಮತಿ ಪೂಜಾ ಪಿ. ರಾವ್ ಕು. ಲೇಖನಾ ಹೆಗ್ಡೆ ಅವರನ್ನು ಬರಮಾಡಿಕೊಂಡರು. ❑

***ಹರಿಪ್ರಿಯ ಎಸ್.***

## ಆತ್ಮೀಯ ಬೀಳ್ಕೊಡುಗೆ



ಕೇಂದ್ರ ಸರ್ಕಾರದ ಗೃಹ ಮಂತ್ರಾಲಯದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಶ್ರೀ ಕೆಂಪರಾಜು ಅವರಿಗೆ ಬೆಂಗಳೂರಿಗೆ ವರ್ಗಾವಣೆಯಾದ ಕಾರಣ ಕುಟುಂಬ ಸಮೇತರಾಗಿ ತಾಯ್ನಾಡಿಗೆ ತೆರಳುತ್ತಿರುವ ಅವರನ್ನು ಮತ್ತು ಅವರ ಪತ್ನಿ ಶ್ರೀಮತಿ ಜಯಶೀಲಾ ವೈ.ಜೆ. ಮತ್ತು ಅವರ ಮಕ್ಕಳನ್ನು ದಿನಾಂಕ 10.05.2026ರಂದು ಆತ್ಮೀಯವಾಗಿ ಬೀಳ್ಕೊಡಲಾಯಿತು.

ಶ್ರೀ ಕೆಂಪರಾಜು ಅವರು ಕಳೆದು 5 ವರ್ಷಗಳಿಂದ ದೆಹಲಿಯಲ್ಲಿ ವಾಸವಿದ್ದು ಸಂಘದ ಚಟುವಟಿಕೆಗಳಲ್ಲಿ ಸದಾ ಸಕ್ರಿಯವಾಗಿ ಭಾಗಿಯಾಗುತ್ತಿದ್ದರು. ಶ್ರೀಮತಿ ಜಯಶೀಲಾ ಅವರು ತಮ್ಮ ವಕೀಲ ಪದವಿ ಪಡೆದು ಹಿರಿಯ ವಕೀಲರ ಮಾರ್ಗದರ್ಶನದಲ್ಲಿ ಅಭ್ಯಾಸ ಮಾಡುತ್ತಿದ್ದರು. ದೆಹಲಿ ಕನ್ನಡ ಚಟುವಟಿಕೆಗಳಲ್ಲಿ ಬಹಳ ಮುತುವರ್ಜಿಯಿಂದ ತಾವು ಮತ್ತು ಮಕ್ಕಳು ಭಾಗವಹಿಸುತ್ತಿದ್ದ ಕ್ಷಣಗಳನ್ನು ನೆನೆಯುತ್ತಾ ದೆಹಲಿ ಕರ್ನಾಟಕ ಸಂಘದ ವೇದಿಕೆಯನ್ನು ಮರೆಯಲಾಗದು ಎಂದು ತಮ್ಮ ಮಾತಿನಲ್ಲಿ ಭಾವುಕರಾದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ರೇಣುಕುಮಾರ್ ಅವರು ಮಾತನಾಡಿ, "ಇಂತಹ ಘಳಿಗೆ ಪ್ರತಿಯೊಬ್ಬರ ಜೀವನದಲ್ಲೂ ಅಮೃತ ಘಳಿಗೆಯೇ ಆಗಿರುತ್ತದೆ. ಕೆಲವರಿಗೆ ಅದು ಬೇಗ ಬಂದರೆ, ಇನ್ನೂ ಕೆಲವರಿಗೆ ಬಹಳ ತಡವಾಗಿ ಬರುತ್ತದೆ," ಎಂದು ತಮ್ಮ ಅಭಿಪ್ರಾಯವನ್ನು ಹಂಚಿಕೊಂಡರು. ಬಳಿಕ ಹುಟ್ಟೂರಿಗೆ ತೆರಳುತ್ತಿರುವ ಶ್ರೀ ಕೆಂಪರಾಜು ದಂಪತಿಗಳಿಗೆ ಶಾಲು ಹೊದಿಸಿ, ಸಂಘದ ಸ್ಮರಣಿಕೆಯನ್ನು ನೀಡಿ, ದೆಹಲಿ ಕನ್ನಡಿಗರ ಪರವಾಗಿ ಆತ್ಮೀಯವಾಗಿ ಅಭಿನಂದಿಸಿ ಬೀಳ್ಕೊಡಲಾಯಿತು. ❑




ದಿನಾಂಕ 12ನೇ ಮೇ 2026 ರಂದು ದೆಹಲಿ ಕರ್ನಾಟಕ ಸಂಘ ಆಯೋಜಿಸಿದ್ದ ಕರ್ನಾಟಕದ ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣ ಮತ್ತು ಅಕ್ಕಮಹಾದೇವಿ ಜಯಂತಿ ಕಾರ್ಯಕ್ರಮದಲ್ಲಿ ತಾಯ್ನಾಡಿಗೆ ತೆರಳುತ್ತಿರುವ ಸಂಘದ ಹಿರಿಯ ಆಜೀವ ಸದಸ್ಯರಾದ ಶ್ರೀ ಗಿರಿಯ ಪೂಜಾರಿ ಅವರನ್ನು ಸಂಘದ ಪರವಾಗಿ ಅಭಿನಂದಿಸಿ ಆತ್ಮೀಯವಾಗಿ ಬೀಳ್ಕೊಡುತ್ತಿರುವುದು.

# ಆರೋಗ್ಯ: ಜೀವನಶೈಲಿ, ಆಹಾರ ಪದ್ಧತಿ ಮತ್ತು ಚಿಂತನೆ ಸಮಸ್ಯೆ ಮತ್ತು ಪರಿಹಾರ
# ಭಾರತದ ಯುವಕರಲ್ಲಿ ಹೆಚ್ಚುತ್ತಿರುವ ಹೃದಯಾಘಾತಗಳು- ಸಮಸ್ಯೆಯನ್ನು ಅರ್ಥಮಾಡಿಕೊಳ್ಳುವುದು ಹಾಗೂ ನಿಮ್ಮನ್ನು ರಕ್ಷಿಸಿಕೊಳ್ಳುವುದು ಹೇಗೆ?

## ಆತಂಕಕಾರಿ ಬೆಳವಣಿಗೆ

ಹಿಂದೆ 35 ನೇ ವಯಸ್ಸಿನಲ್ಲಿ ಹೃದಯಾಘಾತ ಅಪರೂಪವಾಗಿತ್ತು. ಇಂದು ಅದು ಸುದ್ದಿಯ ಶೀರ್ಷಿಕೆ.

20 ರಿಂದ 40 ವರ್ಷ ವಯಸ್ಸಿನ ಭಾರತೀಯರಲ್ಲಿ ಹೃದಯಾಘಾತಗಳು ಸ್ಥಿರವಾಗಿ ಏರುತ್ತಿವೆ. ICMR ದತ್ತಾಂಶದ ಪ್ರಕಾರ, ಭಾರತದಲ್ಲಿ ಹೃದಯಾಘಾತ ರೋಗಿಗಳಲ್ಲಿ ಸುಮಾರು ಅರ್ಧದಷ್ಟು ಜನರು 50 ವರ್ಷಕ್ಕಿಂತ ಕಡಿಮೆ ವಯಸ್ಸಿನವರು, ಮತ್ತು ಗಮನಾರ್ಹ ಪ್ರಮಾಣದ ಪ್ರಕರಣಗಳು 40 ವರ್ಷಕ್ಕಿಂತ ಮೊದಲೇ ಸಂಭವಿಸುತ್ತಿವೆ. ಪಾಶ್ಚಿಮಾತ್ಯ ಜನರಿಗಿಂತ ಭಾರತೀಯರಿಗೆ ಸುಮಾರು ಒಂದು ದಶಕ ಮುಂಚೆಯೇ ಹೃದ್ರೋಗ ಬರುತ್ತದೆ. ದೆಹಲಿ, ಮುಂಬೈ, ಬೆಂಗಳೂರು ನಗರಗಳಲ್ಲಿ ಹೃದ್ರೋಗ ತಜ್ಞರು ಪ್ರತಿ ವಾರ ತಮ್ಮ ಕ್ಯಾಥ್ ಲ್ಯಾಬ್‌ನಲ್ಲಿ 20 ಮತ್ತು 30ರ ಹರೆಯದ ರೋಗಿಗಳನ್ನು ನೋಡುವುದು ಸಾಮಾನ್ಯವಾಗುತ್ತಿದೆ.

ಇದು ಕೇವಲ ದುರದೃಷ್ಟವಲ್ಲ. ಇದು ಆಧುನಿಕ ಭಾರತಕ್ಕೆ ವಿಶಿಷ್ಟವಾದ ಜೆನೆಟಿಕ್ಸ್, ಜೀವನಶೈಲಿ, ಮಾಲಿನ್ಯ ಮತ್ತು ಮಾನಸಿಕ ಒತ್ತಡದ ಪರಿಪೂರ್ಣ ತಾಂಡವ.

**ಭಾರತೀಯ ಯುವಕರು ಏಕೆ ಹೆಚ್ಚು ಅಪಾಯದಲ್ಲಿದ್ದಾರೆ?**

ಹೃದಯಾಘಾತದ ಕಾರಣಗಳು ಈಗ ಮಧುಮೇಹ, ಅಧಿಕ ರಕ್ತದೊತ್ತಡ, ಧೂಮಪಾನ ಮತ್ತು ಅಧಿಕ ಕೊಲೆಸ್ಟ್ರಾಲ್‌ನಂತಹ ಸಾಂಪ್ರದಾಯಿಕ ಅಪಾಯಕಾರಿ ಅಂಶಗಳನ್ನು ಮೀರಿ ವಿಸ್ತರಿಸಿವೆ.

**1. ಭಾರತೀಯ-ನಿರ್ದಿಷ್ಟ ಮತ್ತು ಆನುವಂಶಿಕ ಅಪಾಯಗಳು**

▸ ಜೀನ್‌ಗಳ ಅನನುಕೂಲತೆ : ನಮ್ಮ ಅಪಧಮನಿಗಳು ಕಿರಿದಾಗಿವೆ ಮತ್ತು ಕೊಲೆಸ್ಟ್ರಾಲ್ ಅನ್ನು ಹೆಚ್ಚು ಆಕ್ರಮಣಕಾರಿಯಾಗಿ ಸಂಗ್ರಹಿಸುತ್ತೇವೆ. ಹೆಚ್ಚಾದ ಲಿಪೊಪ್ರೋಟೀನ್(A), ಸಣ್ಣ ಸಾಂದ್ರತೆಯ LDL ಕೊಲೆಸ್ಟ್ರಾಲ್, ಹೈಪರ್‌ಹೋಮೋಸಿಸ್ಟೀನಿಮಿಯಾ ಇದಕ್ಕೆ ಕಾರಣ.

▸ 'ತೆಳ್ಳ-ಕೊಬ್ಬಿನ' thin-fat ದೇಹ ಪ್ರಕಾರ: ದೈಹಿಕವಾಗಿ ತೆಳ್ಳಗೆ ಕಾಣುವ ವ್ಯಕ್ತಿಗಳಲ್ಲಿಯೂ ಹೃದಯದ ಸುತ್ತ ಅಪಾಯಕಾರಿ ಒಳಾಂಗಗಳ ವಿಸ್ಸೆರಲ್ ಕೊಬ್ಬು ಸಂಗ್ರಹವಾಗಿರುತ್ತದೆ.

▸ ಚಯಾಪಚಯ ಟೈಮ್ ಬಾಂಬ್ : ಮಧುಮೇಹ, ಅಧಿಕ ರಕ್ತದೊತ್ತಡ ಹಾಗೂ ಕೊಲೆಸ್ಟ್ರಾಲ್ 30 ನೇ ವಯಸ್ಸಿನಲ್ಲೇ ಪ್ರಾರಂಭವಾಗುತ್ತದೆ. ಈ "ಮೆಟಬಾಲಿಕ್ ಸಿಂಡ್ರೋಮ್" ಅಪಧಮನಿಗಳನ್ನು 10–15 ವರ್ಷ ವೇಗವಾಗಿ ವಯಸ್ಸಾಗಿಸುತ್ತದೆ.



ಲೇಖಕರು : ಡಾ. ಬಿ. ನಿರಂಜನ್ ನಾಯ್ಕ್
**ಎಂಬಿಬಿಎಸ್, ಎಂಎಸ್** (AIIMS)
ONCO-**ಸರ್ಜರಿ** (IRCH, AIIMS) FALS
**ಉಪಾಧ್ಯಕ್ಷರು ಮತ್ತು ವಿಭಾಗದ ಮುಖ್ಯಸ್ಥರು**
**ಕ್ಯಾನ್ಸರ್ ಶಸ್ತ್ರಚಿಕಿತ್ಸೆ ಹಾಗೂ**
**ರೊಬೋಟಿಕ್ ಶಸ್ತ್ರಕ್ರಿಯಾ ವಿಭಾಗ, ಪಾರಸ್ ಆಸ್ಪತ್ರೆ**
**ಗುರುಗ್ರಾಮ, ಹರಿಯಾಣ**
(**ಮೊ.**) 9810203273
**ಇಮೇಲ್** : bniranjan29@gmail.com

▸ ಧೂಮಪಾನ : ಒಂದು ಸಿಗರೇಟ್ ಕೆಲವೇ ನಿಮಿಷಗಳಲ್ಲಿ ಅಪಧಮನಿಯ ಪದರವನ್ನು ಹಾನಿಗೊಳಿಸುತ್ತದೆ. ಬೀಡಿ, ಗುಟ್ಕಾ ಸಮಾನವಾಗಿ ಅಪಾಯಕಾರಿ. 40 ಕ್ಕಿಂತ ಕಡಿಮೆ ವಯಸ್ಸಿನ ಧೂಮಪಾನಿಗಳಿಗೆ ಅಪಾಯ 5 ಪಟ್ಟು ಹೆಚ್ಚು.

▸ ಅನಾರೋಗ್ಯಕರ ಆಹಾರ : ಜಂಕ್ ಫುಡ್, ಸಂಸ್ಕರಿಸಿದ ಕಾರ್ಬೋಹೈಡ್ರೇಟ್‌ಗಳು, ಸಕ್ಕರೆ ಪಾನೀಯಗಳು, ಹೆಚ್ಚು ಉಪ್ಪಿನ ನಮಕೀನ್, ಮರುಬಳಕೆಯ ಎಣ್ಣೆಯಲ್ಲಿ ಟ್ರಾನ್ಸ್ ಫ್ಯಾಟ್. ಜೊತೆಗೆ ಕಡಿಮೆ ಪ್ರೋಟೀನ್ ಮತ್ತು ನಾರಿನ ಸೇವನೆ. ಇದು ಬೊಜ್ಜು ಮತ್ತು ಚಯಾಪಚಯ ಅಸ್ವಸ್ಥತೆಗಳಿಗೆ ಕಾರಣ.

▸ ಜಡ ಜೀವನ : ದಿನಕ್ಕೆ 8+ ಗಂಟೆ ಕುಳಿತುಕೊಳ್ಳುವುದು, ವ್ಯಾಯಾಮ ಶೂನ್ಯತೆ.

▸ ಒತ್ತಡ ಮತ್ತು ನಿದ್ರೆಯ ಕೊರತೆ : 12–ಗಂಟೆ ಕೆಲಸ, ಟ್ರಾಫಿಕ್, EMI ಒತ್ತಡ ಮತ್ತು 5 ಗಂಟೆ ನಿದ್ರೆ ದೀರ್ಘಕಾಲದ ಕಾರ್ಟಿಸೋಲ್ ಹೆಚ್ಚಿಸುತ್ತದೆ. ಇದು BP, ಸಕ್ಕರೆ ಮತ್ತು ಉರಿಯೂತವನ್ನು (inflammation) ಹೆಚ್ಚಿಸುತ್ತದೆ.

▸ ವಾಯು ಮಾಲಿನ್ಯ: ದೆಹಲಿಯಂತಹ ನಗರಗಳಲ್ಲಿ PM 2.5 ಕಣಗಳು ರಕ್ತಪ್ರವಾಹ ಸೇರಿ ಉರಿಯೂತ ಮತ್ತು ರಕ್ತನಾಳಗಳಿಗೆ ಹಾನಿ ಮಾಡುತ್ತವೆ. WHO ಇದನ್ನು ಪ್ರಮುಖ ಹೃದಯ ಅಪಾಯಜನಕ ಅಂಶ ಎಂದಿದೆ.

▸ ಜಿಮ್ ಸಪ್ಲಿಮೆಂಟ್‌ಗಳು ಮತ್ತು ಸ್ಟೀರಾಯ್ಡ್‌ಗಳು : ನಿಯಂತ್ರಣವಿಲ್ಲದ ಪ್ರಿ-ವರ್ಕೌಟ್‌ಗಳು, ಫ್ಯಾಟ್ ಬರ್ನರ್‌ಗಳು ಮತ್ತು ಅನಾಬೋಲಿಕ್ ಸ್ಟೀರಾಯ್ಡ್‌ಗಳು ಅರಿತ್ಮಿಯಾ ಮತ್ತು ಹಠಾತ್ ಹೃದಯ ಸಾವಿಗೆ ಕಾರಣವಾಗಬಹುದು.

▸ ಕೋವಿಡ್ ನಂತರದ ಪರಿಣಾಮ : ಹೆಚ್ಚಾದ ರಕ್ತ ಹೆಪ್ಪುಗಟ್ಟುವ ಪ್ರವೃತ್ತಿ ಮತ್ತು ರಕ್ತನಾಳಗಳ ಅಸಾಮಾನ್ಯ ಕ್ರಿಯೆ 6–12 ತಿಂಗಳವರೆಗೆ ಯುವಕರಲ್ಲಿ ಹೃದಯ ಘಟನೆಗಳನ್ನು ಹೆಚ್ಚಿಸಿರಬಹುದು.

▸ ಎಚ್ಚರಿಕೆಯ ಲಕ್ಷಣಗಳನ್ನು ನಿರ್ಲಕ್ಷಿಸುವುದು : ಎದೆ ಉರಿ, ಭುಜ / ದವಡೆ ನೋವು, ಅಸಾಮಾನ್ಯ ಆಯಾಸವನ್ನು "ಗ್ಯಾಸ್" ಎಂದು ತಳ್ಳಿಹಾಕುವುದರಿಂದ ಎಮರ್ಜೆನ್ಸಿ ವಿಭಾಗಕ್ಕೆ ತಡವಾಗಿ ತಲುಪುತ್ತಾರೆ.

ಹೆಚ್ಚಿನ ಅಪಾಯದ ಪ್ರೊಫೈಲ್ : ನೀವು ರೆಡ್ ಝೋನ್‌ನಲ್ಲಿದ್ದೀರಾ?

ಇವುಗಳಲ್ಲಿ 3 ಅಥವಾ ಹೆಚ್ಚಿನವು ಇದ್ದರೆ ಜಾಗರೂಕರಾಗಿರಿ :

*ಅಪಾಯಕಾರಿ ಅಂಶ* *ಏಕೆ ಮುಖ್ಯ*

*ಕುಟುಂಬದ ಇತಿಹಾಸ* ತಂದೆ/ಸಹೋದರ <55 ಅಥವಾ ತಾಯಿ / ಸಹೋದರಿ <65 ವಯಸ್ಸಿನಲ್ಲಿ ಹೃದ್ರೋಗ

*ಸೊಂಟದ ಸುತ್ತಳತೆ >90cm ಪುರುಷರು, >80cm ಮಹಿಳೆಯರು* ಒಳಾಂಗಗಳ ವಿಸ್ಸೆರಲ್ ಕೊಬ್ಬು ಅತ್ಯಂತ ಅಪಾಯಕಾರಿ.

*BP >130/80* "ಪ್ರೀ-ಹೈಪರ್‌ಟೆನ್ಷನ್" ಈಗಾಗಲೇ ಅಪಧಮನಿಗಳನ್ನು ಹಾನಿಗೊಳಿಸುತ್ತಿದೆ.

*HbA1c >5.7* ಪ್ರಿಡಯಾಬಿಟಿಸ್ ಹಂತ– ಈಗಲೇ ಕ್ರಮ ಕೈಗೊಳ್ಳಿ

* ಧೂಮಪಾನ / ವೇಪಿಂಗ್ ಯಾವುದೇ ಪ್ರಮಾಣ* ಹೃದಯಕ್ಕೆ ಯಾವುದೇ ಸುರಕ್ಷಿತ ಮಟ್ಟವಿಲ್ಲ.

* LDL >100 ಅಥವಾ ಟ್ರೈಗ್ಲಿಸರೈಡ್‌ಗಳು >150* ಭಾರತೀಯ ಗುರಿ ಅಂಕಿಗಳು ಕಠಿಣವಾಗಿವೆ.

*ನಿದ್ರೆ <6 ಗಂಟೆಗಳು* ರಾತ್ರಿ BP ಇಳಿಯುವುದಿಲ್ಲ, ಹೃದಯಕ್ಕೆ ವಿಶ್ರಾಂತಿ ಸಿಗುವುದಿಲ್ಲ.

**ತಡೆಗಟ್ಟುವಿಕೆ:** ನಿಮ್ಮ ಹೃದಯದ ರಕ್ಷಣಾ ಯೋಜನೆ ನಿಮ್ಮ ಜೆನೆಟಿಕ್ಸನ್ನು ಬದಲಾಯಿಸಲು ಸಾಧ್ಯವಿಲ್ಲ. ಆದರೆ 80% ಅಪಾಯಕಾರಿ ಅಂಶಗಳನ್ನು ನೀವು ನಿಯಂತ್ರಿಸಬಹುದು.

**A. 7–ಅಂಶಗಳ ದೈನಂದಿನ ರಕ್ಷಾ ಕವಚ**

**1. ದಿನಕ್ಕೆ 30 ನಿಮಿಷ ಚಲಿಸಿ :** ಚುರುಕಾದ ನಡಿಗೆ, ಮೆಟ್ಟಿಲು, ನೃತ್ಯ. ನಿಮ್ಮ ಹೃದಯ ಕೂಡಾ ಒಂದು ಸ್ನಾಯು–ಬಳಸಿ ಮತ್ತು ಉಳಿಸಿ.

**2. ಹಿರಿಯರಂತೆ ತಿನ್ನಿ :** 50% ತಟ್ಟೆ ತರಕಾರಿ, ದಾಲ್/ರೊಟ್ಟಿ/ಅನ್ನ, ಬೀಜಗಳು, ಮೊಸರು, ಮೀನು. ಸಕ್ಕರೆ, ಮೈದಾ, ಕರಿದ ಆಹಾರ, ಪ್ಯಾಕ್

ಮಾಡಿದ ತಿಂಡಿ ಕಡಿಮೆ ಮಾಡಿ. ಪ್ರೋಟೀನ್ ಮತ್ತು ನಾರು ಹೆಚ್ಚಿಸಿ.

**3. 7–8 ಗಂಟೆ ನಿದ್ರೆ :** ನಿಗದಿತ ಮಲಗುವ ಸಮಯ. ಮಲಗುವ 1 ಗಂಟೆ ಮೊದಲು ಸ್ಕ್ರೀನ್ ಬೇಡ.

**4. ತಂಬಾಕು ಸಂಪೂರ್ಣವಾಗಿ ತ್ಯಜಿಸಿ :** ಯಾವುದೇ ರೂಪದಲ್ಲಿ. ತ್ಯಜಿಸಿದ 1 ವರ್ಷದಲ್ಲಿ ಅಪಾಯ 50% ಕಡಿಮೆ.

**5. ದಿನವೂ ಒತ್ತಡ ಕಡಿಮೆ ಮಾಡಿ :** 10 ನಿಮಿಷ ಪ್ರಾಣಾಯಾಮ, ಫೋನ್ ಇಲ್ಲದೆ ನಡಿಗೆ, ಕುಟುಂಬದೊಂದಿಗೆ ಮಾತು.

**6. 25ನೇ ವಯಸ್ಸಿನ ನಂತರ ಸ್ಕ್ರೀನಿಂಗ್ ಪ್ರಾರಂಭಿಸಿ:** ಲಿಪಿಡ್ ಪ್ರೊಫೈಲ್, ರಕ್ತದ ಸಕ್ಕರೆ, ಹೋಮೋಸಿಸ್ಟೀನ್ ಮಟ್ಟಗಳು, BP, ಸೊಂಟದ ಸುತ್ತಳತೆ, BMI ವಾರ್ಷಿಕವಾಗಿ ಪರೀಕ್ಷಿಸಿ. ಒತ್ತಡ ಮತ್ತು ನಿದ್ರೆಯ ಮಾದರಿಗಳನ್ನೂ ಮೌಲ್ಯಮಾಪನ ಮಾಡಿ.

**7. ಮದ್ಯ: ಕಡಿಮೆ ಸುರಕ್ಷಿತ:** ವಾರಕ್ಕೆ 1–2 ಬಾರಿಗೆ ಮಿತಿಗೊಳಿಸಿ. ಅತಿಯಾಗಿ ಕುಡಿಯುವುದು ಅರಿತ್ಮಿಯಾ ಪ್ರಚೋದಿಸಬಹುದು.

**B. ಅಪಾಯಕಾರಿ ಲಕ್ಷಣಗಳನ್ನು ನಿರ್ಲಕ್ಷಿಸಬೇಡಿ**

ಎದೆ ಭಾರ, ಎಡಗೈ / ದವಡೆ ನೋವು, ಹಠಾತ್ ಬೆವರುವುದು, ಉಸಿರಾಟದ ತೊಂದರೆ, ವಾಕರಿಕೆ, ತಲೆತಿರುಗುವಿಕೆ ಅಥವಾ ವಿವರಿಸಲಾಗದ ವಿಪರೀತ ಆಯಾಸ–ತಕ್ಷಣ ತುರ್ತು ಸೇವೆಗೆ ಕರೆ ಮಾಡಿ. ಯುವಕರಲ್ಲಿ ಇದು "ಅಸಿಡಿಟಿ" ಅಥವಾ "ಆತಂಕ" ಎನಿಸಬಹುದು. ಸಂದೇಹವಿದ್ದರೆ ECG ಮಾಡಿಸಿ. ತ್ವರಿತ ಸಮಯೋಚಿತ ಉಪಚಾರದಿಂದಲೇ ಜೀವ ಉಳಿಸಬಹುದು.

**C. ಕಚೇರಿಗಳು ಮತ್ತು ಕಾಲೇಜುಗಳಿಗೆ**

**1. CPR ತರಬೇತಿ :** ಕಡ್ಡಾಯಗೊಳಿಸಿ. ಪ್ರತ್ಯಕ್ಷದರ್ಶಿ CPR ಬದುಕುಳಿಯುವಿಕೆಯನ್ನು ದ್ವಿಗುಣಗೊಳಿಸುತ್ತದೆ.

**2. ಆರೋಗ್ಯಕರ ಕ್ಯಾಂಟೀನ್‌ಗಳು:** ಸಮೋಸಾ ಬದಲು ಹಣ್ಣು, ಕಡಲೆ, ಮೊಟ್ಟೆ. ನಿಂತು ಕೆಲಸ ಮಾಡುವ ಡೆಸ್ಕ್‌ಗಳು.

**3. ವಾರ್ಷಿಕ ಸ್ಕ್ರೀನಿಂಗ್ ಶಿಬಿರಗಳು:** 25+ ವರ್ಷದ ಎಲ್ಲರಿಗೂ BP, BMI, ಸಕ್ಕರೆ, ಲಿಪಿಡ್ ಪರೀಕ್ಷೆ.

**ಅಂತಿಮ ಮಾತು**

ಹೃದಯಾಘಾತ ಇನ್ನು "ವೃದ್ಧರ ರೋಗ" ಅಲ್ಲ. ನಮ್ಮ ಜೀನ್‌ಗಳು ಬಂದೂಕನ್ನು ಲೋಡ್ ಮಾಡುತ್ತವೆ, ಆದರೆ ಜೀವನಶೈಲಿ, ಮಾಲಿನ್ಯ ಮತ್ತು ಒತ್ತಡ ಟ್ರಿಗ್ಗರ್ ಎಳೆಯುತ್ತದೆ.

**ಒಳ್ಳೆಯ ಸುದ್ದಿ:** ಹೃದಯದ ರಕ್ತನಾಳಗಳಲ್ಲಿ ತಡೆಗಳು ನಿರ್ಮಾಣವಾಗಲು ವರ್ಷಗಳು ಬೇಕು. ಅಂದರೆ ಅವುಗಳನ್ನು ತಡೆಯಲು ನಿಮ್ಮ ಬಳಿ ಕೂಡ ವರ್ಷಗಳ ಅವಕಾಶವಿದೆ. ಇಂದಿನಿಂದಲೇ ಆಹಾರ, ನಿದ್ರೆ ಮತ್ತು ಧೂಮಪಾನವನ್ನು ಸರಿಪಡಿಸಿದರೆ 30 ವರ್ಷದ ವ್ಯಕ್ತಿ ತನ್ನ ಜೀವನಕ್ಕೆ 15 ಆರೋಗ್ಯಕರ ವರ್ಷಗಳನ್ನು ಸೇರಿಸಬಹುದು.

ನಿಮ್ಮ ಹೃದಯ ಮ್ಯಾರಥಾನ್ ಕೇಳುತ್ತಿಲ್ಲ. ಅದು ನಡಿಗೆ, 8 ಗಂಟೆ ನಿದ್ರೆ ಮತ್ತು ಒಂದು ಸಿಗರೇಟ್ ಕಡಿಮೆ ಕೇಳುತ್ತಿದೆ.

ಆ ಕರೆಯನ್ನು ಬೇಗನೆ ಕೇಳಿ ಹಾಗೂ ಅದಕ್ಕೆ ಮರ್ಯಾದೆ ಕೊಟ್ಟು ಪಾಲಿಸಿ. ನಿಮ್ಮನ್ನು ನೀವೇ ಉಳಿಸಿಕೊಳ್ಳಿ.❑



# ಅಹಂಕಾರಿ ಕಾಗೆ



ಒಂದು ದಿನ ಹಂಸಗಳ ಹಿಂಡು ಸಮುದ್ರ ತೀರದ ಮೇಲಿಂದ ಹಾರಿ ಹೋಗುತ್ತಿತ್ತು. ಅದೇ ಜಾಗದಲ್ಲಿ ಕಾಗೆಯೊಂದು ಮಜಾ ಮಾಡುತ್ತಾ ಕುಳಿತಿತ್ತು. ಅದು ಹಂಸಗಳನ್ನು ಅತ್ಯಂತ ನಿರ್ಲಕ್ಷ್ಯದ ದೃಷ್ಟಿಯಿಂದ ನೋಡುತ್ತಾ, ಪರಿಹಾಸ್ಯದ ಧ್ವನಿಯಲ್ಲಿ, "ನೀವೇನು ಮಹಾ ಚೆನ್ನಾಗಿ ಹಾರುತ್ತೀರಿ! ಬೇರೇನು ಗೊತ್ತು ನಿಮಗೆ? ಬರೀ ರೆಕ್ಕೆ ಬಡಿದುಕೊಂಡು ನೇರವಾಗಿ ಹಾರುವುದಷ್ಟೇ ನಿಮಗೆ ಗೊತ್ತು!!! ನನ್ನಂತೆ ಚುರುಕಾಗಿ ಹಾರಲು ನಿಮ್ಮಿಂದ ಸಾಧ್ಯವೇ??? ನನ್ನ ಹಾಗೆ ಗಾಳಿಯಲ್ಲಿ ಕರಾಮತ್ತುಗಳನ್ನು ತೋರಿಸಬಲ್ಲಿರಾ? ನಿಮಗೆ ಅಸಲಿಗೆ ಹಾರುವುದು ಎಂದರೆ ಏನೆಂದೇ ಸರಿಯಾಗಿ ಗೊತ್ತಿಲ್ಲ!" ಎಂದಿತು.

ಕಾಗೆಯ ಮಾತುಗಳನ್ನು ಕೇಳಿ ವೃದ್ಧ ಹಂಸವೊಂದು ಹೀಗೆ ಹೇಳಿತು, "ನಿನಗೆ ಇದೆಲ್ಲಾ ಮಾಡಲು ಬರುತ್ತದೆಂಬುದು ಒಳ್ಳೆಯ ವಿಷಯವೇ, ಆದರೆ ಈ ಬಗ್ಗೆ ನೀನು ಅಹಂಕಾರ ಪಡಬಾರದು."

"ನನಗೆ ಅಹಂಕಾರ ಗಿಹಂಕಾರ ಗೊತ್ತಿಲ್ಲ. ನಿಮ್ಮಲ್ಲಿ ಯಾರಿಗಾದರೂ ನನ್ನೊಂದಿಗೆ ಸ್ಪರ್ಧಿಸುವ ಧೈರ್ಯವಿದ್ದರೆ ಮುಂದೆ ಬನ್ನಿ ನನ್ನನ್ನು ಸೋಲಿಸಿ ತೋರಿಸಿ" ಎಂದು ಕಾಗೆ ಸವಾಲು ಹಾಕಿತು.

ಒಂದು ಯುವ ಗಂಡು ಹಂಸವು ಕಾಗೆಯ ಸವಾಲನ್ನು ಸ್ವೀಕರಿಸಿತು. ಸ್ಪರ್ಧೆಯು ಎರಡು ಹಂತಗಳಲ್ಲಿ ನಡೆಯುವುದೆಂದು ತೀರ್ಮಾನವಾಯಿತು. ಮೊದಲ ಹಂತದಲ್ಲಿ ಕಾಗೆಯು ತನ್ನ ಕಸರತ್ತುಗಳನ್ನು ತೋರಿಸಬೇಕು ಮತ್ತು ಹಂಸವು ಅದನ್ನೇ ಮಾಡಿ ತೋರಿಸಬೇಕು. ಎರಡನೇ ಹಂತದಲ್ಲಿ ಕಾಗೆಯು ಹಂಸದ ಕಸರತ್ತುಗಳನ್ನು ಪುನರಾವರ್ತಿಸಬೇಕು.

ಸ್ಪರ್ಧೆಯು ಪ್ರಾರಂಭವಾಯಿತು. ಮೊದಲ ಹಂತವನ್ನು ಕಾಗೆಯು ಶುರು ಮಾಡಿತು ಮತ್ತು ಒಂದಕ್ಕಿಂತ ಒಂದು ಅದ್ಭುತವಾದ ಕಸರತ್ತುಗಳನ್ನು ತೋರಿಸತೊಡಗಿತು. ಅದು ಕೆಲವೊಮ್ಮೆ ಗೋಲಾಕಾರವಾಗಿ ಸುತ್ತುತ್ತಿದ್ದರೆ, ಇನ್ನು ಕೆಲವೊಮ್ಮೆ ನೆಲವನ್ನು ಮುಟ್ಟುವಂತೆ ಬಂದು ತಟ್ಟನೆ ಮೇಲಕ್ಕೆ ಹಾರುತ್ತಿತ್ತು. ಆದರೆ, ಹಂಸವು ಅದರ ಎದುರು ಅಂತಹ ವಿಶೇಷವಾದದ್ದೇನನ್ನೂ ಮಾಡಲು ಸಾಧ್ಯವಾಗಲಿಲ್ಲ. ಇದನ್ನು ನೋಡಿ ಕಾಗೆ ಇನ್ನು ಜೋರಾಗಿ ಕೊಚ್ಚಿಕೊಳ್ಳಲು ಆರಂಭಿಸಿತು, "ನಾನು ಮೊದಲೇ ಹೇಳುತ್ತಿರಲಿಲ್ಲವೇ, ನಿಮಗೇನೂ ಬರುವುದಿಲ್ಲ ಎಂದು... ಹೀ ಹೀ ಹೀ..."

ನಂತರ ಎರಡನೇ ಹಂತ ಆರಂಭವಾಯಿತು. ಹಂಸವು ಮೇಲಕ್ಕೆ ಹಾರಿ ಸಮುದ್ರದ ಕಡೆಗೆ ಪ್ರಯಾಣ ಬೆಳೆಸಿತು. ಕಾಗೆಯೂ ಅದರ ಹಿಂದೆ ಹೊರಟಿತು. "ಇದೇನು ಮಹಾ ಪವಾಡ ತೋರಿಸುತ್ತಿದ್ದೀಯಾ? ಸುಮ್ಮನೆ ನೇರವಾಗಿ ಹಾರುವುದು ಒಂದು ಸವಾಲೇ??? ನಿಜಕ್ಕೂ ನೀನೊಬ್ಬ ಮೂರ್ಖ!" ಎಂದು ಕಾಗೆ ವ್ಯಂಗ್ಯವಾಡಿತು.

ಆದರೆ ಹಂಸವು ಯಾವುದೇ ಉತ್ತರ ನೀಡದೆ ಸುಮ್ಮನೆ ಹಾರುತ್ತಲೇ ಇತ್ತು. ಹಂತಹಂತವಾಗಿ ಅವು ಭೂಮಿಯಿಂದ (ತೀರದಿಂದ) ತುಂಬಾ ದೂರ ಹೋದವು. ಹೋದಂತೆಲ್ಲಾ ಕಾಗೆಯ ಬಡಬಡಿಕೆ ಕಡಿಮೆಯಾಗುತ್ತಾ ಬಂತು ಮತ್ತು ಸ್ವಲ್ಪ ಸಮಯದ ನಂತರ ಸಂಪೂರ್ಣವಾಗಿ ನಿಂತು ಹೋಯಿತು. ಕಾಗೆ ಈಗ ಎಷ್ಟು ದಣಿದಿತ್ತೆಂದರೆ, ಅದಕ್ಕೆ ಗಾಳಿಯಲ್ಲಿ ತನ್ನ ದೇಹವನ್ನು ಸಮತೋಲನದಲ್ಲಿ ಇಟ್ಟುಕೊಳ್ಳುವುದೂ ಕಷ್ಟವಾಗುತ್ತಿತ್ತು. ಅದು ಪದೇ ಪದೇ ಸಮುದ್ರದ ನೀರಿನ ಹತ್ತಿರಕ್ಕೆ ಕುಸಿಯುತ್ತಿತ್ತು.

ಹಂಸಕ್ಕೆ ಕಾಗೆಯ ಪರಿಸ್ಥಿತಿ ಅರ್ಥವಾಗುತ್ತಿತ್ತು, ಆದರೂ ಏನೂ ತಿಳಿಯದವನಂತೆ ನಟಿಸುತ್ತಾ, "ನೀನು ಯಾಕೆ ಪದೇ ಪದೇ ನೀರನ್ನು ಮುಟ್ಟುತ್ತಿದ್ದೀಯಾ? ಇದು ಕೂಡ ನಿನ್ನ ಕಸರತ್ತುಗಳಲ್ಲಿ ಒಂದೇನು?" ಎಂದು ಕೇಳಿತು.

"ಇಲ್ಲ" ಎಂದು ಕಾಗೆ ರೋದಿಸುತ್ತಾ ಹೇಳಿತು, "ನನ್ನನ್ನು ಕ್ಷಮಿಸಿಬಿಡು, ನಾನು ಸಂಪೂರ್ಣವಾಗಿ ದಣಿದು ಹೋಗಿದ್ದೇನೆ. ಈಗ ನೀನು ನನಗೆ ಸಹಾಯ ಮಾಡದಿದ್ದರೆ ನಾನು ಇಲ್ಲೇ ಪ್ರಾಣ ಬಿಡುತ್ತೇನೆ... ದಯವಿಟ್ಟು ನನ್ನನ್ನು ಬದುಕಿಸು, ನಾನು ಇನ್ಯಾವತ್ತೂ ಅಹಂಕಾರ ತೋರಿಸುವುದಿಲ್ಲ..."

ಹಂಸಕ್ಕೆ ಕಾಗೆಯ ಮೇಲೆ ದಯೆ ಬಂತು. ಕಾಗೆಗೆ ತಕ್ಕ ಪಾಠ ಕಲಿಸಿದಂತಾಗಿದೆ, ಈಗ ಅದರ ಜೀವ ಉಳಿಸುವುದೇ ಸರಿಯಾದ ಧರ್ಮ ಎಂದು ಯೋಚಿಸಿ, ಹಂಸವು ಕಾಗೆಯನ್ನು ತನ್ನ ಬೆನ್ನಿನ ಮೇಲೆ ಕುಳ್ಳಿರಿಸಿಕೊಂಡು ಮರಳಿ ಸಮುದ್ರ ತೀರದ ಕಡೆಗೆ ಹಾರಿ ಹೋಯಿತು.❑

# ರಾಘವೇಂದ್ರ ಪಾಟೀಲ 75 : ಧಾರವಾಡದಲ್ಲಿ ಸಂಘದಿಂದ ಅಭಿನಂದನೆ

**-ಡಾ. ವೆಂಕಟಾಚಲ ಹೆಗಡೆ**




ಕನ್ನಡ ಸಾಹಿತ್ಯಲೋಕದಲ್ಲಿ ಶ್ರೀ ರಾಘವೇಂದ್ರ ಪಾಟೀಲರಿಗೆ ಅವರದ್ದೇ ಆದ ವಿಶಿಷ್ಟ ಸ್ಥಾನವಿದೆ. ಸುಮಾರು ಐದು ದಶಕಗಳ ಕಾಲ ಅವರು ತಮ್ಮ ಕಥೆ, ಕಾದಂಬರಿ ಮತ್ತು ಇತರ ಪ್ರಕಾರಗಳಲ್ಲಿ ಕನ್ನಡ ಸಾಹಿತ್ಯ ಪ್ರಪಂಚಕ್ಕೆ ನೀಡಿದ ಕೊಡುಗೆ ಅಪಾರವಾದದ್ದು. ಉತ್ತರ ಕರ್ನಾಟಕದ, ಅದರಲ್ಲೂ ಬೆಳಗಾವಿಯ ಸುತ್ತಮುತ್ತಲಿನ ಜನಸಮುದಾಯದ ಬದುಕು ಮತ್ತು ಸಾಂಸ್ಕೃತಿಕ ಮಜಲುಗಳನ್ನು ಅವರು ತಮ್ಮ ಸೃಜನಶೀಲ ಬರವಣಿಗೆಯಲ್ಲಿ ಕಾಲಕಾಲಕ್ಕೂ ಪಡಿ ಮೂಡಿಸಿದ್ದಾರೆ. ಅವರ 'ತೇರು' ಕಾದಂಬರಿಗೆ 2005ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ದೊರೆತಿದೆ. ಹಾಗೆಯೇ ಅವರ 'ಮಾಯಿಯ ಮುಖಗಳು' (1998ರಲ್ಲಿ) ಎಂಬ ಕಥಾ ಸಂಕಲನಕ್ಕೆ ಹಾಗೂ 'ತೇರು' ಕಾದಂಬರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಪ್ರಶಸ್ತಿ ಲಭ್ಯವಾಗಿದೆ. 'ಒಡಪುಗಳು' (1978), 'ಪ್ರತಿಮೆಗಳು' (1982), 'ದೇಸಗತಿ' (1995), ಮಾಯಿಯ ಮುಖಗಳು (1998) ಅವರ ಕಥಾ ಸಂಕಲನಗಳು, ಬಾಳವ್ವನ ಕನಸುಗಳು (1984), 'ತೇರು' (2003), ಕಾದಂಬರಿಗಳು, ವಾಗ್ವಾದ (1993), ಆನಂದಕಂದ ವಿಮಾರ್ಶಾಕೃತಿಗಳು, 'ಅಜ್ಞಾತ ಮುಂಬಯಿ' ಪ್ರವಾಸ ಕಥನ (1991) ಹೀಗೆ ಅವರ ವಿಸ್ತೃತ ಸಾಹಿತ್ಯ ಕೃಷಿ ಸಾಗಿದೆ.

ಅವರಿಗೆ ಎಪ್ಪತ್ತೈದು ವರ್ಷ ತುಂಬಿದ ಸಂದರ್ಭದಲ್ಲಿ ಮತ್ತು ತಮ್ಮ 50 ವರ್ಷಗಳ ವೈವಾಹಿಕ ಜೀವನವನ್ನು ಪೂರೈಸಿದ ಸಂತಸದ ಸಂದರ್ಭದಲ್ಲಿ ಧಾರವಾಡದಲ್ಲಿ 28ನೇ ಮೇ 2026 ರಂದು ಅವರಿಗೆ ಅಭಿನಂದನಾ ಸಮಾರಂಭವನ್ನು ಆಯೋಜಿಸಲಾಗಿತ್ತು. ಕರ್ನಾಟಕ ಕುಲಪುರೋಹಿತ ಮಾನ್ಯ ಆಲೂರು ವೆಂಕಟರಾವ್ ಸಭಾ ಭವನದಲ್ಲಿ ಸರಳ ಮತ್ತು ಸುಂದರವಾಗಿ ಆಯೋಜಿಸಲ್ಪಟ್ಟ ಈ ಸಮಾರಂಭದಲ್ಲಿ ವೈಯಕ್ತಿಕವಾಗಿ ಮತ್ತು ದೆಹಲಿ ಕರ್ನಾಟಕ ಸಂಘದ ಪರವಾಗಿ ಭಾಗವಹಿಸುವ ಸೌಭಾಗ್ಯ ನನ್ನದಾಗಿತ್ತು. ಈ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘದ ಪರವಾಗಿ ಅವರನ್ನು ಶಾಲು ಮತ್ತು ಸಂಘದ ಲಾಂಛನದ ಕಾಣಿಕೆಯೊಂದಿಗೆ ವಿದ್ಯುಕ್ತವಾಗಿ ಗೌರವಿಸಿ, ದೆಹಲಿ ಕರ್ನಾಟಕ ಸಂಘದ ಪರವಾಗಿ ಅಭಿನಂದನೆಗಳನ್ನು ಸಲ್ಲಿಸಲಾಯಿತು.

ತಮ್ಮ ಅಭಿನಂದನಾ ಭಾಷಣದಲ್ಲಿ ಶ್ರೀ ರಾಘವೇಂದ್ರ ಪಾಟೀಲರು ದೆಹಲಿ ಕರ್ನಾಟಕ ಸಂಘದೊಂದಿಗೆ ಅವರಿಗಿದ್ದ ಹಲವಾರು ದಶಕಗಳ ಕಾಲದ ಸಂಬಂಧವನ್ನು ನೆನಪಿಸಿಕೊಂಡರು. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯನ್ನು ಸ್ವೀಕರಿಸಲು 2006ರಲ್ಲಿ ದೆಹಲಿ ಬಂದಿದ್ದಾಗ ಅವರು ನಮ್ಮ ಸಂಘದಲ್ಲೇ ಇಳಿದುಕೊಂಡಿದ್ದರು. ಆಗಿನ ನೆನಪು ಅವರಿಗೆ ಇನ್ನೂ ಹಸಿಯಾಗಿದೆ. ನಂತರದಲ್ಲಿ 2019ರ ಆಸುಪಾಸಿನಲ್ಲಿ ದೆಹಲಿಯಲ್ಲಿ ಸಂಘದೊಂದಿಗೆ ಕರ್ನಾಟಕ ಸರಕಾರದ ಡಾ. ಬೇಟಗೇರಿ ಕೃಷ್ಣಶರ್ಮರವರ ಟ್ರಸ್ಟ್ ವತಿಯಿಂದ ನಡೆದ ಎರಡು ದಿನಗಳ ಕಾರ್ಯಕ್ರಮದ ರೂವಾರಿ ಅವರೇ ಆಗಿದ್ದರು. ಡಾ. ಬೆಟಗೇರಿ ಕೃಷ್ಣ ಶರ್ಮ ಟ್ರಸ್ಟ್‌ನ ಅಧ್ಯಕ್ಷರಾಗಿ ಅವರ ಬರಹ ಮತ್ತು ಚಿಂತನೆಗಳನ್ನು ನಾಡಿನ ಮತ್ತು ಹೊರನಾಡಿನ ಕನ್ನಡಿಗರಿಗೆ ತಲುಪಿಸುವ ಗುರುತರ ಜವಾಬ್ದಾರಿ ಅವರದ್ದಾಗಿತ್ತು. ನಂತರದಲ್ಲಿ ಬಸವರಾಜ ಕಟ್ಟಿಮನಿ ಟ್ರಸ್ಟ್‌ನ ಕಾರ್ಯಕ್ರಮದಲ್ಲೂ ಅವರು ಸಂಪನ್ಮೂಲ ವ್ಯಕ್ತಿಯಾಗಿ, ಬೆಳಗಾವಿಯ ತಮ್ಮ ದಿನಗಳಲ್ಲಿ ಡಾ. ಕಟ್ಟಿಮನಿಯವರನ್ನು ಹತ್ತಿರದಿಂದ ನೋಡಿ ಬಲ್ಲವರಾಗಿದ್ದರು. ಈ ಎಲ್ಲ ಕಾರ್ಯಕ್ರಮಗಳಲ್ಲಿ ಧಾರವಾಡದಿಂದ ಡಾ. ಮಲ್ಲಿಕಾರ್ಜುನ ಹಿರೇಮಠ, ಡಾ. ಸಿದ್ದಲಿಂಗ ಪಟ್ಟಣಶೆಟ್ಟಿ, ಡಾ. ವೀಣಾ ಶಾಂತೇಶ್ವರ ಹಾಗೂ ಇನ್ನೂ ಹಲವು ಸಾಹಿತ್ಯ ದಿಗ್ಗಜರು ದೆಹಲಿ ಕರ್ನಾಟಕ ಸಂಘದ ಜೊತೆ ಆಯೋಜಿಸಿದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ನಂತರದಲ್ಲಿ ಶ್ರೀ ರಾಘವೇಂದ್ರ ಪಾಟೀಲರ ಈ ಅಭಿನಂದನಾ ಕಾರ್ಯಕ್ರಮವು ಸಹ ತುಂಬಾ ಅರ್ಥಪೂರ್ಣ ರೀತಿಯಲ್ಲೇ ನಡೆಯಿತು. ಉದ್ಘಾಟನಾ ಸಮಾರಂಭವು ಪರಮಪೂಜ್ಯ ಶ್ರೀ ಡಾ. ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮಿಗಳವರ ದಿವ್ಯ ಸಾನಿಧ್ಯದಲ್ಲಿ ನಡೆಯಿತು. ಮಹಾಸ್ವಾಮಿಗಳು ಚಿತ್ರದುರ್ಗದ ಮಾದಾರ ಚೆನ್ನಯ್ಯ ಗುರುಪೀಠವನ್ನು ಅಲಂಕರಿಸಿದ್ದಲ್ಲದೆ, ಈಗ ಮಲ್ಲಾಡಿಹಳ್ಳೀಯ ಅನಾಥ ಸೇವಾಶ್ರಮದ ಅಧ್ಯಕ್ಷರೂ ಆಗಿದ್ದಾರೆ. ರಾಘವೇಂದ್ರ ಪಾಟೀಲರು ಮಲ್ಲಾಡಿಹಳ್ಳಿಯ ಅನಾಥ ಸೇವಾಶ್ರಮದ ಪದವಿಪೂರ್ವ ಕಾಲೇಜಿನಲ್ಲಿ ಉಪನ್ಯಾಸಕರಾಗಿ, 2003ರಿಂದ ಅದರ ಆಡಳಿತಾಧಿಕಾರಿಯಾಗಿ, ನಂತರ 2011ರವರೆಗೆ ಕಾಲೇಜಿನ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿ ನಿವೃತ್ತರಾದ ನಂತರ ಧಾರವಾಡದಲ್ಲಿ ನೆಲೆಸಿದ್ದನ್ನು ನಮೂದಿಸಬೇಕು. ತಮ್ಮ ಜೀವನದ ಬಹುಪಾಲು ಭಾಗವನ್ನು ಮಲ್ಲಾಡಿಹಳ್ಳಿಯ ಅನಾಥ ಸೇವಾಶ್ರಮದ ಕಾಲೇಜಿನಲ್ಲಿ ಕಳೆದಿದ್ದಲ್ಲದೆ ಅದರ ಉಸ್ತುವಾರಿಯನ್ನು ಜವಾಬ್ದಾರಿಯುತವಾಗಿ ನಿರ್ವಹಿಸಿದ್ದನ್ನು, ಡಾ. ಬಸವಮೂರ್ತಿ ಸ್ವಾಮಿಗಳವರು ನೆನೆಸಿಕೊಂಡರು. ಮಲ್ಲಾಡಿಹಳ್ಳಿಯ ರಾಘವೇಂದ್ರ ಸ್ವಾಮೀಜಿಯವರ ನಿಧನದ ನಂತರ ಅನಾಥಾಶ್ರಮದ ಆಡಳಿತದ ಚುಕ್ಕಾಣಿ ಹಿಡಿದು ಅದನ್ನು ಜವಾಬ್ದಾರಿಯುತ ವಿಶ್ವಸ್ತ ಮಂಡಳಿಗೆ ವರ್ಗಾಯಿಸುವ ಕೆಲಸವನ್ನು ಪಾಟೀಲರು ಮಾಡಿದ್ದನ್ನು ಮಹಾಸ್ವಾಮಿಗಳು ನೆನಪಿಸಿಕೊಂಡರು. ಖ್ಯಾತ ವಿಮರ್ಶಕ ಡಾ. ಎಂ.ಜಿ. ಹೆಗಡೆಯವರು ರಾಘವೇಂದ್ರ ಪಾಟೀಲರ ಕಥಾಜಗತ್ತಿನ ಪರಿಚಯ ಮಾಡಿಕೊಟ್ಟರು. ಅವರ ಕಥೆ ಮತ್ತು ಕಾದಂಬರಿಗಳ ಆಶಯಗಳನ್ನು ಬಿಚ್ಚಿಟ್ಟರು. ಡಾ. ಸಿದ್ದಲಿಂಗ ಪಟ್ಟಣಶೆಟ್ಟಿವಯರು ಉದ್ಘಾಟನಾ ಭಾಷಣದಲ್ಲಿ ಪಾಟೀಲರ ಭಾಷೆ ಮತ್ತು ಬದುಕುಗಳ ಕುರಿತಾಗಿ ಮಾತನಾಡಿದರು. ಖ್ಯಾತ ಪತ್ರಕರ್ತ ಮತ್ತು ಕಾದಂಬರಿಕಾರ ಜೋಗಿಯವರು ಪಾಟೀಲರ ಆಯ್ದ ಕಥೆಗಳ ಸಂಕಲನ 'ಬೆಳ್ಳಕ್ಕಿಗಳ ಲೋಕದಲ್ಲಿ' ಬಿಡುಗಡೆ ಮಾಡಿ ಮಾತನಾಡಿದರು. ಪ್ರೊ. ದುಷ್ಯಂತ ನಾಡಗೌಡ, ಗೌರವಾಧ್ಯಕ್ಷರು, ರಾಘವೇಂದ್ರ ಪಾಟೀಲ ಅಭಿನಂದನಾ ಸಮಿತಿ, ಅದರ ಇನ್ನೊಬ್ಬ ಗೌರವಾಧ್ಯಕ್ಷರಾದ ಶ್ರೀ ಹರ್ಷ ಡಂಬಳರವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಆಯೋಜನೆಯಲ್ಲಿ ಗುರುತರ ಕಾರ್ಯ ನಿರ್ವಹಿಸಿದ ಮನೋಹರ ಗ್ರಂಥಮಾಲೆಯ ಸಮೀರ ಜೋಶಿಯವರೂ ಸಹ ಉಪಸ್ಥಿತರಿದ್ದರು. ದೆಹಲಿ ಕರ್ನಾಟಕ ಸಂಘದೊಂದಿಗೆ ಮನೋಹರ ಗ್ರಂಥಮಾಲೆಯ ದಿ. ರಮಾಕಾಂತ ಜೋಶಿಯವರ ಅನನ್ಯ ಸಂಬಂಧಗಳ ನೆನಪಿನ ಚಿತ್ರಗಳನ್ನು ನಾನು ಸಮೀರ ಜೋಶಿಯವರೊಂದಿಗೆ ಹಂಚಿಕೊಂಡೆ.



ನಂತರದಲ್ಲಿ ನಡೆದ ರಾಘವೇಂದ್ರ ಪಾಟೀಲರ ಸಾಹಿತ್ಯ ಮತ್ತು ವಿಮರ್ಶೆಯ ಕುರಿತಾದ ವಿಚಾರ ಸಂಕಿರಣದಲ್ಲಿ ಡಾ. ವಿನಯಾ ವಕ್ಕುಂದ ಮತ್ತು ಡಾ. ನಾ. ದಾಮೋದರ ಶೆಟ್ಟಿಯವರು ಮಾತನಾಡಿದರು. ವಿಚಾರ ಸಂಕಿರಣದ ನಂತರದಲ್ಲಿ ರಾಘವೇಂದ್ರ ಪಾಟೀಲ ಕಥಾ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಿತು. ತೀರ್ಥಹಳ್ಳಿಯ ಶ್ರೀ ವಿನಾಯಕ ಅರಳಸುರಳಿಯರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಡಾ. ತೇಜಸ್ವಿ ಕಟ್ಟಿಮನಿಯವರು ಪ್ರಶಸ್ತಿ ಪ್ರದಾನ ಮಾಡಿ ಮಾತಾನಾಡಿದರು. ಡಾ. ಕಟ್ಟಿಮನಿಯವರು ಸಹ ದೆಹಲಿ ಕರ್ನಾಟಕ ಸಂಘದೊಂದಿಗೆ ನಿಕಟ ಸಂಬಂಧವನ್ನು ಹೊಂದಿದ್ದರು. ಅವರು ಮಧ್ಯಪ್ರದೇಶದ ಅಮರಕಂಟಕದಲ್ಲಿ ಇಂದಿರಾ ಗಾಂಧಿ ರಾಷ್ಟ್ರೀಯ ಆದಿವಾಸಿ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿದ್ದಾಗ ದೆಹಲಿ ಕರ್ನಾಟಕ ಸಂಘದ ಕಾರ್ಯಕ್ರಮಗಳಲ್ಲಿ ಅವರು ಪಾಲ್ಗೊಂಡಿದ್ದನ್ನು ನೆನಪಿಸಿಕೊಂಡೆವು. ನಂತರದಲ್ಲಿ ಅವರ ಆಂಧ್ರಪ್ರದೇಶದ ಕೇಂದ್ರಿಯ ಆದಿವಾಸಿ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ ನಿವೃತ್ತಿ ಹೊಂದಿ ಈಗ ಧಾರವಾಡದಲ್ಲಿ ನೆಲೆಸಿದ್ದಾರೆ.

ಶ್ರೀ ರಾಘವೇಂದ್ರ ಪಾಟೀಲರ ಅಭಿನಂದನಾ ಸಮಾರಂಭದ ಸಮಾರೋಪದಲ್ಲಿ ಖ್ಯಾತ ವಿಮರ್ಶಕ ಡಾ. ನರಹಳ್ಳಿ ಬಾಲಸುಬ್ರಮಣ್ಯನವರು ತಮ್ಮ ಮತ್ತು ಪಾಟೀಲರ ಸಾಹಿತ್ಯ ಮತ್ತು ಸಂವಾದಗಳ ಕುರಿತಾಗಿ ಮಾತನಾಡಿದರು. ಮುಖ್ಯವಾಗಿ ಈ ಕಾಲಘಟ್ಟದಲ್ಲಿ ಬರವಣಿಗೆಯಲ್ಲಿ, ಅದರಲ್ಲೂ ಸೃಜನಶೀಲ ಬರವಣಿಗೆಯಲ್ಲಿ ತೊಡಗಿಸಿಕೊಳ್ಳುವುದರ ಕುರಿತಾದ ಸವಾಲುಗಳ ಕುರಿತಾಗಿ ಮಾತನಾಡಿದರು. ಖ್ಯಾತ ಚಿಂತಕ ಮತ್ತು ವಿದ್ವಾಂಸರಾದ ಡಾ. ಶ್ರೀರಾಮ ಭಟ್ಟರು ಪಾಟೀಲರ ಸೃಜನಶೀಲ ಬರವಣಿಗೆಯ ಕಥಾನಕ ವಸ್ತುಗಳ ವಿಶ್ಲೇಷಣೆ ಮಾಡಿದರು.

ಕೊನೆಯಲ್ಲಿ ಮಾತನಾಡಿದ ಶ್ರೀ ರಾಘವೇಂದ್ರ ಪಾಟೀಲರು ತಮ್ಮ ಬದುಕು–ಬರಹಗಳ ಕಳೆದ ಐದು ದಶಕಗಳ ಮುಖಾಮುಖಿಯನ್ನು ಬಿಚ್ಚಿಟ್ಟರು. ಈ ತಮ್ಮ ಪಯಣದಲ್ಲಿ ಮೊದಲಿನಿಂದಲೂ ಜೊತೆಗಿದ್ದ ದಿ. ಡಾ. ಎಚ್.ಎಸ್. ವೆಂಕಟೇಶ್ ಮೂರ್ತಿಯವರನ್ನು ನೆನಸಿಕೊಂಡರು. ಹಾಗೆಯೇ ತಮ್ಮ ಬಾಳಸಂಗಾತಿಯೊಂದಿಗೆ ಐದು ದಶಕಗಳ ಸುಮಧುರ ಪಯಣದ ಪರಿಯನ್ನು ನೆನೆಸಿಕೊಂಡು, ತಮ್ಮ ಮನೆಯವರಿಗೆಲ್ಲರಿಗೂ, ಬಂದ ಸ್ನೇಹಿತರಿಗೆಲ್ಲರಿಗೂ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸಿದರು. ದೆಹಲಿಯಿಂದ ಬಂದ ವೆಂಕಟಾಚಲ ಹೆಗಡೆಯವರಿಗೆ, ದೆಹಲಿ ಕರ್ನಾಟಕ ಸಂಘಕ್ಕೂ ತಮ್ಮ ಅಭಾರವನ್ನು ಸಲ್ಲಿಸಿದರು.

ಕೊನೆಯಲ್ಲಿ ಖ್ಯಾತ ಕತೆಗಾರ್ತಿ ಮತ್ತು ಲೇಖಕಿ ಡಾ. ವೀಣಾ ಶಾಂತೇಶ್ವರವರು ಸಮಾರೋಪ ಭಾಷಣ ಮಾಡಿದರು. ನಂತರದಲ್ಲಿ ಡಾ. ವೀಣಾ ಶಾಂತೇಶ್ವರವರೊಂದಿಗೆ ಮಾತನಾಡುತ್ತ ಅವರು ದೆಹಲಿ ಕರ್ನಾಟಕ ಸಂಘಕ್ಕೆ ಬಂದ ಕ್ಷಣಗಳನ್ನು ನೆನಪಿಸಿಕೊಂಡರು. ಒಟ್ಟಾರೆ, ಒಂದು ದಿನದ ಈ ಧಾರವಾಡದ ಕಾರ್ಯಕ್ರಮ ಅಲ್ಲಿಯ ಸಾಂಸ್ಕೃತಿಕ ಮತ್ತು ಸಾಹಿತ್ಯಕ ಅಂತರಾಳದಲ್ಲಿ ಅಡಗಿರುವ ಉತ್ಸಾಹ ಮತ್ತು ಉನ್ಮಾದತೆಯ ಪರಿಚಯವನ್ನು ಮಾಡಿಕೊಟ್ಟಿತು. ❑



**"ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರು ಹಾಗೂ ಕೇಂದ್ರ ಜಲ ಆಯೋಗದ (CWC) ನಿರ್ದೇಶಕರಾದ ಶ್ರೀ ಅಶೋಕ್ ಕುಮಾರ್ ವಿ. ಅವರು ಇತ್ತೀಚೆಗೆ ಸಂಘಕ್ಕೆ ಭೇಟಿ ನೀಡಿದರು. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ರೇಣುಕುಮಾರ್ ಆರ್., ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರು ಹಾಗು ನಿಕಟಪೂರ್ವ ಕಾರ್ಯಕಾರಿ ಸಮಿತಿ ಸದಸ್ಯರಾಗಿದ್ದ ಶ್ರೀ ಕೆ.ಎಸ್ ಮೂರ್ತಿ ಅವರು ಉಪಸ್ಥಿತರಿದ್ದು, ಶ್ರೀ ಅಶೋಕ್ ಕುಮಾರ್ ಅವರನ್ನು ಆತ್ಮೀಯವಾಗಿ ಸ್ವಾಗತಿಸಿ ಸಂಘದ ಮುಂದಿನ ಕಾರ್ಯ ಚಟುವಟಿಕೆಗಳ ಬಗ್ಗೆ ಚರ್ಚಿಸಿದರು."**

## ಆರ್.ಸಿ.ಬಿ ಮತ್ತು ಗುಜರಾತ್ ಟೈಟಾನ್ಸ್ ನಡುವಿನ ಐಪಿಎಲ್ ಫೈನಲ್ ಪಂದ್ಯಕ್ಕೆ ಸಾಕ್ಷಿಯಾದ ದೆಹಲಿ ಕರ್ನಾಟಕ ಸಂಘದ ದೊಡ್ಡ ಪರದೆ



ಭಾರತದಲ್ಲಿ ಕ್ರಿಕೆಟ್ ಕ್ರೀಡೆ ಒಂದು ಸಂಸ್ಕೃತಿಯಾಗಿ ವ್ಯಾಪಾರ್ಡಾಗಿದೆ. 1983ರ ವಿಶ್ವಕಪ್ ಮೊಟ್ಟಮೊದಲ ಬಾರಿಗೆ ಕಪಿಲ್‌ದೇವ್ ಅವರ ನಾಯಕತ್ವದ ಪಡೆ ವಿಶ್ವಕಪ್ ಗೆದ್ದು ವಿಶ್ವ ಚಾಂಪಿಯನ್ನರಾಗಿ ಲಾರ್ಡ್ಸ್ ಮೈದಾನದಲ್ಲಿ ಕಪ್ ಎತ್ತಿದಾಗ ಭಾರತದಲ್ಲಿ ಕ್ರಿಕೆಟ್ ಕ್ರೀಡೆಗೆ ಒಲವು ಗರಿಗೆದರಿತು. ಆ ನಂತರ ಸಚಿನ್ ತೆಂಡೂಲ್ಕರ್ ಕ್ರಿಕೆಟ್‌ನ ಆರಾಧ್ಯ ದೈವವಾಗಿ ಕಂಡರು. ಏಕದಿನ ಮತ್ತು ಟೆಸ್ಟ್ ಪಂದ್ಯಕ್ಕೂ ಬಿನ್ನವಾದ ಚುಟುಕು ಟಿ–20 ಕ್ರಿಕೆಟ್ ಈಗ ಉತ್ಸವವಾಗಿ ಹೊರಹೊಮ್ಮಿದೆ.

2026ರ ಐಪಿಎಲ್ ಫೈನಲ್ ಪಂದ್ಯ ಮೇ 31ರಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಗುಜರಾತ್ ಟೈಟಾನ್ಸ್ ನಡುವೆ ಗುಜರಾತ್‌ನ ನರೇಂದ್ರ ಮೋದಿ ಮೈದಾನದಲ್ಲಿ ನಡೆಯಿತು. ಈ ನಿಟ್ಟಿನಲ್ಲಿ ನಮ್ಮ ಬೆಂಗಳೂರು ತಂಡದ ಮ್ಯಾಚ್ ವೀಕ್ಷಿಸಲು ದೆಹಲಿ ಕರ್ನಾಟಕ ಸಂಘ ಸಭಾಂಗಣದ ದೊಡ್ಡ ಪರದೆಯ ಮೇಲೆ ವ್ಯವಸ್ಥೆ ಮಾಡಿತ್ತು. ಕ್ರಿಕೆಟ್ ಪ್ರೇಮಿಗಳು, ಪುರುಷರು, ಮಹಿಳೆಯರು ಮತ್ತು ಮಕ್ಕಳ ಸಮೇತ ಪಂದ್ಯ ವೀಕ್ಷಿಸುತ್ತಾ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು ಬೆಂಬಲಿಸಿ ಈ ಬಾರಿಯೂ ಬೆಂಗಳೂರು ತಂಡದ ವಿಜಯೋತ್ಸವ ಆಚರಿಸಿದರು.

ಶ್ರೀ ಅನಂತರಾಮ ಅರಳಿ, ದೆಹಲಿ ಕನ್ನಡ ಶಾಲೆಯ ಪ್ರಾಂಶುಪಾಲರಾದ ಶ್ರೀ ಪ್ರಶಾಂತ ಕುಮಾರ್, ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ಮಾಜಿ ಸದಸ್ಯರಾದ ಶ್ರೀ ಕೆ.ಎಸ್. ಮೂರ್ತಿ, ಸ್ಟಾರ್ಟ್–ಅಪ್ ಸನಾತನದ ಗುರೂಜಿ, ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಆರ್. ರೇಣುಕುಮಾರ್, ಪ್ರಧಾನ ಕಾರ್ಯದರ್ಶಿ ಶ್ರೀ ರಾಧಾಕೃಷ್ಣ, ಜಂಟಿ ಕಾರ್ಯದರ್ಶಿ ಶ್ರೀ ಸಂತೋಷ ಜೆ., ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಶಿವಪ್ಪ ಎಂ., ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಖಜಾಂಚಿ ಶ್ರೀ ಕಾಶೀನಾಥ ಬಿರಾದಾರ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿ ಸದಸ್ಯರಾದ ಶ್ರೀ ಸಂತೋಷ ಕೆ.ಕೆ ಮತ್ತು ಅವರ ಕುಟುಂಬ, ಶ್ರೀ ಹರಿಪ್ರಿಯ ಎಸ್., ಶ್ರೀ ಎಸ್.ಡಿ. ಶ್ರೀನಿವಾಸ ಮತ್ತು ಇನ್ನೂ ಅನೇಕರು ಈ ಪಂದ್ಯವನ್ನು ದೆಹಲಿ ಕರ್ನಾಕದ ಸಭಾಂಗಣದಲ್ಲಿ ವೀಕ್ಷಿಸಿ ಕಣ್ತುಂಬಿಕೊಂಡರು.❑

# ಪ್ರವಾಸ ಮತ್ತು ಸಾಹಸ ಕ್ಲಬ್, ಕ್ರೌನ್ ಮತ್ತು ಕನ್ವತಾಲ್‌ನ ತಿರುವುಗಳು

25 ಮಹಿಳೆಯರು, ಅವರ ರಾಯಲ್ ಎನ್‌ಫೀಲ್ಡ್‌ಗಳು ಮತ್ತು ಉತ್ತರಾಖಂಡದ ಪರ್ವತಗಳು ಒಂದಾದಾಗ ಏನಾಗುತ್ತದೆ? ಶುದ್ಧ, ಅಲಿಖಿತ ಮಾಯಾಜಾಲ ಸೃಷ್ಟಿಯಾಗುತ್ತದೆ.

ಪರ್ವತದ ರಸ್ತೆಗಳು ಮಾತ್ರ ನೀಡಬಲ್ಲ ಒಂದು ವಿಶಿಷ್ಟವಾದ ಸ್ವಾತಂತ್ರ್ಯವಿದೆ. ಇದು ಮುಕ್ತ ಆಕಾಶ ಅಥವಾ ಖಾಲಿ ಹೆದ್ದಾರಿಗಳ ಸ್ವಾತಂತ್ರ್ಯವಲ್ಲ – ಇದು ಅದಕ್ಕಿಂತಲೂ ಪ್ರಾಮಾಣಿಕವಾದದ್ದು. ಎತ್ತರದ ಪ್ರದೇಶದ ಕುರುಡು ತಿರುವುಗಳಲ್ಲಿ ವಾಹನವನ್ನು, ಪೈನ್ ಮರಗಳು ಮಸುಕಾಗುತ್ತಿರುವಾಗ, ಗಾಳಿಯು ತಂಪಾದಾಗ ಮತ್ತು ಒಂದು ಕ್ಷಣ ನಿಮ್ಮ ಇಡೀ ಜಗತ್ತು ಕೇವಲ ಮುಂದಿರುವ ರಸ್ತೆಯಾದಾಗ ಸಿಗುವ ಸ್ವಾತಂತ್ರ್ಯವಿದು. ಕಳೆದ ಎರಡು ವರ್ಷಗಳಿಂದ ನಾಲ್ಕು ಪರ್ವತ ಪ್ರವಾಸಗಳ ಮೂಲಕ ನಾನು ಆ ಅನುಭವವನ್ನು ಬೆನ್ನಟ್ಟುತ್ತಿದ್ದೇನೆ. ಆದರೆ ಈ ಬಾರಿ ಕನ್ವತಾಲ್ ಪ್ರವಾಸ ವಿಭಿನ್ನವಾಗಿತ್ತು. ಏಕೆಂದರೆ ಈ ಬಾರಿ ಕನ್ವತಾಲ್‌ನಲ್ಲಿ 25 ಮಹಿಳೆಯರಿದ್ದೆವು.

ವೃತ್ತಿಯಲ್ಲಿ ನಾನು ವಕೀಲೆ, ಆದರೆ ಹೃದಯದಿಂದ ನಾನು ಒಬ್ಬ ಬೈಕರ್. ಈ ಎರಡೂ ವ್ಯಕ್ತಿತ್ವಗಳು ನನ್ನೊಳಗೆ ಆರಾಮವಾಗಿವೆ. ನ್ಯಾಯಾಲಯ ಮತ್ತು ಪರ್ವತದ ರಸ್ತೆಗಳು ನಿಮ್ಮಿಂದ ವಿಭಿನ್ನವಾದದ್ದನ್ನು ಬಯಸುತ್ತವೆ. ಒಂದು ನಿಖರತೆ ಮತ್ತು ಭಾಷೆಯನ್ನು ಕೇಳಿದರೆ, ಇನ್ನೊಂದು ಎರಡನ್ನೂ ಬಿಟ್ಟುಬಿಡಲು ಕೇಳುತ್ತದೆ. ಈ ರೀತಿ ಎಲ್ಲವನ್ನೂ ಮರೆತು ಮುಂದೆ ಸಾಗಲು ಕಾರಣ ನನ್ನ ಸಂಗಾತಿ 'ಗಾಬ್ಲಿನ್' (GOBLIN)-ಇದು ಫಾರೆಸ್ಟ್ ಗ್ರೀನ್ ಬಣ್ಣದ ರಾಯಲ್ ಎನ್‌ಫೀಲ್ಡ್ ಹಂಟರ್ 350 ಸಿಸಿ ಬೈಕ್. ಒಂದು ಕಿಲೋ ಮೀಟರ್ ಓಡಿಸುವ ಮೊದಲೇ ನಾನು ಇದಕ್ಕೆ ಹೆಸರಿಟ್ಟಿದ್ದೆ, ಏಕೆಂದರೆ ಕೆಲವು ವಿಷಯಗಳು ನಮಗೆ ಮೊದಲೇ ತಿಳಿದಿರುತ್ತವೆ.

**ಮುಂಜಾನೆಗೂ ಮುನ್ನ: ಸಾಧ್ಯತೆಗಳಿಂದ ತುಂಬಿದ ಚೀಲ**

ನಮ್ಮ ಪ್ರವಾಸವು ಮೇ 8 ರಿಂದ 10 ರವರೆಗೆ –ಶುಕ್ರವಾರದಿಂದ ಭಾನುವಾರದವರೆಗೆ ಮೂರು ದಿನಗಳ ಕಾಲ ನಡೆಯಿತು. ಮುಂಜಾನೆ 3:30 ರ ಹೊತ್ತಿಗೆ ನಾನು ಬಟ್ಟೆಗಳು, ತಿಂಡಿಗಳು ಮತ್ತು ಹೊಸ ನೆನಪುಗಳಿಗಾಗಿಯೇ ಮೀಸಲಿಟ್ಟ ಒಂದು ಖಾಲಿ ಚೀಲದೊಂದಿಗೆ ಸಿದ್ಧವಾಗಿದ್ದೆ. ಆದರೆ ಆ ಚೀಲದಲ್ಲಿ ಏನೆಲ್ಲಾ ತುಂಬಬಹುದು ಎಂದು ನಿಮಗೆ ಎಂದಿಗೂ ತಿಳಿದಿರುವುದಿಲ್ಲ.

ನಾವೆಲ್ಲರೂ ನಮ್ಮ ರಾಯಲ್ ಎನ್‌ಫೀಲ್ಡ್‌ಗಳೊಂದಿಗೆ ಗಾಜಿಯಾಬಾದ್‌ನ ಒಂದು ಸ್ಥಳದಲ್ಲಿ ಒಟ್ಟುಗೂಡಿದೆವು.

ಬೆಳಿಗ್ಗೆ 4:30 ರ ಹೊತ್ತಿಗೆ, ನಾವು 25 ಮಂದಿ ಇನ್ನೂ ಕತ್ತಲೆಯಾದ ಆಕಾಶದ ಕೆಳಗೆ ಒಟ್ಟುಗೂಡಿದೆವು. ನಮ್ಮ ಸರಕುಗಳು ಮತ್ತು ಹೆಸರಿನ ಟ್ಯಾಗ್‌ಗಳನ್ನು ಸಂಗ್ರಹಿಸಿದೆವು. ಅಪರಿಚಿತರಾಗಿದ್ದರೂ ಸಹ ಒಬ್ಬರನ್ನೊಬ್ಬರು ಪರಿಚಯಿಸಿಕೊಳ್ಳಲು ಪ್ರಯತ್ನಿಸಿದೆವು.



**ಕ್ಲಚ್ ಮತ್ತು ಕ್ರೌನ್: ದ್ವಿಚಕ್ರದ ಜೊತೆ ಬಾಂಧವ್ಯ**

ರಾಯಲ್ ಎನ್‌ಫೀಲ್ಡ್‌ನ ಕ್ಲಚ್ ಮತ್ತು ಕ್ರೌನ್ ಉಪಕ್ರಮವು ಕೇವಲ ಸವಾರಿಯಲ್ಲ–ಇದು ಉದ್ದೇಶಪೂರ್ವಕ, ಮಹಿಳೆಯರನ್ನು ಒಟ್ಟುಗೂಡಿಸುವಿಕೆಯ ಕ್ರಿಯೆಯಾಗಿದೆ. ಈ ಬಾರಿ, ಇದು 19 ರಿಂದ 63 ವರ್ಷ ವಯಸ್ಸಿನ 25 ಮಹಿಳೆಯರನ್ನು ಒಟ್ಟುಗೂಡಿಸಿತು, ಪ್ರತಿಯೊಬ್ಬರೂ ತಮ್ಮದೇ ಆದ ಕಥೆಯನ್ನು, ಅಲ್ಲಿಗೆ ಹೋಗಲು ತಮ್ಮದೇ ಆದ ಕಾರಣಗಳನ್ನು ಮತ್ತು ತಮ್ಮ ಅಡಿಯಲ್ಲಿರುವ ಯಂತ್ರದೊಂದಿಗಿನ ತಮ್ಮದೇ ಆದ ಸಂಬಂಧವನ್ನು ಹೊತ್ತಿದ್ದರು. ಕೆಲವರಿಗೆ ಇದು ಮೊದಲ ಪ್ರವಾಸ, ಇನ್ನು ಕೆಲವರಿಗೆ ಮೊದಲ ಪರ್ವತ ಪ್ರಯಾಣವಾಗಿತ್ತು.

ನನಗೆ 29 ವರ್ಷ, ಮತ್ತು ನಾನು ಎರಡು ವರ್ಷಗಳಿಂದ ಬೈಕ್ ಸವಾರಿ ಮಾಡುತ್ತಿದ್ದೇನೆ. ಇದು ಪರ್ವತಗಳಿಗೆ ನನ್ನ ನಾಲ್ಕನೇ ಪ್ರವಾಸವಾಗಿತ್ತು – ಆದರೆ ಮೊದಲ ಬಾರಿಗೆ ನಾನು ಸಂಪೂರ್ಣವಾಗಿ ಮಹಿಳೆಯರಿಂದ ಸುತ್ತುವರೆದ ಪ್ರಯಾಣವನ್ನು ಮಾಡಿದೆ. ಅದು ಏನನ್ನಾದರೂ ಬದಲಾಯಿಸುತ್ತದೆ. ಸಂಭಾಷಣೆಗಳು ಬದಲಾಗುತ್ತವೆ. ಮೌನಗಳು ವಿಭಿನ್ನವಾಗಿ ಭಾಸವಾಗುತ್ತವೆ. ಕಡಿಮೆ ಪ್ರದರ್ಶನ ಮತ್ತು ಹೆಚ್ಚಿನ ಉಪಸ್ಥಿತಿ ಇರುತ್ತದೆ.

ಸರಿಯಾಗಿ 5 ಗಂಟೆಗೆ ನಮ್ಮ ಎಲ್ಲಾ ಬೈಕ್‌ಗಳು ಬೆಳಗಿನ ಜಾವದಲ್ಲಿ ಜೀವ ತುಂಬಿ ಇಡೀ ಬೀದಿಯನ್ನು ಎಚ್ಚರಗೊಳಿಸುವ ರೀತಿಯಲ್ಲಿ ಘರ್ಜಿಸುತ್ತಿದ್ದವು. ಉತ್ಸಾಹಭರಿತ, ಸಾಮೂಹಿಕ ಹುರ್ರೇಗಳಲ್ಲಿ ಬ್ರೀಫಿಂಗ್ ಅವಧಿಯು ಕೊನೆಗೊಂಡಿತು ನಂತರ ತಕ್ಷಣ ನನಗೆ ಹೊಳೆಯಿತು: ಮಾರ್ಷಲ್‌ಗಳು, ಲೀಡ್‌ಗಳು–ಎಲ್ಲರೂ ಮಹಿಳೆಯರು. ಇಡೀ ಪ್ರಯಾಣದುದ್ದಕ್ಕೂ ನಮ್ಮೊಂದಿಗೆ ಸೇರಿಕೊಂಡಿದ್ದ ಮತ್ತು ಪ್ರತಿ ಮೈಲಿ ದೂರದಲ್ಲಿ ನಮ್ಮನ್ನು ಕ್ಯಾಮೆರಾದಲ್ಲಿ ಸೆರೆಹಿಡಿದ ರಾಯಲ್ ಎನ್‌ಫೀಲ್ಡ್ ಕಂಟೆಂಟ್ ತಂಡವು ಸಹ ಅದೇ ಶಕ್ತಿಯ ಭಾಗವಾಗಿತ್ತು. ಇದು ಮಹಿಳೆಯರನ್ನು ಒಳಗೊಂಡ ಪ್ರವಾಸವಾಗಿರಲಿಲ್ಲ. ಬದಲಾಗಿ ಮಹಿಳೆಯರೇ ರೂಪಿಸಿದ ಪ್ರವಾಸವಾಗಿತ್ತು.

**ರಸ್ತೆಗಳು ಅನುಮತಿ ಕೇಳುವುದಿಲ್ಲ**

ಗಾಜಿಯಾಬಾದ್‌ನ ಟ್ರಾಫಿಕ್‌ನಿಂದ ಹರಿದ್ವಾರದ ಆಧ್ಯಾತ್ಮಿಕ ಪರಿಸರ, ಸಾಹಸಮಯ ರಿಷಿಕೇಶದ ಘಾಟ್‌ಗಳು, ಚಂಬಾ ಮೂಲಕ ಸಾಗಿ ಅಂತಿಮವಾಗಿ ಕನ್ವತಾಲ್‌ನ ತಂಪಾದ ಪೈನ್ ಮರಗಳ ಮಡಿಲು ಸೇರಿದೆವು. ಕನ್ವತಾಲ್‌ನ ರಸ್ತೆಗಳು ಕ್ಷಮಿಸುವುದಿಲ್ಲ, ಆದರೆ ಅವು ಅದ್ಭುತವಾಗಿವೆ. ಪ್ರತಿ ತಿರುವು ಒಂದು ಹೊಸ ದೃಶ್ಯವನ್ನು ತೆರೆದಿಡುತ್ತದೆ, ಇದ್ದಕ್ಕಿದ್ದಂತೆ ರೂಪಾಂತರ ಸಂಭವಿಸುತ್ತದೆ–ಒಂದು ಕ್ಷಣ, ನೀವು ಟ್ರಕ್ ಅನ್ನು ತಪ್ಪಿಸುತ್ತಿದ್ದೀರಿ; ಮುಂದಿನ ಕ್ಷಣ, ಮುಂದೆ ಪರ್ವತ ಮತ್ತು ಆಕಾಶವನ್ನು ಹೊರತುಪಡಿಸಿ ಬೇರೇನೂ ಇಲ್ಲ.

ಕನ್ವತಾಲ್‌ಗೆ ಹೋಗುವ ರಸ್ತೆಗಳು ನಿಸ್ಸಂದೇಹವಾಗಿ ಅದ್ಭುತವಾಗಿವೆ. ಪ್ರತಿಯೊಂದು ತಿರುವು ಒಂದು ರಹಸ್ಯಮಯ–ಬೆಟ್ಟದ ಇಳಿಜಾರಿನಲ್ಲಿ ಬೀಳುವ ನೀಲಿ ಹೂವುಗಳು, ಬಿಳಿ ಆಕಾಶಕ್ಕೆ ಕಾವಲುಗಾರನಾಗಿ ನಿಂತಿರುವ ಪೈನ್ ಮರಗಳು, ಮತ್ತು ನಯನ ಮನೋಹರ, ಸುಂದರವಾದ ಪರ್ವತಗಳು. ನಾವು ಬೆಟ್ಟದ ರಸ್ತೆಗಳಲ್ಲಿ ಸೌಂದರ್ಯದ ವಿಸ್ಮಯದಿಂದ ನಮ್ಮ ಪ್ರಯಾಣವನ್ನು ಮುಂದುವರಿಸಿದೆವು.

ಪ್ರಯಾಣದ ಸಮಯದಲ್ಲಿ ನಾನು ಎರಡು ಬಾರಿ ಬೈಕ್‌ನಿಂದ ಕೆಳಗೆ ಬಿದ್ದೆ. ಮೊದಲ ಬಾರಿ ಅನಿರೀಕ್ಷಿತವಾಗಿ ಬಂದ ಕಾರಿನಿಂದಾಗಿ ಹಿಡಿತ ತಪ್ಪಿ ಬಿದ್ದೆ. ಎರಡನೇ ಬಾರಿ ಅಸಮತೋಲಿತ ನೆಲದ ಮೇಲೆ ನನ್ನ ತಪ್ಪಿನಿಂದಾಗಿ ಬಿದ್ದೆ. ಕೆಲವು ಗಾಯಗಳಾದವು, ಆದರೆ ಅವುಗಳು ಒಂದು

ಅನುಭವದ ಗುರುತಿನಂತೆ ಕಂಡವು. ನನ್ನ ಬೈಕ್‌ನ ಕ್ಲಚ್ ಮತ್ತು ಬ್ರೇಕ್ ಅನ್ನು ನಾನೇ ಸ್ವತಃ ಸರಿಪಡಿಸಿಕೊಂಡೆ. ವಕೀಲೆಯಾಗಿ ನಾನು ಮಾತಿನ ಮೂಲಕ ಸಮಸ್ಯೆ ಬಗೆಹರಿಸುತ್ತೇನೆ, ಆದರೆ ಅಂದು ಉಪಕರಣಗಳ ಮೂಲಕ ಬಗೆಹರಿಸಿದೆ. ನಿಮ್ಮ ವಾಹನವನ್ನು ನೀವೇ ಸರಿಪಡಿಸಿಕೊಳ್ಳುವಾಗ ಸಿಗುವ ಆತ್ಮವಿಶ್ವಾಸವೇ ಬೇರೆ!



ಎರಡನೇ ದಿನ, ನಾವು ತೆಹ್ರಿ ಅಣೆಕಟ್ಟು ಮತ್ತು ಸರೋವರಕ್ಕೆ ಸವಾರಿ ಮಾಡಿದೆವು – ಮತ್ತು ಕನ್ವತಲ್ ನಮಗೆ ಪರ್ವತಗಳನ್ನು ನೀಡಿದ್ದರೆ, ತೆಹ್ರಿ ನಮಗೆ ನೀರನ್ನು ನೀಡಿತು. ನಾವು ಅಲ್ಲಿ ಬೈಕಿಂಗ್ ಫೋಟೋಗಳು ಮತ್ತು ವೀಡಿಯೊಗಳನ್ನು ತೆಗೆದುಕೊಳ್ಳಲು ಸಮಯ ಕಳೆದೆವು, ಇಡೀ ತಂಡವು ಆ ವಿಶಾಲವಾದ, ಹೊಳೆಯುವ ವಿಸ್ತಾರದ ನಡುವೆ ಸಾಲಾಗಿ ನಿಂತು, ನಗುತ್ತಾ, ಪೋಸ್ ನೀಡುತ್ತಾ ಮತ್ತು ಚಿಂತೆಯಿಲ್ಲದೆ ಸಮಯ ಕಳೆಯಿತು. ನಮ್ಮಲ್ಲಿ ಕೆಲವರು ವಾಟರ್ ಸ್ಪೋರ್ಟ್ಸ್ ಸಹ ಮಾಡಿದ್ದೇವೆ, ಇದು ಪ್ರವಾಸದ ಸಾಮಾನ್ಯ ಮನೋಭಾವದ ನೈಸರ್ಗಿಕ ವಿಸ್ತರಣೆಯಂತೆ ಭಾಸವಾಯಿತು: ಎಲ್ಲವನ್ನೂ ಪ್ರಯತ್ನಿಸಿ, ಯಾವುದಕ್ಕೂ ಹೆದರಬೇಡಿ, ಅಗತ್ಯವಿದ್ದರೆ ಒದ್ದೆಯಾಗಿರಿ.

ಮಧ್ಯಾಹ್ನದ ಬಿಸಿಲಿನಲ್ಲಿ ಶಿಬಿರಕ್ಕೆ ಹಿಂತಿರುಗುವುದು ಬೇರೆ ರೀತಿಯ ಪರೀಕ್ಷೆಯಾಗಿತ್ತು. ಸೂರ್ಯನು ನಿರಂತರವಾಗಿ ಹೊಳೆಯುತ್ತಿದ್ದನು, ರಸ್ತೆ ಮಿನುಗುತ್ತಿತ್ತು, ಮತ್ತು ದಾರಿಯಲ್ಲಿ ತಿಂದ ಮಾವಿನ ಐಸ್ ಕ್ರೀಮ್ ನಾನು ಇದುವರೆಗೆ ರುಚಿ ನೋಡಿದ ಅತ್ಯುತ್ತಮ ತಿಂಡಿಗಳಲ್ಲಿ ಇದು ಒಂದು.

**ಶಿಬಿರ, ಆಹಾರ ಮತ್ತು ಕ್ಯಾಂಪ್ ಫೈರ್**

ರಸ್ತೆಯೇ ಸಾಹಸವಾಗಿದ್ದರೆ, ಶಿಬಿರವೇ ಪ್ರವಾಸದ ಆತ್ಮವಾಗಿತ್ತು. ನಾವು ಪರಸ್ಪರ ಹತ್ತಿರ ಡೇರೆಗಳಲ್ಲಿ ಉಳಿದುಕೊಂಡೆವು. ಸಂಜೆ ಮನೆಯಲ್ಲಿ ತಯ್ಯಾರಾದ ಆಹಾರದ ಆಗಮನವಾಯಿತು–ಬೆಚ್ಚಗಿನ, ಯಾವುದೇ ಆತುರವಿಲ್ಲದ ಜವಾಬ್ದಾರಿ ರಹಿತ ಮುಸ್ಸಂಜೆ ಕ್ಯಾಂಪ್ ಫೈರ್ ಮತ್ತು ಹಾಡುಗಳೊಂದಿಗೆ ಕಳೆಯಿತು.

ಅನೇಕ ದೇಶಗಳಲ್ಲಿ ಸವಾರಿ ಮಾಡಿದ ಮಹಿಳೆಯರು ಮತ್ತು ಈ ವಾರ ಮೊದಲ ಬಾರಿ ಹೆದ್ದಾರಿಯಲ್ಲಿ ಸವಾರಿ ಮಾಡಿದ ಮಹಿಳೆಯರೊಂದಿಗೆ ನಾನು ಮಾತನಾಡಿದೆ. ಹಿಂದಿನ ಪ್ರವಾಸಗಳಲ್ಲಿ ಭೇಟಿಯಾದ ಸವಾರರೊಂದಿಗೆ ನಾನು ಮತ್ತೆ ಸಂಪರ್ಕ ಸಾಧಿಸಿದೆ –ನಾವು ಪೋಸ್ಟ್‌ಕಾರ್ಡ್‌ಗಳಂತೆ ನೆನಪುಗಳನ್ನು ವಿನಿಮಯ ಮಾಡಿಕೊಂಡೆವು, ಪರಸ್ಪರ ಪ್ರಯಾಣದ ಸಂಭಾಷಣೆಯು ಯಾವಾಗಲೂ ಸವಾರಿಯ ಬಗ್ಗೆಯೇ ಇತ್ತು. ಹತ್ತಿರದಲ್ಲಿ ತಪ್ಪಿದ ಸ್ಥಳಗಳು, ಅನಿರೀಕ್ಷಿತ ತಿರುವುಗಳು, ಮಂಜು ತುಂಬಾ ವೇಗವಾಗಿ ಬಂದ ಕ್ಷಣ, ಸೂರ್ಯ ಕಣಿವೆಯನ್ನು ಸರಿಯಾಗಿ ಅಪ್ಪಳಿಸಿದ ಸಮಯ. ಸವಾರರು ಈ ಬಗ್ಗೆಯೇ ಮಾತನಾಡುತ್ತಾರೆ.

**ನಾನು ಈ ಹಿಂದೆ ಇಷ್ಟಪಟ್ಟ ಸ್ಥಳ**

ನಾನು 12ನೇ ತರಗತಿಯಲ್ಲಿದ್ದಾಗ ಶಾಲೆ ಪ್ರವಾಸದ ಅಂಗವಾಗಿ ಕನ್ವತಾಲ್‌ಗೆ ಬಂದಿದ್ದೆ. ಅಂದಿನ ಆ ದಿನಗಳಿಗೂ ಇಂದಿನ ಈ ಬೈಕ್ ಪ್ರವಾಸಕ್ಕೂ ಬಹಳ ವ್ಯತ್ಯಾಸವಿದೆ. ಈಗ ನಾವು ತಂಗಿದ್ದ ಶಿಬಿರವು ನಾವು ಆಗ ತಂಗಿದ್ದ ಸ್ಥಳಕ್ಕೆ ಹತ್ತಿರದಲ್ಲಿತ್ತು. ಅಲ್ಲಿ ನಿಂತಾಗ, ನನಗೆ ಆ ಸ್ಥಳಕ್ಕೆ ಮತ್ತೆ ಹಿಂತಿರುಗಿದ ಒಂದು ವಿಚಿತ್ರವಾದ ಸಂತೋಷದ ಅನುಭವವಾಯಿತು. ಅಲ್ಲಿ ನನ್ನ ಬಾಲ್ಯ ಕಳೆದಿತ್ತು ಮತ್ತು ಈ ಸ್ಥಳ ಈಗಲೂ ಸುಂದರವಾಗಿದೆ, ಕಾಲದ ಪ್ರಭಾವಕ್ಕೆ ಅದು ಒಳಗಾಗಿಲ್ಲ. ಬೆಟ್ಟಗಳು ನಿಮ್ಮನ್ನು ನೆನಪಿಸಿಕೊಳ್ಳುವುದಿಲ್ಲ. ಅದಕ್ಕಾಗಿಯೇ ನಾವು ಮತ್ತೆ ಮತ್ತೆ ಬರುತ್ತೇವೆ.

**ನಮ್ಮೊಂದಿಗೆ ಏನು ಉಳಿಯುತ್ತದೆ**

ಇಂತಹ ಪ್ರವಾಸವು ನಮಗೆ ಏನು ನೀಡುತ್ತದೆ ಎಂದು ಜನರು ಕೇಳುತ್ತಾರೆ. ಆ ಪ್ರಶ್ನೆಗೆ ಉತ್ತರಿಸುವುದು ನನಗೆ ಕಷ್ಟಕರವೆನಿಸುತ್ತದೆ, ಏಕೆಂದರೆ ನೀವು ಅದರೊಂದಿಗೆ ಹೆಚ್ಚು ಸಮಯ ಕಳೆದಂತೆ ಉತ್ತರವೂ ಬದಲಾಗುತ್ತಲೇ ಇರುತ್ತದೆ. ಬೈಕ್ ಸವಾರಿಯ ನೆನಪುಗಳಂತೆ, ನಮ್ಮ ಜಾಕೆಟ್‌ಗಳು ಅಡ್ರಿನಾಲಿನ್, ದಣಿದ ಭಾವನೆ ಮತ್ತು ರಸ್ತೆಯ ಧೂಳನ್ನು ಸಂಗ್ರಹಿಸಿದವು. ಒಂದು ವಾರದ ನಂತರ, ನಾವು ನೀಲಿ ಪರ್ವತದ ಹೂವುಗಳು, ತಿರುವುಗಳು ಮತ್ತು ಕ್ಯಾಂಪ್ ಫೈರ್‌ನ ನೆನಪುಗಳನ್ನು ಫೋಟೋಗಳ ಮೂಲಕ ಹಂಚಿಕೊಂಡೆವು. ಇದು ಮಾತ್ರ ನಮ್ಮೊಂದಿಗೆ ಶಾಶ್ವತವಾಗಿ ಉಳಿಯುತ್ತದೆ. ಇದು ಮತ್ತೊಂದು ಸಾಹಸಕ್ಕೆ ಆತ್ಮವಿಶ್ವಾಸವನ್ನು ನೀಡುತ್ತದೆ.

ಗಾಯಗಳೊಂದಿಗೆ ಎದ್ದು ನಿಲ್ಲುವ ಚಾಂಪಿಯನ್ ಆಗುವುದು ನಿಜವಾದ ಗೆಲುವು. ಇಪ್ಪತ್ತೈದು ಮಹಿಳೆಯರು ಕನ್ವತಾಲ್‌ನಲ್ಲಿ ಸಂಪೂರ್ಣವಾಗಿ ಸ್ವತಂತ್ರವಾಗಿ ಬೈಕ್ ಓಡಿಸಿದರು. ಬೈಕ್ ಹ್ಯಾಂಡಲ್‌ಬಾರ್ ಹಿಡಿಯಲು ಸಿದ್ಧವಿರುವ ಯಾರು ಬೇಕಾದರೂ ಸೇರಬಹುದು. ಆದರೆ ಈ ಪ್ರವಾಸವು ನನಗೆ ಹೆಚ್ಚು ನಿರ್ದಿಷ್ಟವಾದದ್ದನ್ನು ನೀಡಿದೆ–ಆತ್ಮವಿಶ್ವಾಸ. ನಾನು ಈಗ ಕನ್ವತಾಲ್‌ನಿಂದ ಹಿಂತಿರುಗಿ ಬಂದಿದ್ದೇನೆ, ಮುಂದೆ ಏನಾಗಬಹುದು ಎಂಬುದರ ಕುರಿತು ಯೋಚಿಸುತ್ತಿದ್ದೇನೆ– ಸೋಲೋ ಟ್ರಿಪ್, ಹೆಚ್ಚು ಕಷ್ಟಕರವಾದ ಭೂಪ್ರದೇಶ, ಆಫ್–ರೋಡಿಂಗ್, ಗುರುತಿಸಲಾದ ಹೆದ್ದಾರಿಯ ಸೌಕರ್ಯದ ಹೊರಗೆ ಇರುವ ಮಾರ್ಗಗಳು. ನಾನು ಮತ್ತೆ ಒಂದೆರಡು ಬಾರಿ ಬೀಳುತ್ತೇನೆ, ಬಹುತೇಕ ಖಚಿತ ವಾಗಿ. ಇನ್ನೂ, ಬಹುಶಃ ಹೆಚ್ಚು. ಆದರೆ ಮತ್ತು ನಾನು ಮತ್ತೆ ಎದ್ದು ನಿಲ್ಲುತ್ತೇನೆ, ಗಾಯಗಳೊಂದಿಗೆ ಚಾಂಪಿಯನ್‌ನಂತೆ, ಅದೇ ನಿಜವಾದ ಗೆಲುವಾಗಿದೆ. ❑

ಲೇಖನ: **ರಮ್ಯಾ ಗುರುರಾಜ**

Delhi Karnataka Sangha Abhimata
May 2026, Vol. No.36, Issue No. 8, Price Rs.1/-
RNI Regn. No. 53405/91, DL-SW-01/4016/22-24
Date of Publication : May 8th / 9th, Posting Date : 10th / 11th, Total Pages-20 Monthly-Language Kannada, POSTED AT RMS DELHI-110006
Printed & Published by Radhakrishna, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press B-303, Okhla Industrial Area, Phase-I, New Delhi-110020, Tel: 40520770, Editor: Renuka Nidagundi

